
ಪುಸ್ತಕ ಪ್ರಪಂಚ

ಜುಲೈ-೧೯೯೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಕೃತಜ್ಞತೆಗಳು

ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ವತಿಯಿಂದ ರಾಜ್ಯದ ಎಲ್ಲಾ ಪಂಚಾಯಿತಿಗಳು ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯ ಪ್ರಕಟಣೆಗಳಾದ **'ಬೆಳಕು'** ವಾರಪತ್ರಿಕೆ ಹಾಗೂ **'ಪುಸ್ತಕ ಪ್ರಪಂಚ'** ಮಾಸಿಕಕ್ಕೆ ಆಜೀವ ಸದಸ್ಯತ್ವ ಪಡೆದು ಚಂದಾದಾರರಾಗುವಂತೆ ತಮ್ಮ ಪತ್ರ ಸಂಖ್ಯೆ ಗ್ರಾ. ಆಪ: 74: ತಾಪಸ: 96. ದಿನಾಂಕ 01–06–96ರ ಮೂಲಕ ಆದೇಶ ಹೊರಡಿಸಿರುತ್ತಾರೆ. ಪತ್ರಿಕೆಗಳ ಬೆಳವಣಿಗೆಗೆ ಈ ಮೂಲಕ ಪ್ರೋತ್ಸಾಹ ನೀಡಿದುದಕ್ಕಾಗಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಕೃತಜ್ಞತೆಗಳು.

—ಸಂಪಾದಕ ಮಂಡಳಿ

ಪುಸ್ತಕ ಪ್ರಪಂಚ
ಮಾಸಿಕ

ಸಂಪುಟ ೪೬ ಸಂಚಿಕೆ ೧೦

ಜುಲೈ-೧೯೯೬

ಮುಖ ಚಿತ್ರ :
ಕಂಸಾಳೆ ಮಹಾದೇವಯ್ಯ
ಕೃಪೆ: ಅರ್ಕೇಶ್

ಸಂಪಾದಕ ಮಂಡಳಿ:

ಪ್ರಧಾನ ಸಂಪಾದಕರು
ಡಾ|| ದೇ. ಜವರೇಗೌಡ

ಸಂಪಾದಕ
ಚಂದ್ರಶೇಖರಾರಾಧ್ಯ

ಸದಸ್ಯರು
ಬಿ. ಪಿ. ತಿಪ್ಪಯ್ಯ
ಅಧ್ಯಕ್ಷರು
ಹೆಚ್. ಎಸ್. ಮಹದೇವ ಪ್ರಸಾದ್
ಉಪಾಧ್ಯಕ್ಷರು
ವೈ. ಎನ್. ಶಂಕರೇಗೌಡ
ಖಜಾಂಚಿ
ಡಾ|| ಎಚ್. ಎಂ. ನಾಗರಾಜು
ಪ್ರಧಾನ ಕಾರ್ಯದರ್ಶಿ
ಜಿ. ಟಿ. ನಾರಾಯಣರಾವ್
ರಾ. ವೆಂ. ಶ್ರೀನಿವಾಸಮೂರ್ತಿ
ಡಾ|| ಪ್ರಧಾನ್ ಗುರುದತ್ತ
ಪರಮಶಿವ ನಡುಬೆಟ್ಟ
ಡಾ|| ಹಾ. ತಿ. ಕೃಷ್ಣೇಗೌಡ
ಸಿ. ನಾಗಣ್ಣ
ಲತಾ ರಾಜಶೇಖರ್

ಪರಿವಿಡಿ

PUSTAKA PRAPANCHA: Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. 6

ವಾರ್ಷಿಕ ಚಂದಾ : ರೂ. 60


ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. 400

ಸಂಸ್ಥೆಗೆ : ರೂ. 600

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-570 006



ಮುಖ್ಯಮಂತ್ರಿ ಶ್ರೀ ಜೆ. ಎಚ್. ಪಟೇಲ್

ನೂತನ ಮುಖ್ಯಮಂತ್ರಿಗಳಿಗೆ ಸ್ವಾಗತ

ಶ್ರೀ ಹರದನಹಳ್ಳಿ ದೊಡ್ಡೇಗೌಡ ದೇವೇಗೌಡರು ಪ್ರಧಾನಮಂತ್ರಿಯಾಗಿ ರಾಷ್ಟ್ರ ರಾಜಕಾರಣಕ್ಕೆ ಪದಾರ್ಪಣ ಮಾಡಿದನಂತರ, ಅವರು ಖಾಲಿ ಮಾಡಿದ ಮುಖ್ಯಮಂತ್ರಿ ಸ್ಥಾನಕ್ಕೆ ಒಂದೆರಡು ದಿನ ಅನಿಶ್ಚಯತೆ ತಲೆದೋರಿದರೂ, ಆ ಸ್ಥಾನಕ್ಕೆ ಅರ್ಹವ್ಯಕ್ತಿ ಸುಸೂತ್ರವಾಗಿ ಸುಗಮವಾಗಿ ಆಯ್ಕೆಯಾದದ್ದು ಈ ರಾಜ್ಯದಲ್ಲಿ ರಾಜಕಾರಣ ಪರಿಪಕ್ವ ವಾಗಿದೆಯೆಂಬುದರ ಸೂಚನೆಯಾಗಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹರಾದವರು ಈ ರಾಜ್ಯದಲ್ಲಿ ಹಲವರಿದ್ದಾರೆನ್ನುವುದು ಹೆಮ್ಮೆಯ ಸಂಗತಿ. ಅಂಥವರಲ್ಲಿ ಒಬ್ಬರನ್ನಾರಿಸುವಾಗ ಬಾಹುಳ್ಯ ಸಮಾಜದಲ್ಲಿ ತೊಡಕುಗಳೆದುರಾದರೂ, ಅವು ಅಪರಿಹಾರ್ಯವಲ್ಲ ವೆಂಬುದು ಇತ್ತೀಚಿನ ಆಯ್ಕೆಯಿಂದ ಸುಸ್ಪಷ್ಟವಾಗಿದೆ. ಶ್ರೀ ಜಯದೇವಪ್ಪ ಹಾಲಪ್ಪ ಪಟೇಲರು ಮುಖ್ಯಮಂತ್ರಿಯಾಗಿಯೂ, ಶ್ರೀ ಸಿದ್ಧರಾಮಯ್ಯನವರು ಉಪಮುಖ್ಯ ಮಂತ್ರಿಯಾಗಿಯೂ ಆಯ್ಕೆಗೊಂಡದ್ದು ನ್ಯಾಯೋಚಿತವಾಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ಪಟೇಲರು ಅನುಭವದಲ್ಲಿ, ವಿದ್ವತ್ತಿನಲ್ಲಿ, ವಿವೇಕದಲ್ಲಿ, ವಾಗ್ಮಿತೆಯಲ್ಲಿ, ವ್ಯವಹಾರ ಕೌಶಲ್ಯದಲ್ಲಿ, ಮೇಲಾಗಿ ವಯಸ್ಸಿನಲ್ಲಿ ಸ್ಪರ್ಧಾಳುಗಳ ಪೈಕಿ ಎಲ್ಲರಿಗಿಂತ ಜ್ಯೇಷ್ಠರೆನ್ನುವ ಮಾತಿನಲ್ಲಿ ಭಿನ್ನಾಭಿಪ್ರಾಯವಿಲ್ಲ. ಮಾತಿನ ಮೋಡಿಯಿಂದ, ವಿನೋದಶೀಲತೆ ಯಿಂದ ಎದುರಾಳಿಗಳ ಮನವನ್ನು ಗೆದ್ದುಕೊಳ್ಳುವ ಸಾಮರ್ಥ್ಯ ಅವರಿಗಿದೆ. ರಾಮ ಮನೋಹರ ಲೋಹಿಯಾ ಮತ್ತು ಶಾಂತವೇರಿ ಗೋಪಾಲಗೌಡರ ಗರಡಿಯಲ್ಲಿ ತಯಾರಾಗಿ, ಉತ್ತಮ ರಾಜಕೀಯ ಚಿಂತಕರಾಗಿ, ಸಮಾಜದ ಹಾಗೂ ದೇಶದ ಉರಿಯುವ ಸಮಸ್ಯೆಗಳನ್ನು ಚೂಲಮೂಲವಾಗಿ ಬಲ್ಲವರಾದ್ದರಿಂದ, ಸಮರ್ಥವಾಗಿ ಆಡಳಿತ ನಡಸ ಬಲ್ಲರು, ರಾಜ್ಯವನ್ನು ಅಭ್ಯುದಯದ ದಾರಿಯಲ್ಲಿ ಕೊಂಡೊಯ್ಯಬಲ್ಲರೆಂಬ ವಿಶ್ವಾಸ ಎಲ್ಲ ಕನ್ನಡಿಗರಲ್ಲಿದೆ. ಲೋಹಿಯಾ ವಾದದ ತತ್ತ್ವಗಳನ್ನವರು ಈಗ ಅನುಷ್ಠಾನ ಮಾಡುತ್ತಿಲ್ಲ ಎಂಬ ಯಾಸೆಮಾತು ಆಗೀಗ ಕೇಳಿಸುವುದುಂಟು. ಯಾವೊಂದು ಜೀವಂತ ತತ್ತ್ವವೂ ಕಾಲಾನುವರ್ತಿ. ತತ್ತ್ವವೇ ಬೇರೆ ಆಡಳಿತವೇ ಬೇರೆ ಎನ್ನುವ ವ್ಯವಹಾರ ಸಂಗತಿಯೂ ಮರೆಯುವಂಥದಲ್ಲ. ಯಾವಾತ ಮೂರು ಹೊತ್ತೂ ದೇಶಹಿತ ಕಾರ್ಯ ದಲ್ಲಿ ನಿರತವಾಗಿರುತ್ತಾನೆಯೋ, ದೀನದಲಿತರ ಕ್ಷೇಮಸಾಧನೆಯಲ್ಲಿ ತಲ್ಲೀನನಾಗಿರು ತ್ತಾನೆಯೋ ಅವನೇ ನಿಜವಾದ ಸಮಾಜವಾದಿ. ಪಟೇಲರು 'ಸುಲಭ ಗಮನಶೀಲ'ರೆಂಬ ಮಾತೂ ಇದೆ. ಹೆಗಲ ಮೇಲೆ ಗುರುತರವಾದ ಜವಾಬ್ದಾರಿ ಬಿದ್ದಾಗ, ಸೌಲಭ್ಯಾಕಾಂಕ್ಷೆ ಮತ್ತು ಸುಖಲೋಲುಪತೆ ತಾವಾಗಿಯೇ ಮರೆತುಹೋಗುತ್ತವೆಂಬುದು ಜಗತ್ತಿನ ನಾಯಕರ ಜೀವನವನ್ನು ನೋಡಿದವರಿಗೆ ತಿಳಿಯದಿರಲಾರದು.

ಅವರು ವಿರಾಮಲೋಲುಪರೂ ಅಲ್ಲ, ಬೇಜವಾಬ್ದಾರರೂ ಅಲ್ಲ ಎಂಬುದು ಅವರು ಮುಖ್ಯಮಂತ್ರಿಯಾಗಿ ಪ್ರತಿಜ್ಞಾ ಸ್ವೀಕಾರ ಮಾಡಿದ ತರುಣದಲ್ಲಿಯೇ ನಡೆದೊಂದು ಘಟನೆಯಿಂದ ಸುಸ್ಪಷ್ಟವಾಯಿತು. ಮಾಜಿ ರಾಷ್ಟ್ರಪತಿ ನೀಲಂ ಸಂಜೀವರೆಡ್ಡಿ

ಯವರು ಇದೇ (೧೯೯೬) ಜೂನ್ ಎರಡರಂದು ಕೀರಿಕೊಂಡಾಗ ರಜೆ ಘೋಷಿಸದೆ, ಸಂಪ್ರದಾಯವನ್ನು ಮುರಿದದ್ದು ಅವರ ಮನೋಧರ್ಮವನ್ನು ಸ್ಪಷ್ಟಪಡಿಸುತ್ತದೆ. ರೆಡ್ಡಿಯವರು ಕೀರಿಕೊಂಡಿದ್ದು ಭಾನುವಾರ. ರಜ ಇದ್ದೇ ಇದೆ. ಸತ್ತ ದಿನ ಬಿಟ್ಟು ಮಾರನೆಯ ದಿನ ರಜ ಕೊಡುವುದು ವಿಹಿತವಲ್ಲವೆಂದು ಅವರು ನುಡಿದದ್ದು ಅವರ ಪ್ರಾಮಾಣಿಕತೆಗೆ ನಿದರ್ಶನವಾಗಿದೆ. ಅಧಿಕಾರದ ಗಾದಿಯನ್ನೇರಿದ ದಿನವೇ ನಡೆದ ಈ ಘಟನೆ ಮುಂದಿನ ಅವರ ಆಡಳಿತಕ್ಕೆ ಶುಭ ಸೂಚನೆ ಎಂದೇ ತೋರುತ್ತದೆ.

ಗಜಗಾತ್ರದ ಸಂಪುಟ ರಚನೆಯ ಬಗ್ಗೆ ರಾಜ್ಯದಲ್ಲಿ ಅತೃಪ್ತಿಯೂ, ದೇಶದಲ್ಲಿ ಅಸಹನೆಯೂ ಹೊಗೆಯಾಡುತ್ತಿದೆ ಎಂಬುದನ್ನು ಪಟೇಲರೇ ಬಲ್ಲರು. ಆ ಬಗ್ಗೆ ಅವರಿಗೂ ಸಮಾಧಾನವಿಲ್ಲ. ಅದನ್ನು ಮುಚ್ಚುಮರೆಯಿಲ್ಲದೆ ಸಾರ್ವಜನಿಕವಾಗಿ ಹೇಳಿಕೊಂಡಿದ್ದಾರೆ. ಅವರ ಈ ಹೇಳಿಕೆಯಲ್ಲಿ ನಿಷ್ಕಾಪಟ್ಯವಿದೆ ಎಂಬುದಂತು ನಿಜ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಮಂತ್ರಿ ಪದವಿಯ ಬಗ್ಗೆ, ಅಧಿಕಾರದ ಬಗ್ಗೆ ಸಂಸತ್ ಅಥವಾ ಶಾಸನ ಸಭೆಯ ಸದಸ್ಯರು ಇಲ್ಲಿಯ ಹಾಗೆ ರಂಪಮಾಡುವುದಿಲ್ಲ. ಭರತ ಖಂಡದ ರಾಜಕಾರಣ ಪರಿಪಕ್ವವಾಗಿಲ್ಲವೆಂಬುದಕ್ಕೆ ಇಂಥ ಸಂದರ್ಭವೂ ಸಾಕ್ಷಿಯಾಗಿದೆ. ಈ ವಿಷಯದಲ್ಲಿ ಪಟೇಲರು ಹಗ್ಗದ ಮೇಲೆ ನಡೆಯಬೇಕಾಯಿತೆನ್ನುವುದು ಸಹಾನುಭೂತಿಯ ಸಂಗತಿಯಾಗಿದೆ.

ಅಭಿವೃದ್ಧಿ ಮುಖವಾಗಿರುವ ದೇಶದಲ್ಲಿ ಮಾಡಬೇಕಾದ ಕೆಲಸ ಅಗಾಧವಾಗಿದೆ, ನಿಜ. ಯಾವ ಖಾತೆಯ ಮಂತ್ರಿಯಾದರೂ, ಅವನು ಮನಸ್ಸು ಮಾಡಿದ್ದಾದರೆ, ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾದರೆ, ತನ್ನ ಖಾತೆಯಲ್ಲಿ ಅಪೂರ್ವ ಸಿದ್ಧಿಯನ್ನು ಸಾಧಿಸಿ, ತನ್ನ ವರ್ಚಸ್ಸನ್ನು ತೋರಿಸಬಹುದು; ತನ್ನ ಅಸ್ತಿತ್ವವನ್ನು ಸಾರ್ಥಕಪಡಿಸಿಕೊಳ್ಳಬಹುದು. ನಿದರ್ಶನಾರ್ಥವಾಗಿ ವಯಸ್ಕರ ಶಿಕ್ಷಣ ಇಲಾಖೆಯನ್ನೇ ತೆಗೆದುಕೊಳ್ಳಬಹುದು. ನೀರಾವರಿ ಇಲಾಖೆ ಎಷ್ಟು ಮುಖ್ಯವೋ ಇದೂ ಅಷ್ಟೇ ಮುಖ್ಯ. ಒಂದು ಅನ್ನ ಸಂಪಾದನೆಗೆ ಮಾರ್ಗ ಕಲ್ಪಿಸಿದರೆ, ಮತ್ತೊಂದು ಜ್ಞಾನ ಸಾಧನೆಗೆ ದಾರಿ ಸರಿಮಾಡುತ್ತದೆ. ಜ್ಞಾನವೇ ಜೀವನದ ಪರಮಾರ್ಥ ಮತ್ತು ಪರಮಶಕ್ತಿ ಎನ್ನುವುದನ್ನು ಮರೆಯಲಾಗದು.

ಈಗ ಹೇಗೂ ಕೇಂದ್ರದಲ್ಲಿ ಕನ್ನಡಿಗರೊಬ್ಬರು ಪ್ರಧಾನಿಯಾಗಿದ್ದಾರೆ. ಇಂಥದೊಂದು ಅವಕಾಶ ಶತಮಾನಕ್ಕೊಮ್ಮೆ ಕನ್ನಡಿಗರಿಗೊದಗಬಹುದು. ಅವಕಾಶವೊದಗಿದಾಗ ಅದರ ಪ್ರಯೋಜನವನ್ನು ನಮ್ಮ ಮಂತ್ರಿಗಳು ರಾಜ್ಯದ ಅಭ್ಯುದಯಕ್ಕಾಗಿ ಬಳಸಿಕೊಳ್ಳಬಹುದು. ಹಾಗೆ ಬಳಸಿಕೊಂಡಿದ್ದಾದರೆ 'ಗಜಗಾತ್ರ'ದ ಬಗೆಗಿನ ಭೀತಿ ಸಂದೇಹಗಳು ಜನಮನಸ್ಸಿನಿಂದ ಮರೆಯಾಗಬಹುದು. ಅವನ್ನು ಮರೆಸುವಂತೆ ಪ್ರಯತ್ನಿಸಬೇಕಾದ್ದು, ನಾಯಕತ್ವವನ್ನು ನಿಷ್ಠೆಯಿಂದ ಬೆಂಬಲಿಸಬೇಕಾದ್ದು ಮಂತ್ರಿಗಳ ಕರ್ತವ್ಯವಾಗಬೇಕಾಗಿದೆ.

ಇಂದು ಉದಯವಾಗಿರುವ ಸಂಯುಕ್ತರಂಗ ಭರತಖಂಡದ ರಾಜಕೀಯ ಸ್ಥಿತ್ಯಂತರಕ್ಕೆ ನಾಂದಿಯಾಗಿದೆ; ರಾಷ್ಟ್ರರಾಜ್ಯಗಳ ಸಂಬಂಧವನ್ನು ಪುನರ್ಪರಿಶೀಲನೆ

ಮಾಡಬೇಕೆಂಬುದಕ್ಕೆ ಸೂಚನೆಯಾಗಿದೆ. ಅಂಗಗಳ ಬಲವರ್ಧನೆಯಿಂದ ಮಾತ್ರ ಅಂಗಿಯು ಬಲವರ್ಧನೆ ಸಾಧ್ಯ ಸಹಜವೆಂಬ ನಿಸರ್ಗಧರ್ಮದ ಪ್ರಜ್ಞೆ ನಿಧಾನವಾಗಿ ಯಾದರೂ ಜನಮನದಲ್ಲಿ ರೂಪಿಕ್ಕುತ್ತಿದೆ. ವಿಕೇಂದ್ರೀಕರಣ ಮತ್ತು ರಾಜ್ಯಗಳ ಸ್ವಾಯತ್ತತೆಯೇ ಈ ದೇಶದ ರಾಜಕೀಯ ಧರ್ಮವಾಗಿರಬೇಕೆಂಬುದನ್ನು ಇಲ್ಲಿಯ ಬಾಹುಳ್ಯ ಸಮಾಜ ಮಾತ್ರವಲ್ಲ, ಇತ್ತೀಚಿನ ಘಟನೆಗಳೂ ಘೋಷಿಸುತ್ತಿವೆ. ಅಮೆರಿಕೆಯ ರಾಜ್ಯಾಂಗದ ಕೆಲವಂಶಗಳನ್ನಾದರೂ ನಮ್ಮ ರಾಷ್ಟ್ರದ ಜಾಯಮಾನಕ್ಕೆ ಹೊಂದಿಕೆಯಾಗುವಂತೆ ಸ್ವೀಕರಿಸುವುದಾದರೆ, ರಾಷ್ಟ್ರದ ಭವಿಷ್ಯ ಆಶಾದಾಯಕವಾಗ ಬಲ್ಲುದೆಂದು ಹೇಳಬಹುದಾಗಿದೆ. ಈ ದಿಶೆಯಲ್ಲಿ ರಾಜಕೀಯ ತತ್ತ್ವಪರಿಣತರೂ, ಅನುಭವಸಂಪನ್ನರೂ, ದೇಶಕ್ಷೇಮ ಹಿತೈಷಿಗಳೂ ಆದ ಶ್ರೀ ಪಟೇಲರು ಹೆಚ್ಚು ಶ್ರಮವಹಿಸಿಯಾರೆಂದು ನಂಬಬಹುದಾಗಿದೆ. ಅವರ ಆಡಳಿತ ಯಶಸ್ವಿಯಾಗಿ ನಿರ್ವಿಘ್ನ ವಾಗಿ ನಡೆಯಲೆಂದು ಪುಸ್ತಕ ಪ್ರಪಂಚ ಹೃತ್ಪೂರ್ವಕವಾಗಿ ಹಾರೈಸುತ್ತದೆ.

ದೆಹಲಿಯ ಸಂಸತ್ಭವನದಲ್ಲಿ ಮೊತ್ತಮೊದಲು ಕನ್ನಡದ ಬಾವುಟವನ್ನು ಹಾರಿಸಿ, ಇತಿಹಾಸವನ್ನು ನಿರ್ಮಿಸಿದ ಕೀರ್ತಿ ಶ್ರೀ ಪಟೇಲರಿಗೆ ಸಲ್ಲಬೇಕಾಗಿದೆ. ಒಮ್ಮೆ ಮೇಲಕ್ಕೆ ತ್ತಿದ ಬಾವುಟವನ್ನವರು ಕೆಳಗಿಳಿಸಲಾರರೆಂದು ಕನ್ನಡಿಗರು ಧೈರ್ಯದಿಂದಿರಬಹುದಾಗಿದೆ.

ದೇವೇಗೌಡರು ಸಮರ್ಥ ಪ್ರಧಾನಿಯಾಗಲಿ

ಇದೇ ಜೂನ್ ತಿಂಗಳು ಹನ್ನೊಂದರಂದು ಶ್ರೀ ಹೆಚ್. ಡಿ. ದೇವೇಗೌಡರು ಸಂಸತ್ಸದನದಲ್ಲಿ ವಿಶ್ವಾಸ ಮತ ನಿರ್ಣಯವನ್ನು ಮಂಡಿಸಿ, ಹನ್ನೆರಡರಂದು ಅದ್ಭುತ ವಿಜಯವನ್ನು ಸಾಧಿಸಿದ್ದು, ಕರ್ನಾಟಕಕ್ಕೆ ಮಾತ್ರವಲ್ಲ ಸಮಗ್ರರಾಷ್ಟ್ರಕ್ಕೆ ಸಮಾ ಧಾನದ ಹಾಗೂ ಹೆಮ್ಮೆಯ ಸಂಗತಿಯಾಗಿದೆ. ಇಡೀ ರಾಷ್ಟ್ರದ ಇತಿಹಾಸದಲ್ಲಿಯೇ ಇದೊಂದು ತಿರುವಿನ ಪಾರಿಣಾಮಕ ಘಟನೆಯಾಗಿದ್ದು, ದೇವೇಗೌಡರು ಆ ಘಟನೆಯ ಕೇಂದ್ರನಾಯಕರಾಗಿದ್ದಾರೆ. ಸಂಯುಕ್ತ ವ್ಯವಸ್ಥೆಯೇ ಈ ದೇಶದ ಜಾಯಮಾನ ಕ್ಕೊಗ್ಗುವ ರಾಜಕೀಯ ಸಂಘಟನೆಯೆಂಬುದನ್ನು ಗೌಡರು ತಮ್ಮ ಭಾಷಣದಲ್ಲಿ ಒತ್ತಿ ಹೇಳಿರುವುದು ಸಮಂಜಸವಾಗಿದೆ. ತಮ್ಮ ರಾಜಕೀಯ ಜೀವನದ ಬಹುಕಾಲವನ್ನು ರಾಜ್ಯರಾಜಕೀಯದ ಸೀಮಿತವಲಯದಲ್ಲಿ ಅತ್ಯಂತ ಯಶಸ್ವಿಯಾಗಿ ಕಳೆದು, ಒಮ್ಮೆಂದೊಮ್ಮೆಗೆ ರಾಷ್ಟ್ರ ರಾಜಕೀಯದ ವಿಶಾಲ ಕ್ಷೇತ್ರಕ್ಕೆ ಹಾರಿ, ಕೇವಲ ಹನ್ನೆರಡು ದಿನಗಳಲ್ಲಿ ತಮ್ಮ ನಡೆನುಡಿಗಳಿಂದ, ವಿನಯದಿಂದ, ಬುದ್ಧಿಮತ್ತೆಯಿಂದ, ದಿಟ್ಟತನದಿಂದ ಸಂಸತ್ಸದಸ್ಯರ ಮಾತ್ರವಲ್ಲ, ಇಡೀ ದೇಶದ ಮನಸ್ಸನ್ನು ಗೆದ್ದುಕೊಂಡಿರುವುದು ಸಮಾಧಾನದ ಮತ್ತು ಸಂತೋಷದ ಸಂಗತಿಯಾಗಿದೆ. ಅವರು ವಿಶ್ವಾಸಮತ ನಿರ್ಣಯ ವನ್ನು ಮಂಡಿಸುವಾಗಲೇ ಅದನ್ನು ಮಂಡಿಸಿದ ರೀತಿ, ನಿಂತ ನಿಲವು, ವ್ಯಕ್ತಪಡಿಸಿದ ತಾತ್ತ್ವಿಕಧೋರಣೆ, ನಿಸ್ಸಂದಿಗ್ಧವಾದ ಖಡಾಖಂಡಿತವಾದ ಅಭಿಪ್ರಾಯ ಘೋಷಣೆ, ನುಣುಚಿನ ಅಥವಾ ಜಾರಿಕೆಯ ಮಾತುಗಳ ಅಭಾವ, ಎಲ್ಲಕ್ಕಿಂತ ಮಿಗಿಲಾಗಿ ಆತ್ಮ

ಪ್ರತ್ಯಯದಿಂದ ಮಾತ್ರ ಲಬ್ಧವಾಗಬಹುದಾದ ದೃಢನಿರ್ಧಾರ ಮತ್ತು ಧೈರ್ಯೋತ್ಸಾಹಗಳು ಅವರು ರಾಷ್ಟ್ರನಾಯಕರೆಂಬ ನೆಚ್ಚಿಗೆಯನ್ನು ಜನಮನದಲ್ಲಿ ಮೂಡಿಸಿವೆ.

ಆ ಸಂದರ್ಭದಲ್ಲಿ ಅವರು ಹೇಳಿದ್ದೇನು? 'ನಾನು ಮಣ್ಣಿನಮಗ, ನನ್ನ ಮಾತು ನೇರ, ಸರಳ; ನನ್ನ ನಡೆಯೂ ಅಷ್ಟೇ. ನಾನೆಂದೂ ಸತ್ಯವನ್ನು ಮುಚ್ಚುವುದಿಲ್ಲ. ನಾನು ಮುಖ್ಯಮಂತ್ರಿಯಾಗಿದ್ದಾಗ ಹವಾಲಾದಂಥ ಹಗರಣಕ್ಕೆ ಅವಕಾಶಕೊಟ್ಟಿಲ್ಲ, ಮುಂದೆಯೂ ಅದಕ್ಕೆ ಅವಕಾಶವಿರಲಾರದು. ಹಳೆಯ ರಾಜಕೀಯ ವ್ಯವಸ್ಥೆ ಹೋಗಬೇಕೆಂಬುದು ರಾಷ್ಟ್ರದ ಜನರ ನಿರೀಕ್ಷೆ. ಆದ್ದರಿಂದಲೇ ಯಾವ ಪಕ್ಷಕ್ಕೂ ಬಹುಮತ ಬಂದಿಲ್ಲ. ಸಂಯುಕ್ತ ವ್ಯವಸ್ಥೆ ದೇಶಕ್ಕೀಗ ಬೇಕಾಗಿದೆ. ಜನಮನಸ್ಸನ್ನರಿತೇ ಹದಿಮೂರು ಪಕ್ಷಗಳು ಒಂದುಗೂಡಿ, ಕೇಂದ್ರ ಸರ್ಕಾರವನ್ನು ರಚಿಸಲು ಅನುವು ಮಾಡಿಕೊಟ್ಟಿವೆ. ಕಾಂಗ್ರೆಸ್ಸೂ ಈ ವ್ಯವಸ್ಥೆಗೆ ಬದ್ಧವಾಗಿದೆ. ದೀನದಲಿತರಿಗೆ, ಅಲ್ಪಸಂಖ್ಯಾತರಿಗೆ ನ್ಯಾಯವನ್ನು ಸಲ್ಲಿಸುವುದೆಂದು ನಾನು ಪಣತೊಟ್ಟಿದ್ದೇನೆ. ಇದರಿಂದ ನಾನೆಂದೂ ವಿಚಲಿತನಾಗಲಾರೆ. ಭ್ರಷ್ಟಾಚಾರ ಎಲ್ಲಿಲ್ಲ? ಅದನ್ನು ತಡೆಗಟ್ಟಲು ನಾನು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇನೆಂದು ವಚನ ನೀಡುತ್ತೇನೆ. ಈ ಸದನದಲ್ಲಿ ಮತ್ತು ಹೊರಗಡೆ ನನಗಿಂತ ಬುದ್ಧಿಯಲ್ಲಿ, ಅನುಭವದಲ್ಲಿ, ವಿದ್ಯೆಯಲ್ಲಿ ಶ್ರೇಷ್ಠರಾದವರಿದ್ದಾರೆ. ಅವರೆಲ್ಲರ ಸಹಾಯ ಸಹಕಾರಗಳೊಂದಿಗೆ ನಾನು ಐದುವರ್ಷ ಸರ್ಕಾರ ನಡಸಲು ಸಿದ್ಧನಾಗಿದ್ದೇನೆ.'

ಎರಡು ದಿನ ಸಭೆಯಲ್ಲಿ ಬಿಸಿಬಿಸಿ ಚರ್ಚೆ ನಡೆಯಿತು. ಗದ್ದಲವಾಯಿತು. ಕೋಲಾಹಲವಾಯಿತು, ಆದರೆ ಪ್ರಧಾನಿಗಳು ತಲೆಕೆಡಿಸಿಕೊಳ್ಳಲಿಲ್ಲ; ಉದ್ವಿಗ್ನರಾಗಲಿಲ್ಲ; ಸಮತೋಲನವನ್ನು ಕಳೆದುಕೊಳ್ಳಲಿಲ್ಲ. ವಿರೋಧಿಗಳೆತ್ತಿದ ಎಲ್ಲ ಆಕ್ಷೇಪಗಳಿಗೆ ತಾಳ್ಮೆಯಿಂದ, ಆತ್ಮವಿಶ್ವಾಸದಿಂದ, ಸಮರ್ಥವಾಗಿ, ಸದೃಢವಾಗಿ ವಾದೀಭಸಿಂಹರಂತೆ ಉತ್ತರ ನೀಡಿದರು. ನಡುವೆ ಭಾಷೆಯ ಪ್ರಸ್ತಾಪ ಬಂದಾಗ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡವಲ್ಲ; ಅನುಭವ ಸಂಪತ್ತು, ವ್ಯವಹಾರ ಕೌಶಲ, ದೀನದಲಿತರ ಬಗೆಗಿನ ಕಾಳಜಿ, ಆಡಳಿತ ಚಮತ್ಕಾರ ಮತ್ತು ಬೌದ್ಧಿಕ ಪರಿಶ್ರಮ ಸರ್ಕಾರ ನಿರ್ವಹಣೆಗೆಬೇಕಾದ ಮುಖ್ಯ ಅಗತ್ಯಗಳೆಂಬುದನ್ನು ಸಹ ಅವರು ಸಭೆಗೆ ಮನಗಾಣಿಸಿದರು. ದೇಶದ ತೊಂಬತ್ತುಕೋಟಿ ಜನರ ಕ್ಷೇಮ ಚಿಂತನೆಯೇ ತಮ್ಮ ಪ್ರತಿನಿತ್ಯದ ಕಾಯಕವೆಂದು ನುಡಿದರು. ತಮ್ಮ ಗೃಹ ಕಚೇರಿಗೆ ನಿರ್ದಿಷ್ಟಾವಧಿಯಲ್ಲಿ ಪ್ರತಿಯೊಬ್ಬರಿಗೂ ಮುಕ್ತ ಪ್ರವೇಶಾವಕಾಶವಿರುತ್ತದೆಂದೂ, ಪಕ್ಷಭೇದವಿಲ್ಲದೆ ಎಲ್ಲ ನಾಯಕರ ವಿವೇಕವನ್ನು ಬಳಸಿಕೊಂಡು ಆಡಳಿತ ನಡಸುವುದಾಗಿಯೂ ಅವರು ತಿಳಿಸಿದರು. ಅವರ ಒಂದು ಗಂಟೆಯ ಭಾಷಣದುದ್ದಕ್ಕೂ ಅವರ ಗಟ್ಟಿತನ ಎದ್ದು ಕಾಣುತ್ತಿತ್ತು. ಲೇಸೆನಿಸಿಕೊಂಡು ಐದು ವರ್ಷವಲ್ಲ ಒಂದು ವರ್ಷ ಆಡಳಿತ ನಡಸಿದರೂ ಪುಣ್ಯವೇ. ಕನ್ನಡ ಮತ್ತು ಕರ್ನಾಟಕದ ಕೀರ್ತಿ ದೇವೇಗೌಡರಿಂದ ದಿಗ್ದಿಗಂತಗಳಲ್ಲಿ ಬೆಳಗುತ್ತದೆಂದು ಆಶಿಸಬಹುದಾಗಿದೆ. ಅವರ ಅಧಿಕಾರಾವಧಿಯಲ್ಲಿ ದೇಶ ಜಗತ್ತಿನ ಪ್ರಬುದ್ಧ ಪ್ರಬಲ ರಾಷ್ಟ್ರಗಳಿಗೆ ಹೆಗಲೆಣೆಯಾಗಿ ನಿಲ್ಲುವಂತಾಗಲೆಂದು ಹಾರೈಸೋಣ.

ದೇಜಗೌ

ಬೀಸು ಕಂಸಾಳೆ

ಡಾ|| ಅಂಬಳಿಕೆ ಹಿರಿಯಣ್ಣ

ಬಿಸಲಾದ ವಿದ್ಯಮಾನಗಳಿಂದಾಗಿ, ಇತ್ತೀಚಿನ ದಿನಗಳಲ್ಲಿ ಬಹುಪಾಲು ಜನಪದ ಕಲೆಗಳು ಸೂಕ್ತ ಪ್ರೋತ್ಸಾಹವಿಲ್ಲದೆ ಮೂಲೆಗುಂಪಾಗುತ್ತಿವೆ. ಹೀಗಿದ್ದೂ ಅಲ್ಲೊಬ್ಬ ಇಲ್ಲೊಬ್ಬ ಕಲೋಪಾಸಕರ ಪರಿಶ್ರಮದಿಂದ ಕೆಲವಾದರೂ ಕಲೆಗಳು ಉಳಿದು ಬಂದಿವೆ. ಹೀಗೆ ಉಳಿದು ಬಂದಿರುವ ಕಲೆಗಳಲ್ಲಿ ಮಲೆಯ ಮಾದೇಶ್ವರನ ಭಕ್ತರಾದ ದೇವರ ಗುಡ್ಡರ ಬೀಸು ಕಂಸಾಳೆಯೂ ಒಂದು.

'ಕಂಸಾಳೆ' ದೇವರ ಗುಡ್ಡರು ಕೈಯಲ್ಲಿ ಹಿಡಿಯುವ ಒಂದು ಬಗೆಯ ವಾದ್ಯ ವಿಶೇಷ. ಅದು ಭಿಕ್ಷಾಪಾತ್ರೆಯಂತಿರುವ ಮಿಶ್ರ ಲೋಹದ ಒಂದು ಬಟ್ಟಲು. ದಾರದ ಕುಚ್ಚು ಕಟ್ಟಿದ ಅದನ್ನು ಎಡಗೈಯಲ್ಲಿ ಹಿಡಿದಿದ್ದರೆ ಬಲಗೈಯಲ್ಲಿ ಮಟ್ಟಸವಾದ ತಾಳವಿರುತ್ತದೆ. ಮುಚ್ಚಳದ ನಡುವಿನ ಹೊರಭಾಗ ಉಬ್ಬಿರುತ್ತದೆ. ಆ ಉಬ್ಬಿನ ರಂಧ್ರದಿಂದ ಬಿಗಿದ ನೀಳವಾದ ದಾರವಿರುತ್ತದೆ. ಅದು ಗೊಂಡೆಗಳಿಂದ ಅಲಂಕೃತವಾಗಿ ಬಲಗೈ ಮೇಲಿಂದ ಇಳಿ ಬಿದ್ದಿರುತ್ತದೆ.

ಕಂಸಾಳೆ ಪ್ರದರ್ಶನದಲ್ಲಿ ಬೀಸು ಕಂಸಾಳೆ ಕುಣಿತಕ್ಕೆ ವಿಶೇಷ ಮಹತ್ವವಿದೆ. ಚಮತ್ಕಾರ, ಶ್ರಮ ಎರಡೂ ಒಟ್ಟಿಗೆ ಸೇರಿ ಅಭಿವ್ಯಕ್ತವಾಗುವ ಈ ಕಲಾಪ್ರದರ್ಶನಕ್ಕೆ ನಾಲ್ವರು ಬೇಕು. ಒಬ್ಬಾತ ಮಧ್ಯೆ ಇದ್ದು ತಾಳಕ್ಕೆ ತಕ್ಕಂತೆ ತಲೆಯ ಮೇಲೆ ಬೆನ್ನ ಹಿಂದೆ, ಕಾಲು ಕೆಳಗೆ ಕುಳಿತು ನಿಂತು ಬಾಗಿ ಬಳುಕಿ ಉರುಳಾಡಿ ಸುತ್ತ ನಿಂತ ಮೂವರಿಗೆ ತಾಳಗಳನ್ನು ಕೊಡುತ್ತ ನಿರ್ದಿಷ್ಟ ಲಯದಲ್ಲಿ ಬೀಸುಕಂಸಾಳೆಯನ್ನು ಪ್ರದರ್ಶಿಸುತ್ತಾನೆ. ಹೀಗೆ ಆರಂಭಗೊಳ್ಳುವ ಪ್ರದರ್ಶನ ಪರಾಕಾಷ್ಠೆಗೇರಿದಾಗ ನಾಲ್ಕು ಜೋಡಿ ಕಂಸಾಳೆಗಳ ತಾಳದ ಕಂಚಿನ ಸ್ವರ, ಮಿಂಚಿನ ವೇಗದ ಕೈಚಳಕ ನೋಡುಗರನ್ನು ಮೂಕವಿಸ್ಮಯರನ್ನಾಗಿ ಮಾಡುತ್ತದೆ. ಎಷ್ಟೇ ಚುರುಕಾಗಿ ಕಲಾಪ್ರದರ್ಶನ ಸಾಗಿದರೂ ಎಲ್ಲೂ ತಾಳತಪ್ಪದಂತೆ ಎಚ್ಚರವಹಿಸುವ ಕಲಾವಿದರ ಪರಿಪೂರ್ಣ ಕುಶಲತೆ ಸೋಜಿಗಪಡುವಂಥದು. ಕಲಾವಿದರು ಕಂಸಾಳೆಗೆ ಕಟ್ಟಿದ ದಾರದ ತುದಿಯನ್ನು ಹಿಡಿದುಕೊಂಡು ಬೀಸಿ ತಾಳ ಹಾಕುವುದರಿಂದ ಇದು 'ಬೀಸು ಕಂಸಾಳೆ' ಯಾಗಿದೆ.

ಬೀಸು ಕಂಸಾಳೆ ಕುಣಿತ ಇಂದು ಒಂದು ಅಂತಾರಾಷ್ಟ್ರೀಯ ಕಲೆಯಾಗಿ ಜನಪ್ರಿಯತೆಯನ್ನು ಗಳಿಸಿದೆ. ಈ ಕಲೆಗೆ ಜೀವಕಳೆ ತುಂಬಿ

ಮೊದಲಿನ ಖ್ಯಾತಿಯನ್ನು ದೊರಕಿಸಿಕೊಟ್ಟ ಕೀರ್ತಿ ದಿವಂಗತ ಕಂಸಾಳೆ ಮಹಾದೇವಯ್ಯನವರಿಗೆ ಸಲ್ಲುತ್ತದೆ. ಅತ್ಯಂತ ಸಮರ್ಥ ರೀತಿಯಲ್ಲಿ ಬೀಸುಕಂಸಾಳೆ ನೃತ್ಯಪ್ರದರ್ಶನ ನೀಡುತ್ತಿದ್ದ ಮಹಾದೇವಯ್ಯನವರು ನಮ್ಮ ನಾಡಿನ ಶ್ರೇಷ್ಠ ಕಲಾವಿದರಲ್ಲೊಬ್ಬರಾಗಿದ್ದರು. ಕಲಾಪ್ರದರ್ಶನದಲ್ಲಿ ಅವರು ತೋರುತ್ತಿದ್ದ ದೇಹದ ಒನಪು ವಯ್ಯಾರ ಆವೇಶ ನೋಡಿದ್ದ ಯಾರೂ ಅವರನ್ನು ಮತ್ತು ಅವರ ಕಲೆಯನ್ನು ಮರೆಯುವಂತಿಲ್ಲ. ಮಹಾದೇವಯ್ಯ ಇಂದು ನಮ್ಮ ನಡುವೆ ಇಲ್ಲವಾದರೂ ಅವರ ಶಿಷ್ಯಕೋಟಿಯ ರೂಪದಲ್ಲಿ ಅವರು ಬದುಕಿ ಉಳಿದಿದ್ದಾರೆ.



ಗಳಿಸುವುದಕ್ಕೆ ಬೇಕಾಗುವ ಯೋಗ್ಯತೆಗಿಂತಲೂ ಹೆಚ್ಚು ಯೋಗ್ಯತೆ ತ್ಯಾಗ ಮಾಡುವುದಕ್ಕೆ ಬೇಕು. ಆದ್ದರಿಂದ ಗಳಿಸುವುದನ್ನು ಕಲಿಯುವ ಮೊದಲು ತ್ಯಾಗ ಮಾಡುವುದನ್ನು ಕಲಿಯಿರಿ.

—ಗಾಂಧೀಜಿ

ಪ್ರಪಂಚದಲ್ಲಿ ಇತರರು ಹೇಳುವುದನ್ನು ಕೇಳಲರಿತವನು ಎಲ್ಲ ಕಡೆ ಬೇಗನೆ ಪ್ರಸಿದ್ಧಿ ಪಡೆಯುತ್ತಾನೆ ಮತ್ತು ನಂತರ ಅತನೇ ಹೇಳುವವರಿಗಿಂತಲೂ ಹೆಚ್ಚು ತಿಳಿದುಕೊಂಡವನಾಗುತ್ತಾನೆ.

—ಯೋಮನ್ಸ್

ಸ್ವೀಕರಣ, ಇಂಗ್ಲಿಷ್ ಭಾಷೆಯ ಹೆಗ್ಗಳಿಕೆ

ದೇಜಗೌ

ಸಾವಿರಾರು ನದಿಗಳ ಸೇರ್ಪಡೆಯಿಂದಾಗಿ ಸಾಗರದ ವಿಸ್ತಾರ ಗಾಂಭೀರ್ಯಗಭೀರತೆಗಳು ಅಸೀಮವೇನೊ ಎಂಬಂತೆ ತೋರುತ್ತವೆ. ಸುತ್ತಮುತ್ತ ದೂರ, ಬಹುದೂರ ಬೇರು ಕೊಂಬೆಗಳು ಹರಿದು, ಗಾಳಿ ಬಿಸಿಲು ಬೆಳಕು ಗೊಬ್ಬರಗಳನ್ನೂ ಹೀರಿಕೊಂಡಷ್ಟೂ ವೃಕ್ಷಗಳು ಸಾವಿರಾರು ಪಶುಪಕ್ಷಿ ಪ್ರಾಣಿಗಳಿಗೆ ಆಶ್ರಯನೀಡುವಂತಾಗುತ್ತವೆ. ಅಂತೆಯೇ ನಾನಾ ಜನಾಂಗಗಳಿಂದ, ದೇಶಗಳಿಂದ, ಸಮಾಜಗಳಿಂದ, ನಾಗರಿಕತೆ ಸಂಸ್ಕೃತಿಗಳಿಂದ, ವಿಭಿನ್ನ ಜನ ಜೀವನದಿಂದ ಪೌಷ್ಟಿಕಾಂಶಗಳನ್ನು ಹೀರಿಕೊಂಡಷ್ಟೂ ಭಾಷೆಗಳು ಸುಸಮೃದ್ಧವಾಗುತ್ತವೆ. ಸೂರ್ಯಮುಳುಗದ ಸಾಮ್ರಾಜ್ಯವೆಂದು ಹೆಸರು ಪಡೆದ ಇಂಗ್ಲೆಂಡು ಸಾಹಸ ವಿದ್ಯೆಯಲ್ಲಿ, ವೈಜ್ಞಾನಿಕ ಸಂಶೋಧನೆಯಲ್ಲಿ, ಕೈಗಾರಿಕಾಕ್ರಾಂತಿಯಲ್ಲಿ, ವ್ಯಾಪಾರವಾಣಿಜ್ಯಾದಿಗಳಲ್ಲಿ ಭೂಖಂಡಗಳ ಆಕ್ರಮಣದಲ್ಲಿ, ಸಂಪತ್ಸಂಗ್ರಹದಲ್ಲಿ, ಜ್ಞಾನೈಶ್ವರ್ಯ ಸಾಧನೆಯಲ್ಲಿ ಜಗತ್ತಿನಲ್ಲಿಯೇ ಅದ್ವಿತೀಯವೆಂದೇ ಸರ್ವವೇದ್ಯ. ಆಂಗ್ಲರ ಈ ವ್ಯಾಪಕ ಶಕ್ತಿಯಿಂದಾಗಿ ಆಂಗ್ಲ ಭಾಷೆ ಈ ಜಗತ್ತಿನ ಮಹತ್ವಪೂರ್ಣ ಭಾಷೆಯಾಗಿ ಪರಿಣಮಿಸಿದೆ. ಯಾವ ಭಾಷೆಗೂ ಇಲ್ಲದ ವಿಶಿಷ್ಟ ಗೌರವ ಅದಕ್ಕೆ ದೊರೆಯಲು ಅದರ ನಮ್ಯತೆ, ಹೊಂದಾಣಿಕೆಯ ಪ್ರವೃತ್ತಿ ಮತ್ತು ಸ್ವೀಕರಣ ಸಾಮರ್ಥ್ಯಗಳೇ ಕಾರಣ. ಅದನ್ನು ಹೇಗೆ ಬೇಕಾದರೂ ಬಗ್ಗಿಸಿಕೊಳ್ಳಬಹುದಾದ್ದರಿಂದ, ನಾದಿ ನಡಪಿ ಯಾವ ರೂಪಕ್ಕಾದರೂ ತಿರುಗಿಸಿಕೊಳ್ಳಬಹುದಾದ್ದರಿಂದ, ಜಪಾನಿ ಚೀನಿ ಹಿಂದೂಸ್ಥಾನಿ ಭಾಷೆಯ ಪದಗಳೊಡನೆ ಸಲೀಸಾಗಿ ಬಗ್ಗಿಕೊಳ್ಳಬಹುದಾದ್ದರಿಂದ, ಯಾವ ಭಾಷೆಯಿಂದಾದರೂ ಪದಗಳನ್ನು ಕೊಳ್ಳೆ ಹೊಡೆಯುವ ಶಕ್ತಿ ಅದಕ್ಕಿರುವುದರಿಂದ, ಸಂಪತ್ತಿನಲ್ಲಿ ಅದಕ್ಕೆಣೆಯಾದ ಭಾಷೆ ಮತ್ತೊಂದಿಲ್ಲ. ಈಗ ಆ ಭಾಷೆಯಲ್ಲಿ ಹತ್ತು ಲಕ್ಷ ಪದಗಳಿವೆಯೆಂದು ಲೆಕ್ಕಹಾಕಲಾಗಿದೆ. ಒಟ್ಟಿನಲ್ಲಿ ಆಂಗ್ಲಭಾಷೆಯ ಕತೆ ಜಗತ್ತಿನ ನಾನಾ ಭಾಷೆಗಳಿಂದ ಹೊಡೆದ ಕೊಳ್ಳೆಯ, ಮಾಡಿದ ಚೌರ್ಯದ ಕತೆಯೇ ಆಗಿದೆ.

ಫ್ರೆಂಚ್ ಜಗತ್ತಿನ ಮುಂದುವರಿದ ಭಾಷೆಗಳಲ್ಲೊಂದೆಂದು ಪರಿಗಣಿತವಾಗಿದ್ದರೂ, ಅದೊಂದು ಮಡಿವಂತ ಭಾಷೆ.

ಆಧಾರ: ರೀಡರ್ಸ್ ಡೈಜೆಸ್ಟ್, ಮೇ ೧೯೯೬.

ಪರಭಾಷೆಯಿಂದ ಸ್ವೀಕರಿಸಿದ ಪದಗಳು ತಮ್ಮ ಭಾಷೆಯನ್ನು ವಿಕಾರಗೊಳಿಸುವುದರಿಂದ ಅವುಗಳ ತಂಟೆಯೇ ಬೇಡವೆನ್ನುತ್ತಾರೆ ಆ ಜನ. ತಮ್ಮಲ್ಲಿಲ್ಲದ ವಿನೂತನ ಭಾವನೆ ಮತ್ತು ವಸ್ತುಗಳನ್ನು ಹೆಸರಿಸಬೇಕಾದ ಸಂದರ್ಭವೊದಗಿದಾಗ ತಮ್ಮ ಭಾಷೆಯಲ್ಲಿರುವ ಸಾಮಗ್ರಿಯಿಂದಲೇ ಹೊಸ ಪದಗಳನ್ನು ಟಂಕಿಸಿಕೊಳ್ಳುತ್ತಾರೆ. ಇಂಗ್ಲಿಷ್ ಅಥವಾ ಬೇರಾವುದೇ ಪರಭಾಷೆಯಿಂದ ನುಸುಳಿಕೊಳ್ಳಬಹುದಾದ ಪದಗಳನ್ನು ಸರ್ಕಾರವೇ ಬಹಿಷ್ಕರಿಸುತ್ತದೆ. ಜಂಬೊಜೆಟ್ಟಿಗೆ ಬದಲಾಗಿ ಗ್ರಾಸ್ ಪೋರ್ಟಿಯರ್ ಪದವನ್ನು ಆ ಭಾಷೆ ಸೃಷ್ಟಿಸಿಕೊಳ್ಳುತ್ತದೆ. ಹೀಗಾಗಿ ಫ್ರೆಂಚ್ ಭಾಷೆಯಲ್ಲಿ ಕೇವಲ ೭೫೦೦೦ ಪದಗಳಿವೆ.

ಸಾಮಾನ್ಯವಾಗಿ ಭಾಷೆ ಎಂದರೆ ಶಬ್ದ ವೈವಿಧ್ಯ ಮತ್ತು ಶಬ್ದ ಸಮುದಾಯವಷ್ಟೆ ಅದರ ಮೂಲ ಸರಕೇ ಶಬ್ದ. ತನ್ನ ಆವಶ್ಯಕತೆಯನ್ನು ಪೂರೈಸುವ ಶಬ್ದ ಯಾವ ಕಡೆಯಿಂದ ಬಂದರೂ ಇಂಗ್ಲಿಷ್ ಭಾಷೆ ಅದನ್ನು ಸ್ವಾಗತಿಸುತ್ತದೆ. ವಿಶಿಷ್ಟ ಸಾಂಸ್ಕೃತಿಕ ಸಂಗತಿ ಅಥವಾ ಸಂದರ್ಭಗಳನ್ನು ಅಭಿವ್ಯಕ್ತಗೊಳಿಸುವ ಸಾಮರ್ಥ್ಯ ಅಲ್ಲಲ್ಲಿಯ ಭಾಷೆಗಳ ಶಬ್ದಗಳಲ್ಲಿ ಮಾತ್ರ ಅಡಕಗೊಂಡಿರುತ್ತದೆ. ಮೂಲದ ವಾಸನೆ ಸೊಗಡುಗಳ ಗಂ ಮುರಿಯುವಂತೆ ಎಂಥ ಪಂಡಿತನಾದರೂ ಅವುಗಳನ್ನು ತನ್ನ ಭಾಷೆಯ ಶಬ್ದಗಳಲ್ಲಿ ಹೇಳುವುದು ಕಷ್ಟವಾಗುತ್ತದೆ. ಈ ಕಷ್ಟನಿವಾರಣೆಯ ಸುಲಭ ಮಾರ್ಗವೆಂದರೆ ತತ್ಸಮ ಪದ ಅಥವಾ ಅಪಭ್ರಂಶರೂಪದ ಪ್ರಯೋಗ. ಇಂಥ ಪ್ರಯೋಗದಿಂದ ಭಾಷೆಯ ಸ್ಥಿತಿ ಪರಿವರ್ತನ ಶಕ್ತಿ ಹೆಚ್ಚುತ್ತದೆ, ಕೆಚ್ಚು ಕಸುವುಗಳು ಬಹು ಮಡಿಯಾಗಿ ವೃದ್ಧಿಸುತ್ತವೆ. ಹೀಗಾಗಿಯೇ ಇಂಗ್ಲಿಷ್ ತ್ರಿವಿಕ್ರಮಸದೃಶವಾಗಿ ವಿಶ್ವಭಾಷೆಯಾಗಿ ವಿಗುರ್ಬಿಸಿದೆಯೆಂದು ಹೇಳಬಹುದು.

ಇಂಗ್ಲಿಷ್ ಭಾಷೆಯ ಚರಿತ್ರೆಯೇ ಒಂದು ರೋಮಾಂಚಕಾರಿಯಾದ ಕತೆ. ಹಳೆಯ ಅಥವಾ ಆಂಗ್ಲೊ-ಸ್ಯಾಕ್ಸನ್ ಇಂಗ್ಲೀಷೇ ಆಧುನಿಕ ಆಂಗ್ಲ ಭಾಷೆಯ ತಾಯಿ ಬೇರಾಗಿದೆ. ಆ ಭಾಷೆ ಸಾಮಾನ್ಯವಾಗಿ ನಮ್ಮ ವಚನ ಸಾಹಿತ್ಯದ ಭಾಷೆಯಂತೆ ಹಗುರ, ನೇರ, ಗರಿಗರಿ. ಹಿಟ್ಲರನಿಗೆ ವಿರೋಧವಾಗಿ ಜನರನ್ನು ಹುರಿದೆಬ್ಬಿಸಲು ಚರ್ಚಿಲ್ ಆ ಹಳೆಯ ಇಂಗ್ಲಿಷ್ ಭಾಷೆಯನ್ನೆ ಬಳಸುತ್ತಿದ್ದನಂತೆ ತನ್ನ ಭಾಷಣದಲ್ಲಿ. ಕ್ರಿ. ಪೂ. ೫೫ ರಲ್ಲಿ ಜೂಲಿಯಸ್ ಸೀಸರ್ ಬ್ರಿಟನ್ ಅನ್ನು ಗೆದ್ದುಕೊಂಡಾಗ ಇಂಗ್ಲಿಷ್ ಭಾಷೆಯೇ ಇರಲಿಲ್ಲ. ವೆಲ್ಷ್, ಗಾಲಿಕ್, ಬ್ರಿಟನ್ ಹೆಸರುಗಳಿಂದ ಇಂದಿಗೂ ಜೀವಂತವಾಗಿರುವ ಭಾಷೆಗಳು ಕೆಲ್ಟರಲ್ಲಿ ಬಳಕೆಯಾಗಿದ್ದವು. ಇಂಡೋ-ಯೂರೋಪಿಯನ್ ಭಾಷೆ ಈ ಭಾಷೆಗಳ ಮೂಲವಿರಬಹುದೆ ಎಂದು ಭಾಷಾವಿಜ್ಞಾನಿಗಳ ವಾದ ನಡೆದಿದೆ. ಕೆಲ್ಟರನಂತರ, ಇಂದು ಡೆನ್ಮಾರ್ಕ್ ಎಂದು ಕರೆಯುವ ಜಟ್‌ಲ್ಯಾಂಡಿನಿಂದ ಜ್ಯೂಟರೂ, ಜರ್ಮನಿಯಿಂದ ಸ್ಯಾಕ್ಸನ್ನರೂ ಆಂಗ್ಲರೂ ಬಂದು ಬ್ರಿಟನ್‌ನಲ್ಲಿ ನೆಲಸಿದಾಗ ಆಂಗ್ಲೊ-ಸ್ಯಾಕ್ಸನ್ ಸಮಾಜ ಜನ್ಮತಾಳುತ್ತದೆ.

ತದನಂತರ ಇಂಗ್ಲಿಷಿನ ಮೇಲೆ ಅದಮ್ಯ ಪ್ರಭಾವ ಬೀರಿದ ಶಕ್ತಿಯೆಂದರೆ ಕ್ರಿಸ್ತಧರ್ಮ. ಧರ್ಮಪ್ರಸಾರದ ನೆಪದಲ್ಲಿ ಗುರು

ಗಳು ಮಠ ಚರ್ಚುಗಳನ್ನು ಕಟ್ಟಿಸಿದ್ದಲ್ಲದೆ, ಸುಮಾರು ನಾನೂರು-ಐನೂರು ಗ್ರೀಕ್ ಮತ್ತು ಲ್ಯಾಟಿನ್ ಪದಗಳನ್ನು ಆಂಗ್ಲೋ-ಸ್ಯಾಕ್ಸನ್ ನಿಘಂಟಿಗೆ ಧಾರೆಯೆರೆಯುತ್ತಾರೆ. ಆ ಶಾಂತಿಪ್ರಿಯ ದ್ವೀಪಕ್ಕೆ ಸ್ಕ್ಯಾಂಡಿನೇವಿಯಾದ ವೈಕಿಂಗ್‌ರು ಧಾಳಿ ಮಾಡಿ, ಲೂಟಿ ಕೊಳ್ಳೆ ಹೊಡೆದದ್ದಲ್ಲದೆ, ಹಲವು ಪದಗಳನ್ನು ಇಂಗ್ಲಿಷ್ ನಿಘಂಟಿನೊಳಗೆ ಸೂಜಿಸುತ್ತಾರೆ. ಇದರಿಂದಾಗಿ ಇಂಗ್ಲಿಷ್ ಭಾಷೆಗೆ ಸೂಕ್ಷ್ಮತೆ ವೈವಿಧ್ಯವಿಸ್ತಾರಗಳು ಸಮನಿಸುತ್ತವೆ. ೧೦೬೬ರ ಹೊತ್ತಿಗೆ ನಾರ್ಮನ್‌ರು ಇಂಗ್ಲೆಂಡನ್ನು ಗೆದ್ದುಕೊಂಡಾಗ ಮತ್ತೊಂದು ಹೊಸ ಭಾಷಾ ಪ್ರವಾಹ ದೇಶದ ಮೇಲೆಲ್ಲ ಹರಿಯುತ್ತದೆ. ಶ್ರೀಮಂತರಿಗೆ ಫ್ರೆಂಚು, ಚರ್ಚುಗಳಿಗೆ ಲ್ಯಾಟಿನ್ ಮತ್ತು ಶ್ರೀ ಸಾಮಾನ್ಯರಿಗೆ ಇಂಗ್ಲಿಷ್ ಪ್ರಿಯವಾಗುತ್ತವೆ. ಮಠ ಕಾನೂನು ವಿಜ್ಞಾನ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ಲ್ಯಾಟಿನ್ ಫ್ರೆಂಚ್ ಭಾಷೆಗಳು ವಿಶೇಷವಾಗಿ ಬಳಕೆಗೊಳ್ಳುತ್ತವೆ.

೧೪೭೬ರಲ್ಲಿ ವಿಲಿಯಮ್ ಕ್ಯಾಕ್ಸ್‌ಟನ್ ಇಂಗ್ಲೆಂಡಿನಲ್ಲಿ ಮುದ್ರಣ ಯಂತ್ರವನ್ನು ಜೋಡಿಸಿದಾಗ ಜ್ಞಾನಕ್ಷೇತ್ರಕ್ಕೆ ನೂತನ ಕ್ರಾಂತಿಯೇ ಕಾಲಿಟ್ಟಂತಾಗುತ್ತದೆ. ಯೂರೋಪಿನ ಪುನರುಜ್ಜೀವನದ ಪರಿಣಾಮವಾಗಿ, ಇಂಗ್ಲಿಷ್ ಸಾಹಿತ್ಯ ಕ್ಷೇತ್ರದಲ್ಲಿ ಹೊಸ ಶಕೆಯೇ ಪ್ರಾರಂಭವಾಗುತ್ತದೆ. ಗ್ರೀಕ್ ಮತ್ತು ರೋಮನ್ ಭಾಷೆಗಳ ಮಹಾಕಾವ್ಯಗಳು ಇಂಗ್ಲಿಷಿಗೆ ಮಹಾಪೂರದೋಪಾದಿ ಹರಿದು ಬರುತ್ತವೆ; ಹೊಸ ಹೊಸ ಶಬ್ದಗಳ ಮೆಕ್ಕಲು ಮಣ್ಣಿನ ಜತೆಗೆ, ನೂತನಾಲೋಚನೆಗಳ ಸಾರವನ್ನು ಹೊತ್ತು ತರುತ್ತವೆ. ಅದೇ ಸಮಯದಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿಯೂ ಕ್ರಾಂತಿ ನಡೆದು, ಹೊಸ ಹೊಸ ಸಂಶೋಧನೆಗಳು ಬೆಳಕಿಗೆ ಬಂದು, ಭಾಷೆಗೂ ಹೊಸ ಆಯಾಮ ಲಭಿಸುತ್ತದೆ. ಹೊಸ ಆವಿಷ್ಕಾರಗಳ ವಿವರಣೆಗೆ ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳಿಂದಲೇ ಶಬ್ದಸಾಮಗ್ರಿಯನ್ನು ಆಮದು ಮಾಡಿಕೊಳ್ಳಬೇಕಾಗುತ್ತದೆ. ಆ ಕಾಲದಲ್ಲಿ ಸುಮಾರು ಹನ್ನೆರಡು ಸಾವಿರ ಪದಗಳು ಇಂಗ್ಲಿಷ್ ನಿಘಂಟಿಗೆ ಸೇರ್ಪಡೆಗೊಳ್ಳುತ್ತವೆ. ಇಂಗ್ಲಿಷಿನ ಅಡ್ಮಿರಲ್ ಪದವೇ ಅರೇಬಿಕ್ ಭಾಷೆಯ ಅಮಾರ್ ಅ' ಅಲೀ ಎಂಬ ಪದದಿಂದ ಬಂದದ್ದಾಗಿದೆ. ದೊರೆ ಜೇಮ್ಸ್‌ನ ಬೈಬಲ್ಲು ಮತ್ತು ಶೇಕ್ಸ್‌ಪಿಯರ್ ನಾಟಕಗಳು ಇಂಗ್ಲಿಷ್ ಭಾಷೆಗೆ ವಿನೂತನ ನಾಣ್ಯತೆಯನ್ನು ಕಮನೀಯತೆಯನ್ನು ಸಂಪುಷ್ಟಿಯನ್ನು ನೀಡುತ್ತವೆ. ಎಲಿಜಬೆತ್ ಚಕ್ರವರ್ತಿನಿ ಕಾಲದಲ್ಲಿ ನಾವಿಕರು ಹೊಸ ಭೂ ಶೋಧನೆಗೆ ಹೊರಟರಷ್ಟೆ. ಆ ಸಾಹಸಪ್ರಿಯರ ವೀರಯಾತ್ರೆಗಳಿಂದಾಗಿ ಹೊಸ ಅನುಭವಗಳು, ಹೊಸ ಸಂಗತಿಗಳು, ಹೊಸ ವಸ್ತುಗಳು, ಅವರಿಗೆ ಲಭಿಸುತ್ತವಷ್ಟೆ; ಅವುಗಳ ಜತೆಗೆ ಹೊಸ ಶಬ್ದಗಳು ಹರಿದು ಬರುತ್ತವೆ. ಆ ಭೂಶೋಧನೆಗಳ ಹಿಂದೆಯೇ ವಾಣಿಜ್ಯ ವ್ಯಾಪಾರಗಳೂ ಭೂಗ್ರಹಣಗಳೂ ಆರಂಭವಾಗಿ, ಆ ಜನ ಜಗತ್ತಿನ ಮೂಲೆಮೂಲೆಗಳಿಂದ ಭೌತಿಕ ಸಂಪತ್ತನ್ನೂ, ಭಾಷಾ ಸಂಪತ್ತನ್ನೂ ಕೊಳ್ಳೆ ಹೊಡೆಯುತ್ತಾರೆ. ಅಮೆರಿಕೆಯ ಕೆಂಪು ಇಂಡಿಯನ್ನರ ನೂರಾರು ಪದಗಳು ಸ್ವಸ್ವರೂಪದಲ್ಲಿಯೇ ಇಂಗ್ಲಿಷ್ ಭಾಷೆಯನ್ನು ಪ್ರವೇಶಿಸುತ್ತವೆ.

ಹೀಗೆ ವಿದೇಶೀಯ ಭಾಷೆಗಳ ಸಂಪತ್ತು ಆಂಗ್ಲ ಭಾಷೆಯನ್ನು ಪ್ರವೇಶಿಸುತ್ತಿರುವಾಗಲೇ, ತಮ್ಮ ಭಾಷೆಯ ಮೂಲ ಅಸ್ತಿತ್ವದ ಬಗ್ಗೆ ಬ್ರಿಟನ್ನಿನ ಜನರಲ್ಲಿ ಕಳವಳವುಂಟಾಗುತ್ತದೆ; ಅದು ದಾರಿತಪ್ಪಿ ಅನಿಯಂತ್ರಿತವಾಗಿ ಬೆಳೆಯುವುದರ ಬಗ್ಗೆ ಮುಜುಗರವುಂಟಾಗುತ್ತದೆ. ಯಾವ ಪದ ಗ್ರಾಹ್ಯ, ಯಾವ ಪದ ಅಗ್ರಾಹ್ಯ ಎನ್ನುವುದನ್ನು ನಿರ್ಧರಿಸುವ ಸಲುವಾಗಿ ಅಕೆಡೆಮಿಯೊಂದು ಸಂಸ್ಥಾಪನೆಗೊಳ್ಳಲೆಂದು ಕೆಲವು ಜನ ಹುಯಿಲೆಬ್ಬಿಸುತ್ತಾರೆ. ಖಾಸಗಿಯಾಗಿ ಹಣವನ್ನು ಟಂಕಿಸುವುದೆಷ್ಟು ಅಪರಾಧವೋ ಹೊಸ ಪದಗಳ ರಚನೆಯೂ ಅಷ್ಟೇ ಆತ್ಮಘಾತಕವೆಂದು ಡ್ಯಾನಿಯಲ್ ಡಿಫೋನಂಥ ಜನಪ್ರಿಯ ಸಾಹಿತಿಯು ಉದ್ಘೋಷಿಸುತ್ತಾನೆ. ಆದರೆ ಆಂಗ್ಲರ ಸೃಜನಶೀಲ ಸಹಜ ಪ್ರವೃತ್ತಿ ಆ ಸನ್ನಾಹಗಳನ್ನು ತಿರಸ್ಕರಿಸುತ್ತದೆ. ಇಂಗ್ಲಿಷಿನ ಬಹುಮುಖವೂ ವ್ಯಾಪಕವೂ ಆದ ವಿಕಾಸಕ್ಕೆ ಆ ಜನರ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಸ್ವಾತಂತ್ರ್ಯ ಪ್ರೇಮವೇ ಕಾರಣವೆಂದು ಒಟ್ಟೊ ಯಸ್ಪರ್ಸನ್‌ರಂಥ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. ಆಂಗ್ಲರೆಂದೂ ತಮ್ಮ ಭಾಷೆಯ ಸುತ್ತ ಮುಳ್ಳುಬೇಲಿಯನ್ನು ಬೆಳೆಸಿಕೊಳ್ಳಲಿಲ್ಲವಾಗಿ ಅದು ಇಂದಿಗೂ ಜಗತ್ತಿನ ಭಾಷೆಯಾಗಿಯೇ ಉಳಿದಿದೆ. ಅದು ಬುದ್ಧಿಜೀವಿಗಳ ಭಾಷೆಯಾಗಿರುವಂತೆ, ಶ್ರೀಸಾಮಾನ್ಯರ ಭಾಷೆಯೂ ಆಗಿದೆ; ಅದರ ವಿಕಾಸದಲ್ಲಿ ಸಾಹಿತಿಗಳಂತೆ ದನಗಾಹಿ ಕುರಿಗಾಹಿಗಳೂ ನಿರಂತರವಾಗಿ ತಮ್ಮ ಕಾಣಿಕೆ ಸಲ್ಲಿಸುತ್ತಿದ್ದಾರೆ.

ಈಸ್ಟ್ ಇಂಡಿಯಾ ಕಂಪೆನಿಯ ಜತೆಯಲ್ಲಿ, ಅನಂತರ ಇಂಗ್ಲೆಂಡಿನ ನೇರ ಆಡಳಿತೆಯಲ್ಲಿ ವರ್ತಕರು, ಪ್ರವಾಸಿಗರು, ಅಧಿಕಾರಿಗಳು, ಸೈನಿಕರು ಇಂಡಿಯಾವನ್ನು ಪ್ರವೇಶಿಸಿದರಷ್ಟೆ. ಅವರು ಇಂಡಿಯಾದಿಂದ ಐಶ್ವರ್ಯದ ಜತೆಗೆ, ಶಬ್ದಸಂಪತ್ತನ್ನು ಸಹ ದೋಚಿಕೊಂಡು ಹೋಗುತ್ತಾರೆ. ಆಡಳಿತ, ಕಾನೂನು, ಗಿಡಮರ, ಪ್ರಾಣಿ, ಜನ, ಸ್ಥಳ, ವಸ್ತು ವಿಶೇಷ ಮತ್ತು ದಿನನಿತ್ಯದ ಚಟುವಟಿಕೆಗಳಿಗೆ ಸಂಬಂಧಿಸಿದ ಶಬ್ದಗಳನ್ನು ಸ್ವಸ್ವರೂಪದಲ್ಲಿಯೋ ಆಂಗ್ಲೀಕರಣದ ಮುಖಾಂತರವೋ ಅಥವಾ ಕಪೀಕರಣದ ಮೂಲಕವೋ ತಮ್ಮ ನಿಘಂಟಿನೊಳಗೆ ಸೇರಿಸಿಕೊಳ್ಳುತ್ತಾರೆ. ಆರ್ಥರ್ ಕೋಕ್ ಬರ್ನೆಲ್ ೧೮೪೦–೧೮೮೨ ಮತ್ತು ಸರ್ ಹೆನ್ರಿಯೂಲ್ ೧೮೨೦–೧೮೮೯ ಎಂಬ ಆಂಗ್ಲ ಅಧಿಕಾರಿಗಳು ರಚಿಸಿದ 'ಹಾಬ್ಸನ್ ಜಾಬ್ಸನ್' ಎಂಬ ಆಂಗ್ಲೊ-ಇಂಡಿಯನ್ ಪದಗಳ ನಿಘಂಟಿನಲ್ಲಿ ಆರು ಸಾವಿರ ಪದಗಳಿವೆ. ಕೆಲವು ಉತ್ಪನ್ನಗಳಿಗೆ ಆಯಾಸ್ಥಳಗಳ ಹೆಸರೇ ಸಲ್ಲುವುದುಂಟಷ್ಟೆ. ಉದಾಹರಣೆಗೆ, ಕ್ಯಾಲಿಕೊ–ಕ್ಯಾಲಿಕಟ್. ಬಣ್ಣದ ಕ್ಯಾಲಿಕೋ ಬಟ್ಟೆಗಳಿಗೆ ಚಿಂಟ್ಸ್ ಎಂಬ ಹೆಸರಿದೆಯಷ್ಟೆ. ಸಂಸ್ಕೃತದ ಚಿತ್ರದಿಂದ ಅದು ಬಂದದ್ದು. ಬೀಟಲ್-ವೀಳೆಯ, ರೈಸ್–ಅರಿಶಿ, ಮ್ಯಾಂಗೊ–ಮಾಂಗಾಯ್, ಬ್ಯಾಂಡಿಕೂಟ್–ಪಂದಿಕೊಕ್ಕ, ಜುಗರ್‌ನಾಟ್–ಜಗನ್ನಾಥ್, ಜಮಾಬಂದಿ, ತಾಲ್ಲೂಕು, ತಹಸಿಲ್‌ದಾರ್, ಸುಬೇದಾರ್, ಜಮೇದಾರ್, ಘೀ, ಚಟ್ನಿ, ಕರಿ, ಪೆಂಡಾಲ್–ಪಂದರ, ಪಂಚ್–ಪಾಂಚ್, ಶಾಂಪೂ–ಚಂಪೊ, ಟೀಕ್–ಟೆಕ್ಕ—ಇಂಥ ಸಾವಿರಾರು

ಪದಗಳು ಆಂಗ್ಲ ಭಾಷಾಕೋಶದ ಅವಿಭಾಜ್ಯ ಅಂಗಗಳಾಗಿವೆ. ಕೆಲವು ವೈದಾಂತಿಕ ಪದಗಳಂತು ಅನುವಾದಕ್ಕೆ ಸಿಗಲಾರವು. ಉದಾಹರಣೆಗೆ, ಧರ್ಮ, ಕರ್ಮ, ನಿರ್ವಾಣ, ಯೋಗ, ಆತ್ಮ, ಬ್ರಹ್ಮ. ಇವೀಗ ಇಂಗ್ಲಿಷ್ ಕೋಶದಲ್ಲಿಯೂ ದೊರಕುತ್ತವೆ. ಸ್ವಾತಂತ್ರ್ಯ ಸಮರದನಂತರ ಚಾಲ್ತಿಗೆಬಂದ ಹರತಾಳ, ಬಂಧ್, ಖಾದಿ, ಸತ್ಯಾಗ್ರಹ, ಮೋರ್ಚ, ಪಂಚಾಯತ್‌ರಾಜ್ ಪದಗಳೂ ಇಂಗ್ಲಿಷಿನೊಳಗೆ ಸೇರಿಕೊಂಡಿವೆ. ಹವಾಲಾದಂಥ ಪದಕ್ಕೂ ಅಲ್ಲಿ ಸ್ವಾಗತ ವಿದ್ದೀತು. ಇಂಡಿಯನ್ ಇಂಗ್ಲಿಷ್ ಎಂಬ ಹೆಸರಿನ ಇಂಗ್ಲಿಷ್ ಪ್ರಭೇದವೇ ಸೃಷ್ಟಿಯಾಗುತ್ತಿರುವುದು ಅಸಹಜವೇನಲ್ಲ; ಸ್ವಾಗತಾರ್ಹ.

ಕನ್ನಡ ಜಾಯಮಾನದ ದೃಷ್ಟಿಯಿಂದ ಇಂಗ್ಲಿಷ್ ಜಾತಿಗೆ ಸೇರಿದ್ದು. ಅದಕ್ಕೆ ಮಡಿಮೈಲಿಗೆಯ ಸೋಂಕೇ ಇಲ್ಲ. ಜಗತ್ತಿನ ಯಾವ ಭಾಷೆಯಿಂದಾದರೂ ಶಬ್ದಗಳನ್ನು ಸ್ವೀಕರಿಸಲು ಅದು ಸದಾ ಸಿದ್ಧ. ಕೆಲವೊಮ್ಮೆ ತನ್ನ ಉಚ್ಚಾರಣಾನಿಯಮಗಳಿಗೊಗ್ಗುವಂತೆ ಅನ್ಯಭಾಷೆಯ ಪದಗಳನ್ನು ಕಸಿಕಟ್ಟಿಕೊಳ್ಳುತ್ತದೆ ಅಥವಾ ಸಂಸ್ಕರಿಸಿಕೊಳ್ಳುತ್ತದೆ, ತನ್ನ ಕುಕ್ಷಿಯೊಳಗೆ ಸೇರಿಸಿಕೊಳ್ಳುತ್ತದೆ. ವೈಯಾಕರಣಿಗಳು ಅಂಥ ಪ್ರಕ್ರಿಯೆಗೆ ತದ್ಭವ ಎಂದು ಗೌರವಿಸುತ್ತಾರೆ. ಬಹುತೇಕವಾಗಿ ಅದು 'ಉ' ಪದಾಂತ್ಯ ಸ್ವರದ ಮೂಲಕ ಇಂಗ್ಲಿಷ್, ಸಂಸ್ಕೃತ, ಲ್ಯಾಟಿನ್, ರಷ್ಯನ್, ಯಾವುದೇ ಭಾಷೆಯ ಪದಗಳನ್ನು ಮತಾಂತರ ಮಾಡಿಕೊಳ್ಳುತ್ತದೆ. ಬೆಂಚ್, ರೈಲ್, ಬುಕ್ ಇಂಗ್ಲಿಷ್ ಪದಗಳಾದರೆ, ಬೆಂಚು, ರೈಲು, ಬುಕ್ಕುಗಳು ಅಚ್ಚಗನ್ನಡ ಪದಗಳು. ಉ ಕನ್ನಡದ ಸರ್ವಶ್ರೇಷ್ಠ, ಸುಫಲ, ಸೃಜನ-ಶೀಲ ಮತಾಂತರ ಲಾಂಛನ. ಯಾವ ಭಾಷೆ ಯುಗದ ಆವಶ್ಯಕತೆಗೆ ತಕ್ಕಂತೆ ನಿರಂತರವಾಗಿ ಎಲ್ಲ ದಿಕ್ಕುಗಳಿಂದ ಸಲೀಸಾಗಿ ಶಬ್ದಗಳನ್ನು ಆಮದುಮಾಡಿಕೊಂಡು ಜೀರ್ಣಿಸಿಕೊಳ್ಳುತ್ತದೋ ಅದೇ ಸರ್ವಶ್ರೇಷ್ಠ ಭಾಷೆ, ಸಾರ್ಥಕ ಭಾಷೆ. ಗಾಳಿ ನೀರುಗಳಂತೆ ಶಬ್ದಗಳೂ ಎಲ್ಲ ಮಾನವರ ಆಸ್ತಿ. ಶಬ್ದಸಂಪತ್ತು ಹೆಚ್ಚಿದಷ್ಟೂ ಮಾನವನ ಭಾವನಾ-ಸಾಮರ್ಥ್ಯ ಆಲೋಚನಾ ಶಕ್ತಿ ಕಲ್ಪನಾ ಪ್ರತಿಭೆ ಹರಳುಗಟ್ಟುತ್ತದೆ, ಗಹನವಾಗುತ್ತದೆ, ವಿಯದ್ ವಿಹಾರಿಯಾಗುತ್ತದೆ; ಜ್ಞಾನ ದಿಗಂತ ವಿಶ್ವವಿಶಾಲವಾಗುತ್ತದೆ. ನಮ್ಮ ಕನ್ನಡ ಆ ದಿಕ್ಕನತ್ತ ಹರಿಯಲೆಂದು ಆಶಿಸೋಣವೆ?

ತನ್ನ ಅಭಿಲಾಷೆಯಂತೆ ಜೀವಿಸಬಲ್ಲ ಪರಿಸ್ಥಿತಿಯುಳ್ಳವನು ಪ್ರಪಂಚದಲ್ಲಿ ಸಂತೋಷಿ. ಆದರೆ ಯಾವ ಪರಿಸ್ಥಿತಿಯಲ್ಲಿಯೂ ಜೀವಿಸಬಲ್ಲವನು ಅತೀವ ಸಂತೋಷಿ.

—ಲೋಕೆ

ಸೇಡಿಯಾಪು ಕೃಷ್ಣಭಟ್ಟರು

ಜಿ. ಟಿ. ನಾರಾಯಣರಾವ್

ಇವರ ಜೀವಿತಾವಧಿ ೮-೬-೧೯೦೨ರಿಂದ ೮-೬-೧೯೯೬ರ ತನಕ. ಕೊನೆಯ ಆ ಶನಿವಾರ ಸಂಜೆ ಮಣಿಪಾಲದ ಕೈಲಾಸ ಬಡಾವಣೆಯಲ್ಲೊಂದು ಅಪೂರ್ವ ಸಮಾರಂಭ: ಸೇಡಿಯಾಪು ಅವರ ೯೫ನೆಯ ಜನ್ಮದಿನೋತ್ಸವಾಚರಣೆ, ಅವರ ಉದ್ಗ್ರಂಥ 'ತಥ್ಯದರ್ಶನ'ದ ಇಂಗ್ಲಿಷ್ ಅವತರಣಿಕೆಯ ಬಿಡುಗಡೆ ಹಾಗೂ ಗ್ರಂಥಕರ್ತರಿಗೆ ಆದರ ಸಮರ್ಪಣೆ. ಈ ಉಲ್ಲಾಸಮಯ ಕೈಂಕರ್ಯದ ಅಧ್ವರ್ಯು ಶಿವರಾಮ ಕಾರಂತರು (ಜನನ ೧೦-೧೦-೧೯೦೨). ಹೀಗೆ ಜ್ಞಾನಪೀಠ ಕೈಲಾಸಶಿಖರಕ್ಕೆ ಆಗಮಿಸಿದ್ದಾಗ, ತಮ್ಮ ಆಯುಷ್ಯಶತಕದತ್ತ ಚುಂಚಗಳನ್ನು ಚಾಚಿದ್ದ ಇಬ್ಬರು ಭೀಷ್ಮಾಚಾರ್ಯರ ಸಮಾಗಮ ಮತ್ತು ಸಂಗಮ ಅಲ್ಲಿ ನೆರೆದಿದ್ದವರ ಕಂಗಳಿಗೊಂದು ಹಬ್ಬ: "ಕಂಗಳ್ಯಾತಕೋ ಕಸ್ತೂರಿರಂಗನ ನೋಡದ!" ಆದರೆ "ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ." ಅದೇ ಮಧ್ಯರಾತ್ರಿ ಸಲ್ಲುವ ವೇಳೆಗೆ ಸೇಡಿಯಾಪು ಅವರ ಶಿಥಿಲ ದುರ್ಬಲ ದೇಹದೊಳಗೆ ಪ್ರಜ್ವಲಿಸುತ್ತಿದ್ದ ಚಿರನೂತನ ಜ್ಞಾನಚೇತನ ಅನಂತಲೀನವಾಗಿ ಹೋಗಿತ್ತು, ದ್ವೈತತತ್ವ ಅದ್ವೈತತತ್ವಕ್ಕೆ ಉತ್ತಾರಣೆಗೊಂಡಿತ್ತು.

ದಿನಾಂಕ ೯-೬-೧೯೯೬ರ ನಸುಮುಂಜಾನೆ ಮೈಸೂರಿನಲ್ಲಿ ಈ ಅನಿವಾರ್ಯ ಸುದ್ದಿಯನ್ನು ಅವರ ಅಳಿಯ ಪಿ. ಎಸ್. ಶಿವರಾಮ ನನಗೆ ಬಿರಿದರು. ಬೆನ್ನಿಗೇ ಕಾರ್ಕಳದಿಂದ ಎಂ. ರಾಮಚಂದ್ರ (ಆ ಜಾನ್ಸನ್‌ಗೆ ಈ ಬಾಸ್ವೆಲ್) ಮತ್ತೆ ಇದೇ ಸಮಾಚಾರ ಅರುಹಿದರು. ಆಗ ನನ್ನ ಮನದಲ್ಲಿ ಮಿಡಿದ ಭಾವನೆಗಳು ಸಂಕೀರ್ಣ: ಸೇಡಿಯಾಪು, ಡಿವಿಜಿಯವರಂತೆ, ನನಗೆ ಗುರುಸ್ಥಾನದಲ್ಲಿರುವ ಹೃದಯವಂತರು. "ತರಣಿ ದರ್ಶನಕಿಂತ ಕಿರಣಾನುಭವ ಲೇಸು" ಎಂದಿದ್ದಾರೆ ಡಿವಿಜಿ. ನನಗೆ ಈ ಉಭಯ ಜ್ಞಾನಸೂರ್ಯರ ನಿಕಟ ಸಂಪರ್ಕವೂ ಇತ್ತು—ಸೇಡಿಯಾಪು ಅವರದು ಎಷ್ಟೋ ಹೆಚ್ಚು; ಅವರ ಸಾಹಿತ್ಯ ಚಿಂತನೆಗಳು ನನ್ನ ದೈನಂದಿನ ಅಧ್ಯಯನ ವಸ್ತುಗಳು.

ಕೃಷ್ಣಭಟ್ಟರ ವಿದ್ವತ್ತು ಯಾವ ಮಟ್ಟದ್ದು, ಅವರು ಆ ಸಿದ್ಧಿ ಹೇಗೆ ಗಳಿಸಿದರು—ಈ ಪ್ರಶ್ನೆಗಳಿಗೆ ನೇರ ಉತ್ತರ ಬರೆಯುವುದು ನನ್ನ ಅಳವಿಗೆ ಮೀರಿದ ಸಾಹಸ. ಡಿ. ಎಲ್. ನರಸಿಂಹಾಚಾರ್ (೧೯೦೬-೭೧) ಅವರಿಗೆ ಅರ್ಪಿಸಿದ (೧೯೬೭) "ಉಪಾಯನ" ಸಂಭಾವನಾ ಗ್ರಂಥದಲ್ಲಿ ದೇಜಗೌ ಅವರು ಬರೆದಿರುವ ಮಾತು



ಶ್ರೀ ಸೇಡಿಯಾಪು ಕೃಷ್ಣಭಟ್ಟರು

ಜನನ: ೮–೬–೧೯೦೨ ಮರಣ: ೮–೬–೧೯೯೬

ಇಲ್ಲಿ ಪ್ರಸ್ತುತವಾಗಿದೆ: "ವಿದ್ವತ್ತೆಂಬುದು ಅಂಗಡಿ ಮುಂಗಟ್ಟುಗಳಲ್ಲಿ ಸುಲಭವಾಗಿ ದೊರೆಯುವ ವ್ಯಾಪಾರಸಾಮಗ್ರಿಯಲ್ಲ. ದೀರ್ಘಕಾಲದ ತಪಸ್ಯೆಯಿಂದ, ಸತತಾಭ್ಯಾಸದಿಂದ, ನಿರಂತರವಾದ ಚಿಂತನ ಮಂಥನಗಳಿಂದ ದೊರಕಬಹುದಾದ ಅಮೃತವಸ್ತು. ಪಾಂಡಿತ್ಯಸಂಪಾದನೆ ಬಹುಶ್ರಮಸಾಧ್ಯವಾದ ಶೀಘ್ರಫಲದಾಯಕವಲ್ಲದ ಸಾಧನೆಯಿಂದ ಲಭ್ಯವಾಗುವಂತಹುದು. ಭಾವಪ್ರಧಾನವಾದ ಕಾವ್ಯರಚನೆಯಷ್ಟು ಸರಾಗವಲ್ಲ ಬುದ್ಧಿ ಪ್ರಧಾನವಾದ ಸಂಶೋಧನ ಮತ್ತು ವಿಮರ್ಶನ ಕಾರ್ಯ. ಸ್ಫೂರ್ತಿಯೊದಗಿದಾಗ ಒಂದೇ ಉಸಿರಿನಲ್ಲಿ ಅವಿಚ್ಛಿನ್ನವಾಗಿ ಕಾವ್ಯಲಹರಿ ಪ್ರವಹಿಸುತ್ತದೆ. ಅಲ್ಲಿ ಚಿಂತನ ಮಂಥನ ಕ್ರಿಯೆ ಇಲ್ಲವೆಂದಲ್ಲ. ಅದಿದ್ದರೂ ಗುಪ್ತಗಾಮಿಯಾಗಿ, ಅವಕುಂಠನಶೀಲೆಯಂತೆ ವರ್ತಿಸುತ್ತದೆ. ಸಂಶೋಧನಕ್ರಿಯೆಯಲ್ಲಿ ಕಲ್ಪನೆ ಗುಪ್ತಗಾಮಿಯಾಗಿದ್ದು ಚಿಂತನಾಂಶ ನಾಯಕಪಾತ್ರವನ್ನು ವಹಿಸುತ್ತದೆ. ಚಿಂತನ ಮಂಥನಗಳಿಗೆ ಪ್ರೇರಕವಾದ ಆಧಾರ ಸಾಮಗ್ರಿಗಳ ಸಂಗ್ರಹಕಾರ್ಯಕ್ಕೆ ಸಂಶೋಧನೆಯಲ್ಲಿ ಅಗ್ರಮಾನ್ಯತೆ ಅನಿವಾರ್ಯ. ಈ ಕಾರಣದಿಂದ ಸಂಶೋಧಕ ಶೀಘ್ರಫಲವನ್ನು ನಿರೀಕ್ಷಿಸುವಂತಿಲ್ಲ. ಒಂದೊಂದು ಪದ ಒಂದೊಂದು ವಾಕ್ಯ ಬರೆಯುವಾಗಲೂ ಅವನು ತನ್ನ ಸ್ಮೃತಿಕೋಶವನ್ನೆಲ್ಲ ಕಲಕಬೇಕಾಗುತ್ತದೆ, ಪಾಂಡಿತ್ಯ ದುರ್ಗಕ್ಕೆ ಲಗ್ಗೆ ಹೂಡಬೇಕಾಗುತ್ತದೆ, ಗ್ರಂಥಭಂಡಾರವನ್ನು ಸೂರೆಗೊಳ್ಳಬೇಕಾಗುತ್ತದೆ, ಹತ್ತಾರು ಕಡೆಗಳಿಂದ ವಿಷಯವನ್ನು ಸಂಚಯಿಸಬೇಕಾಗುತ್ತದೆ. ಇಷ್ಟಾದರೂ ತಾನು ಸುರಿಸುವ ಬೆವರಿಗೆ, ಮಾಡುವ ದುಡಿಮೆಗೆ ಅನುಗುಣವಾದ ಲಾಭವನ್ನವನು ನಿರೀಕ್ಷಿಸುವಂತಿಲ್ಲ."

ಸೇಡಿಯಾಪು ಅವರ ನಿರಂತರ ಸಂಶೋಧನ ದಾಸೋಹ ಮೇಲಿನ ವಿವರಣೆಗೆ ಇನ್ನೂ ಒಂದು ನಿದರ್ಶನ. ೧೯೯೧ರಲ್ಲಿ ಪ್ರಕಟವಾದ ಅವರ 'ತಥ್ಯ ದರ್ಶನ' ಮೂಲಭೂತ ವೈಜ್ಞಾನಿಕ ಚಿಂತನೆಗಳನ್ನು ಒಳಗೊಂಡಿರುವ ಅತಿ ವಿರಳ ಗ್ರಂಥ. ಆರ್ಯ, ವರ್ಣ, ಜಾತಿ, ಲಿಂಗ ಎಂಬೀ ಪದಚತುಷ್ಟಯದ ಅರ್ಥಾನುಸಂಧಾನ ಅವರು ಮಾಡಿರುವ ಪರಿ ನಿಖರ ವೈಜ್ಞಾನಿಕ ಮತಿಗೆ ಮಾತ್ರ ಸಾಧ್ಯ. ಪುರುಷಸೂಕ್ತದ ಚಿರಪರಿಚಿತ ಮತ್ತು ವಿಕೃತವ್ಯಾಖ್ಯಾನಕ್ಕೆ ಪಕ್ಕಾದ "ಬ್ರಾಹ್ಮಣೋऽಸ್ಯ ಮುಖಮಾಸೀತ್ । ಬಾಹೂರಾಜನ್ಯಃ ಕೃತಃ ॥ ಊರೂ ತದಸ್ಯ ಯದ್ವೈಶ್ಯಃ । ಪದ್ಭ್ಯಾಂ ಶೂದ್ರೋ ಅಜಾಯತ ॥" ಋಕ್ಕನ್ನು ಆಧುನಿಕ ವಿಚಾರಮತಿಗಳು ಗ್ರಹಿಸಿ ಒಪ್ಪುವ ತೆರದಲ್ಲಿ ಸೇಡಿಯಾಪು ವಿವರಿಸಿದ್ದಾರೆ. ಆನುಷಂಗಿಕವಾಗಿ, ಈ ವಿವರಣೆ ಡಿವಿಜಿಯವರ ಯಥಾನುವಾದವನ್ನು "ವದನದಿಂ ಬ್ರಾಹ್ಮಣಂ ಬಾಹುವಿಂ ಕ್ಷತ್ರಿಯನುಮರ್ । ಉದಿಸಿದಂ ವಿಶನೂರುವಿಂ, ಪದದೆ ಶೂದ್ರಂ ॥" ನಿರಾಕರಿಸುತ್ತದೆ ಎಂಬುದು ಗಮನಾರ್ಹ.

ಸೇಡಿಯಾಪು ಯಾರು? ಕವಿ, ಕತೆಗಾರ, ಪ್ರಬಂಧಕಾರ, ಸಂಶೋಧಕ, ಕನ್ನಡ ಸಂಸ್ಕೃತ ಆಂಗ್ಲ ಭಾಷಾ ವಿದ್ವಾಂಸ, ವಿಮರ್ಶಕ, ಕಲಾಪ್ರೇಮಿ—ಒಬ್ಬ ಸಭ್ಯ ಸುಸಂಸ್ಕೃತ ಮಾನವ. ನಡೆನುಡಿ ಬಗೆಗಳಲ್ಲಿ ಉನ್ನತ ಸಾಮರಸ್ಯ ಸದಾ ಕಾಪಾಡಿಕೊಂಡು ಬಂದಿದ್ದ ಗೃಹಸ್ಥ. ಪ್ರಚಾರ

ಬಯಸಿದವರಲ್ಲ, ವೈಯಕ್ತಿಕ ಮಹತ್ವಾಕಾಂಕ್ಷೆ ಹೊತ್ತಿದ್ದವರಲ್ಲ, ಅನ್ಯಾಶ್ರಯ ಅಪೇಕ್ಷಿಸಿದವರಲ್ಲ—ಸ್ಥಿತಪ್ರಜ್ಞ ಎಂದೇ ಇವರಿಗೆ ತಾರಾಮೌಲ್ಯ (ಸ್ಟಾರ್ ವ್ಯಾಲ್ಯು) ಬರಲಿಲ್ಲ! ಸೇಡಿಯಾಪು ನುಡಿಗಳಲ್ಲಿ

ಹೆಚ್ಚು ಬರೆದವನಲ್ಲ
ನಿಚ್ಚ ಬರೆದವನಲ್ಲ
ಮೆಚ್ಚಿಸಲು ಬರೆಯುವಭ್ಯಾಸವಿಲ್ಲ
ಇಚ್ಚೆಗೆದೆಯೊಪ್ಪಿ ಬಗೆ
ಬಿಚ್ಚಿದರೆ ಕಣ್ಗೆ ಮಯ್
ಎಚ್ಚುಮಂದದಿ ತೀಡಿ ತಿದ್ದಿ ಬರೆವೆ

ಕಣ್ಣಿಗೆ ಕಾಡಿಗೆ ಸವರುವ ನಯವಂತಿಕೆಯನ್ನು ಅವರಿಲ್ಲಿ ಬಣ್ಣಿಸಿರುವ ಪರಿ ಕಿರಿದರೊಳ್—ಪಿರಿದರ್ಥಕ್ಕೆ—ಶ್ರೀಯುತರ ಸಾಹಿತ್ಯ ಶೈಲಿಗೂ ಜೀವನ ಧರ್ಮಕ್ಕೂ—ನಿದರ್ಶನ, ಖಚಿತತೆಗೆ ಪರ್ಯಾಯ ನಾಮ ಸೇಡಿಯಾಪು. ಮಾತನ್ನು ಇವರಿಗಿಂತ ಅಧಿಕ ಕೃಪಣತೆಯಿಂದ ಬಳಸಿದವರಿಲ್ಲ. ಏಕೆಂದರೆ 'ಶ್ವಮೇಧ'ದಲ್ಲಿ ಇವರು ಬರೆದಿರುವಂತೆ

ಮಾತ ಹಳಿಯಬೇಡ! ಮನುಜನೊಂದು
ಮಹಿಮೆ ಮಾತಿನಲ್ಲಿ
ಮಾತು ದೇವನೊಂದು ಶಕ್ತಿ, ಮಾತೆ
ಜೀವನೊಂದು ಜ್ಯೋತಿ
ಮಾತು ನೀತಿಗಳಿಗೆ ತಾಯಿ, ರೀತಿಗಳಿಗದೇ
ವಿಧಾಯಿ
ಮಾತು ಸತ್ಯವುಡುವ ಧೌತ, ಜೀವನದ
ರಥಕ್ಕೆ ಸೂತ
ಮಾತ ಕೆಡಿಸಿ ಸುಖಿಪೆನೆಂಬ ಪಾಪಿ
ನರಕಕೂಪ ಭೀಕ

ನಾನು ಮಂಗಳೂರು ಸೇಂಟ್ ಅಲೋಶಿಯಸ್ ಕಾಲೇಜಿಗೆ ವಿದ್ಯಾರ್ಥಿಯಾಗಿ (೧೯೪೩-೪೪) ಸೇರುವ ಮೊದಲೇ ಕೃಷ್ಣ ಭಟ್ಟರ 'ತರುಣಧ್ವನಿ' (೧೯೩೪) ಕಾವ್ಯ ಖಂಡ ಓದಿದ್ದೆ. ತಂತಾನೇ ಅದು ಕಂಠಪಾಠವೂ ಆಗಿತ್ತು. ಅದರ ಭಾವ ಮತ್ತು ಓಘ ನನ್ನನ್ನು ಪೂರ್ತಿ ಸೆರೆಹಿಡಿದಿದ್ದುವು:

ಅಡಗುವ ರಾತ್ರಿಯನೆಬ್ಬಟ್ಟುತ ಮೂ
ಡಲ ಕೆಂಪೇರುತಿರೆ
ಹುಲಿಬೇಟೆಗೆ ಹಯವೇರಿದ
ವಿದ್ಯಾನಗರದ ರಾಮದೊರೆ

ಎಂದು ಇದರ ಆರಂಭ. ಅಂದಿಗಿಂತ (೧೯೪೩) ಇಂದು (೧೯೯೬) ಈ ಕಾವ್ಯ ಅಧಿಕ ಅರ್ಥ, ಧ್ವನಿ ಮತ್ತು ಸೌಂದರ್ಯ ಪ್ರದಾಯಕವಾಗಿದ್ದರೂ ನನ್ನಲ್ಲಿ ಅಂದಿನ ಆ ಬೆರಗು ಸಂಭ್ರಮಗಳು ಹಾಗೆಯೇ ಹಸುರಾಗಿವೆ. ನಮ್ಮ ಕಾಲೇಜಿನ ಅಂಗಸಂಸ್ಥೆಯಾಗಿದ್ದ ಪ್ರೌಢಶಾಲೆಯಲ್ಲಿ ಸೇಡಿಯಾಪು ಕನ್ನಡ ಉಪಾಧ್ಯಾಯರೆಂದು ತಿಳಿದಾಗ ಅವರನ್ನು ನೋಡಿ ಮಾತಾಡಬೇಕೆಂಬ ಬಯಕೆ ತೀವ್ರವಾಯಿತು.

ಅವರು ಹೇಗಿದ್ದರು? ಸ್ವಾತಂತ್ರ್ಯ ಪೂರ್ವ ಭಾರತದ ನೈಷ್ಠಿಕ ಗಾಂಧೀ ಮಾರ್ಗಾನುಸಾರಿ, ತಾನು ಒಪ್ಪಿ ಅಂಗೀಕರಿಸಿದ್ದ ಜೀವನ ಮೌಲ್ಯಗಳು ಅನುಷ್ಠಾನ ಆಚರಣೆಗಳಿಂದ ಪ್ರಕಟವಾಗಬೇಕೇ ವಿನಾ ಭಾಷಣ ಘೋಷಣೆಗಳಿಂದಲ್ಲ ಎಂಬುದು ಅವರ ಜೀವನ ನೀತಿ. ಶುದ್ಧ ಶುಭ್ರ ಖಾದೀ ವಸ್ತ್ರ ಧಾರಿ. ಗಂಭೀರ ಮತ್ತು ಆಕರ್ಷಕ ನಿಲವು ಮತ್ತು ನಡೆ. ಭಯಸಹಿತ ಗೌರವ ಪ್ರೇರಕ ಧೀರವ್ಯಕ್ತಿತ್ವ.

ನಮ್ಮ ಕನ್ನಡ ಗುರುಗಳಾಗಿದ್ದ ಪಂಡಿತ ಮುಳಿಯ ತಿಮ್ಮಪ್ಪಯ್ಯನವರು (೧೮೮೮-

೧೯೫೦) ತರಗತಿಯಲ್ಲಿ ನಮಗೆ ನಾಗವರ್ಮನ ಉಕ್ಕಿನ ಕಡಲೆ 'ಕಾದಂಬರೀ ಕಾವ್ಯ'ವನ್ನು ಅಕ್ಕರೆಯಿಂದ ಬಿಡಿಬಿಡಿಯಾಗಿ ಉಣಿಸುತ್ತಿದ್ದಾಗ ಸೇಡಿಯಾಪು ಮತ್ತು ಕಡೆಂಗೋಡ್ಲು ಎಂಬ ಇಬ್ಬರು ಸಮಕಾಲೀನ (ಉಭಯರೂ ಮಂಗಳೂರು ನಿವಾಸಿಗಳಾಗಿದ್ದುದರಿಂದ ಸಮದೈಶಿಕ ಕೂಡ) ವಿದ್ವಾಂಸರ ಹೆಸರುಗಳನ್ನು ಪದೇ ಪದೇ ಉಲ್ಲೇಖಿಸುತ್ತಿದ್ದರು. "ಹೊನ್ನಿಯ ಮದುವೆ"ಯ ಕಡೆಂಗೋಡ್ಲು ಶಂಕರಭಟ್ಟರು (೧೯೦೪-೬೮) ಇನ್ನೂ "ಭಯಂಕರರು" ಎಂದು ದರ್ಶನಮಾತ್ರದಿಂದಲೇ ಅನಿಸಿದ್ದರಿಂದ ಅವರ ಹತ್ತಿರ ಸುಳಿಯುವ ಧೈರ್ಯ ಅಂದು ಪ್ರದರ್ಶಿಸಲಿಲ್ಲ.

ಈ ವಿದ್ವಾಂಸರು ಮಂಗಳೂರಿನ ಸಾರ್ವಜನಿಕ ಸಾರಸ್ವತ ಕ್ರಿಯಾಕಲಾಪಗಳಲ್ಲಿ ಒಂದೇ ವೇದಿಕೆಯನ್ನು ಅಲಂಕರಿಸುವುದಿತ್ತು. ಅದೆಂಥ ಸುಕುಮಾರ ದೃಶ್ಯ! ಉಭಯರಿಗೂ ಗುರುಗಳಾಗಿದ್ದ ಮುಳಿಯರು ಸೃಷ್ಟಿಯನ್ನೂ (ಬ್ರಹ್ಮ) ಸೇಡಿಯಾಪು ಸ್ಥಿತಿಯನ್ನೂ (ವಿಷ್ಣು) ಕಡೆಂಗೋಡ್ಲು ಲಯವನ್ನೂ (ಮಹೇಶ್ವರ) ಪ್ರತೀಕಿಸುವಂತಿದ್ದರು. ("ಲಯವೆಂದರೆ ಕ್ರಿಯಾ ಕಾಲ ಖಂಡಗಳ ಅನ್ಯೋನ್ಯ ಸಮತ್ವ" – ಸೇಡಿಯಾಪು 'ಛಂದೋಗತಿ'ಯಲ್ಲಿ.)

ಮುಳಿಯ: ಪರಿಪೂರ್ಣವಾಗ್ಮಿ. ಇವರ ಭಾಷಣ ಪ್ರತಿ ಸಲವೂ ಸಿದ್ಧ ಪಾಕವೇ. ಪದ, ಅಂತೆಯೇ ಅರ್ಥದ, ಬೆನ್ನೇರಿ ಹೋಗಿ ಸಾಹಿತ್ಯದ ವಿಶ್ವರೂಪ ಕಾಣಿಸುವ ಕೌಶಲ ಅನುಪಮ. ಸೇಡಿಯಾಪು ನುಡಿಗಳಲ್ಲಿ "ಕನ್ನಡ ಶಬ್ದಭಂಡಾರಿ, ಹಳೆಗನ್ನಡ ಕಾವ್ಯಾರಣ್ಯ ಕೇಸರಿ, ವಿದ್ವನ್ಮನೋಹಾರಿ, ಶಿಷ್ಯ ಹೃದಯವಿಹಾರಿ ಮುಳಿಯದವರು." ಇವರು ನಾಡೋಜರು.

ಸೇಡಿಯಾಪು: ಅಳುಕು ಹಿಂಜರಿಕೆ ಎಂಬ ಮುಸುಕಿನೊಳಗಿನ ಪ್ರಖರ ಜ್ಞಾನಜ್ಯೋತಿ. ತೀಕ್ಷ್ಣ ವಿಮರ್ಶಕ ಪ್ರಜ್ಞೆಯ ಪರುಷಕ್ಕೆ ಲೇಪಿಸಿದ್ದ ಕವಿಹೃದಯದ ಮಾನವೀಯತೆ. ಭಾಷಣಸುಖಿಗಳಲ್ಲ – ಭಾವ ಭಾವನೆಗಳ ಸೌಂದರ್ಯಕ್ಕೆ ಒಪ್ಪುವ ಮತ್ತು ಹೊಂದುವ ಪದಸಮುಚ್ಚಯ ಆಗಳಿಗೆ ಇವರಿಗೆ ಒದಗುತ್ತಿರಲಿಲ್ಲವೋ ಎಂಬಂತೆ. ಸಂವಾದದಲ್ಲಿ ನಿಷ್ಣಾತರು, ಪರೇಂಗಿತಜ್ಞರು. ಮುಳಿಯರ ಮಾತಿನಲ್ಲಿ "ಕನ್ನಡತನಕ್ಕೆ ಒರೆಗಲ್ಲು ಸೇಡಿಯಾಪು."

ಕಡೆಂಗೋಡ್ಲು: ಮಲೆನಾಡಿನ ಕಾರ್ಗಾಲದ ಗಿರಿನಿರ್ಝರಿಣಿ ಪ್ರವಾಹದಂತೆ ಭಾಷಣ. ಕುಮಾರವ್ಯಾಸನ ಅಭಿಮನ್ಯುವನ್ನು ನೆನಪಿಗೆ ತರುವ ವಾಗ್ಸ್ರೋತಸ್ಸು:

ಬವರವಾದರೆ ಹರನ ಮದನಕೆ
ಬೆವರ ತಹೆನವಗಡಿಸಿದರೆ ಮಾ
ಧವನ ಸದೆವೆನು ಹೊಕ್ಕಡಹುದೆನಿಸುವೆನು
ಭಾರ್ಗವನ
ಜವನ ಜವಗೆಡಿಸುವೆನು ಸಾಕಿ
ನ್ನವರವರಲೇನರ್ಜುನನು ಮಾ
ಧವನು ಮುನಿದಡೆ ಗೆಲುವೆನಂಜದೆ ರಥವ
ಹರಿಸೆಂದ

ಸೇಡಿಯಾಪು ಬರೆದಿದ್ದಾರೆ: "ಶಂಕರಭಟ್ಟರೂ ನಾನೂ ಎಂದೂ ಪರಸ್ಪರ ಸ್ಪರ್ಧಿಸಿದವರಲ್ಲ – ಗೆಳೆಯರಾಗಿ ಬಾಳಿದವರು, ಸಮಾನಶೀಲ ವ್ಯಸನರು, ಸಮಾನ ವೃತ್ತಿಯವರು. ನಮ್ಮೊಳಗೆ ಹೀಗೆ ಸಾಮ್ಯ

ಇದ್ದರೂ ಅಂತರ ಬಹಳ ಇತ್ತು–ದೈಹಿಕವಾಗಿ ಹಾಗೂ ಮಾನಸಿಕವಾಗಿ ಆಳಂಗದಲ್ಲಿ, ಗಾಂಭೀರ್ಯದಲ್ಲಿ, ಬಲದಲ್ಲಿ, ತೇಜಸ್ಸಿನಲ್ಲಿ, ಶೌರ್ಯದಲ್ಲಿ, ಪ್ರಭಾವದಲ್ಲಿ ಅವರು ನನಗಿಂತ ಹೆಚ್ಚಿನವರು." ಸೇಡಿಯಾಪು ತಮ್ಮನ್ನು ಬಳ್ಳಕ್ಕೆ (ಅಳತೆಯ ಕಿರಿಮಾನಕ) ಹೋಲಿಸಿಕೊಂಡು "ಕಳಸೆಯನ್ನು (ಹಿರಿಮಾನಕ) ಕಂಡು ಬಳ್ಳ ಕುಗ್ಗುವುದಿಲ್ಲ" ಎಂದಿದ್ದಾರೆ. ಕವಿಗೆ ಕವಿ ಮಣಿಯುವ ವಿರಳ ವಿನಯ.

೧೯೪೯-೫೩ ಅವಧಿಯಲ್ಲಿ ನಾನು ಅದೇ ಕಾಲೇಜಿನಲ್ಲಿ ಗಣಿತ ಲೆಕ್ಚರರ್ ಆಗಿ ಸೇವೆ ಸಲ್ಲಿಸಿದೆ. ಆ ವೇಳೆಗೆ ನಮ್ಮ ಸೇಡಿಯಾಪು ಕಾಲೇಜಿಗೆ 'ಬಡ್ತಿ' ಪಡೆದು ಕನ್ನಡ ಟ್ಯೂಟರ್ ಎಂಬ ಘನ ಅಭಿಧಾನ ಸಹಿತ ನನ್ನಂಥ ಕಿರಿಯರಿಗೂ 'ಜೂನಿಯರ್' ಸಹೋದ್ಯೋಗಿ ಆಗಿದ್ದರು. ಏಕೆಂದರೆ ಆಡಳಿತದ ಅಂಥ ಯಂತ್ರ ಶ್ರೇಣೀಕೃತ ವ್ಯವಸ್ಥೆಗೆ ಮಾತ್ರ ಸಂವೇದಿಸುತ್ತಿತ್ತೇ ಹೊರತು ವಿದ್ವತ್ತಿನ ಪ್ರಖರತೆಗಲ್ಲ–ವಿದ್ಯಾರ್ಥಿಗಳ ಕಾಗುಣಿತ ತಿದ್ದುವ ಕೆಲಸ ಈ ಶಬ್ದಬ್ರಹ್ಮನಿಗೆ!

ಕಾಲೇಜಿನ ಅಧ್ಯಾಪಕರ ಕೊಠಡಿಯಲ್ಲಿ ದಿನ ದಿನ ನಡೆಯುತ್ತಿದ್ದ ಸಾಹಿತ್ಯ ಸರಸ ಸಲ್ಲಾಪಗಳು ಅವೆಷ್ಟೋ. ಅಲ್ಲಿಯ ಪ್ರಮುಖ ಪಾತ್ರಧಾರಿಗಳು ಕಾಲೇಜಿನ ಬ್ರೈನ್‌ಟ್ರಸ್ಟ್ ಎಂಬ ಸಹಜ ಖ್ಯಾತಿ ಭಾಜನರಾಗಿದ್ದ ಇಬ್ಬರು: ಕನ್ನಡ ಟ್ಯೂಟರ್ ಸೇಡಿಯಾಪು ಕೃಷ್ಣಭಟ್ಟರು ಮತ್ತು ಗಣಿತ ಪ್ರೊಫೆಸರ್ ಕೆ. ಎ. ಕೃಷ್ಣಮೂರ್ತಿಯವರು (ಇವರು ನನ್ನ ನೇರ ಗಣಿತ ಗುರುಗಳು, ಕಳೆದ ತಿಂಗಳು, ಮೇ ೧೯೯೬, ತಮ್ಮ ೮೩ನೆಯ ವಯಸ್ಸಿನಲ್ಲಿ ನಿಧನರಾದರು). ಆ ಉನ್ನತ ಭೂಧ್ರಗಳ ನಡುವೆ ೨೩ರ ಹರೆಯದ ನನ್ನದು ತುಸು ಲಘು ಪಾತ್ರ–ಕೋಡಂಗಿಯಂತೆ! ಮೊದಲೆ ಕೊಡಗಿನ ಕೋಡಗ, ಮೇಲೆ ಅಂತಸ್ತು ಸಹಿತವಾದ ಏರು ಜವ್ವನ, ಮತ್ತೆ ಕಳಸಪ್ರಾಯವಾಗಿ ನೂರಾರು ವಿದ್ಯಾರ್ಥಿಗಳಿಂದ (ಅದು ಹುಡುಗರ ಕಾಲೇಜ್) ಅಯಾಚಿತವಾಗಿ ಹರಿದು ಬರುತ್ತಿದ್ದ ಮೆಚ್ಚುಗೆ ಪ್ರವರ್ಧಿಸಿದ ಉನ್ಮತ್ತತೆ–ಕೇಳಬೇಕೇ? ಕಿರಿಯರೊಡನೆ ಕಿರಿಯರಾಗಿ ಬೆರೆಯುತ್ತಿದ್ದ ಈ ಹಿರಿಯರನ್ನು 'ಕೆಣಕಿ' ಅಧಿಕ ಜ್ಞಾನ ಸಂಪಾದಿಸುವುದು ನನ್ನ ಚಾಳಿ ಆಯಿತು.

ಒಬ್ಬ ಆಗಂತುಕನಿಗೆ ಸೇಡಿಯಾಪು ಅವರನ್ನು ಪರಿಚಯಿಸಿದೆ: "ನಾನು ಲೆಕ್ಕಕ್ಕೆ ಮಾಷ್ಟ್ರು, ಇವರೋ ವಾಗ್ದೇವಿಯ ರತ್ನ ಭಂಡಾರದ ಬೀಗ ಒಡೆದಿರುವ ಪ್ರಕಾಂಡ ಪಂಡಿತರು."

ಅವರು ಚಾಟಿಯ ಚಟಕನ್ನು ಲಗಾಯಿಸಿಯೇಬಿಟ್ಟರು: "ಹೌದು! ಲೆಕ್ಕಿಗ ಮಿತಾಕ್ಷರರು, ಆದರೆ ಲೆಕ್ಕಕ್ಕೆ ಒಬ್ಬನೇ!"

ಒಂದು ಸಂಜೆ ಅವರ ಬಿಡಾರಕ್ಕೆ ನಡೆದು ಹೋದೆ. "ಅಡಗುವ ರಾತ್ರಿಯನೆಬ್ಬಟ್ಟುತ ಮೂಡಲ ಕೆಂಪೇರುತ್ತಿದ್ದಾಗ ಹೊರಟೆ. ತಲುಪಿದ್ದು ಈಗ! ಎಷ್ಟು ದೂರ ನಿಮ್ಮ ಮನೆ–ತದ್ದೂರೇ ತದ್ವಂತಿಕೇ!" ಎಂದೆ ಲಘುವಾಗಿ.

"ಹಾದಿಯಲ್ಲಿ ಯಾವ ವಿಹಿರೆ ಎದುರಾದಳು?" ('ತರುಣ ಧಮನಿ' ಕಾವ್ಯ ಓದಿದರೆ ಈ ಪ್ರಶ್ನೆಯ ಸ್ವಾರಸ್ಯ ತಿಳಿಯುವುದು.)

ಆಗ ಅವರ ಕಿರಿ ಮಕ್ಕಳಿಬ್ಬರು–ಪ್ರಾಯಶಃ ಜಯರಾಮ ಮತ್ತು ಶಿವ

ಸುಂದರಿ–ಆಡುತ್ತ ಮೊಗಸಾಲೆಗೆ ಬಂದರು. ಅವರನ್ನು ರಂಜಿಸುವ ಸಲುವಾಗಿ ಒಂದು ಕನ್ನಡ ಪದ್ಯವನ್ನು ತಿರುಚಿ ಅಭಿನಯ ಸಹಿತ ಉದುರಿಸಿದೆ:

ಟೋಮುಲಾಕುಟಾಕುಯಾನಟೇಪದೀಖಿ
ಟಾಡುಗಾವ
ಟಾಸೆಡುಮ್ತುದೊಮ್ನುಡಮುಕ್ಕಿಮ್ನುಟತ್ತುಬು
ಟೋತಿಬೊಯ್ಯಲೋಕಡುಮ್ತುದೊಮ್ನು
ಡಿದಿಹು ಟಿಪ್ರುಹೊ
ಟೋಮುಲಾಕಡದಿಬುಡದಿಬುಣ್ರಾಪಟಿತ್ತುಬುಳೆ

ಎರಡನೆಯ ಸಾಲಿನ "ಡುಮ್ತುದೊಮ್ನು ಡಮುಕ್ಕ" ಎನ್ನುವಲ್ಲಿಯ ಓಘ ಆ ಮಕ್ಕಳಿಗೆ ಮಾತ್ರವಲ್ಲ ವಯ್ಯಾಕರಣಿ ಸೇಡಿಯಾಪು ಅವರಿಗೂ ವಿಶೇಷ ಕಚಗುಳಿ ಇಟ್ಟು ಖುಷಿ ಕೊಟ್ಟಿತು. ಮುಂದೆ ಅವರು ನನಗೆ "ಪ್ರಿಯ ಟೋಮುಲಾಕು" ಎಂದು ಬರೆಯುವುದೇ ರೂಢಿ ಆಯಿತು. (ವಾಚಕರು ಈ ಸಾಲುಗಳನ್ನು ಗಟ್ಟಿಯಾಗಿ ಓದಿದರೆ ಅಂತರ್ಗತ ರಾಚನಿಕ ತಂತ್ರ ಒಡನೆ ಸ್ಫುರಿಸದಿರದು. ಮುಂದೆ ಅವರೇ ಈ ತಂತ್ರ ಬಳಸಿ ನೂತನ ಕುಕವಿತೆಗಳನ್ನು ಹೊಸೆದು ಕೃತಾರ್ಥರಾಗಬಹುದು.)

ಕನ್ನಡದಲ್ಲಿ ವಿಜ್ಞಾನ ವಾಙ್ಮಯ ರಚಿಸಲು ತೊಡಕೇನು? (ನಾನು "ವಿಜ್ಞಾನ ಸಾಹಿತ್ಯ" ಎಂದು ಮಾಮೂಲಿನಂತೆ ಬರೆದಿದ್ದೆ. ಅದನ್ನು 'ವಿಜ್ಞಾನ ವಾಙ್ಮಯ' ಎಂದು ಆಧಾರ ಸಹಿತ ತಿದ್ದಿಕೊಟ್ಟವರು. ಸ್ವತಃ ಸೇಡಿಯಾಪು.) ನನ್ನ ವೃತ್ತಿಗೆ ಸಂಬಂಧಿಸಿದಂತೆ ಈ ವಿಷಯ ಕುರಿತು ನಾನೊಂದು ಪ್ರಬಂಧ ಮಂಡಿಸಬೇಕಾಗಿತ್ತು. ಭಾಷಾ ವಿಚಾರಗಳಿಗೆ ನಿಕಷಪ್ರಾಯರಾಗಿದ್ದ ಕೃಷ್ಣಭಟ್ಟರ ಚಿಂತನೆಗಳನ್ನು ತಿಳಿಯುವ ಸಲುವಾಗಿ ಅವರ ಪ್ರಬಂಧಗಳ ಮೇಲೆ ದೃಷ್ಟಿ ಹಾಯಿಸಿದೆ. ಆ ಮೊದಲೇ ಅನುಭವದಿಂದ ನಾನೊಂದು ಸಂಗತಿ ಅರಿತಿದ್ದೆ: ಈ ತೊಡಕು ಭಾಷಾಜನ್ಯವಾದುದಲ್ಲ, ಲೇಖಕಮೂಲವಾದುದು. ಮುಳಿಯ ತಿಮ್ಮಪ್ಪಯ್ಯ ಸ್ಮಾರಕ ಗ್ರಂಥ (೧೯೫೭) "ಶ್ರದ್ಧಾಂಜಲಿ"ಯಲ್ಲಿ ಪ್ರಕಟವಾಗಿದ್ದ ಸೇಡಿಯಾಪು ಲೇಖನ 'ಹೊಸಗನ್ನಡ ಗದ್ಯಭಾಷೆ' ಇದೇ ವಿಷಯವನ್ನು ಸಮಗ್ರವಾಗಿ ಚರ್ಚಿಸಿತ್ತು, ನನ್ನ ಅನುಭವಜನ್ಯ ತೀರ್ಮಾನಕ್ಕೆ ಸೈದ್ಧಾಂತಿಕ ಅಸ್ತಿಭಾರ ಒದಗಿಸಿತ್ತು. ಅವರು ಬರೆದಿದ್ದಾರೆ:

"ನಿಜವಾಗಿ 'ನಮ್ಮ ಭಾಷೆ'ಯನ್ನು ಬೆಳೆಯಿಸುವುದೆಂದರೆ, ನಮ್ಮ ಭಾಷೆಯಲ್ಲಿಯೇ ನಮ್ಮ ವಿಚಾರಗಳನ್ನು ಬೆಳೆಯಿಸುವುದು; ಹಾಗೆ ಬೆಳೆದ ವಿಚಾರಗಳನ್ನು ಯಥಾವತ್ತಾಗಿ ಪ್ರಕಾಶಪಡಿಸುವುದು; ನಮ್ಮ ಭಾಷೆಯ ಉತ್ತಮ ಗ್ರಂಥಗಳನ್ನು ಅಧ್ಯಯನ ಮಾಡಿ, ನಮ್ಮ ವಾಕ್ಸಂಪತ್ತಿಯನ್ನು ಹೆಚ್ಚಿಸಿಕೊಂಡು, ಆಯಾ ಶಬ್ದಗಳ ಆಳವರಿತು ಪ್ರಯೋಗಿಸುವುದು. ನಮ್ಮಲ್ಲಿಯ ಶಬ್ದ ದಾರಿದ್ರ್ಯದ ಕೂಗಿಗೆ, ನಮ್ಮ ಭಾಷಾಭ್ಯಾಸದ ಅಭಾವವೇ ಮುಖ್ಯ ಕಾರಣವಾಗಿದೆ.... ಶಾಸ್ತ್ರೋಪಯೋಗಿ ಗದ್ಯವನ್ನು ನಿರ್ಮಿಸುವುದು ಸಾಧಾರಣ ಗದ್ಯವೇ ಆಗಿದೆ. ಎಂದರೆ, ಶಾಸ್ತ್ರ ಗದ್ಯವು ಸಾಧಾರಣ ಗದ್ಯಕ್ಕಿಂತ ಬೇರೆಯಲ್ಲ; ಅದರದೇ ಆದ ಒಂದು ರೂಪ. ಒಂದು ಭಾಷೆಯ ಸಾಧಾರಣ ಗದ್ಯದಲ್ಲಿ ಎಷ್ಟರ ಮಟ್ಟಿಗೆ ಅಸಂದಿಗ್ಧವಾದ ಅರ್ಥಪ್ರಕಾಶನ, ವಸ್ತುಸ್ಥಿತಿಯ ಯಥಾರ್ಥ

ನಿರೂಪಣೆ. ಸಮಗ್ರ ವಿವರಣೆ, ಇವುಗಳನ್ನು ಮಾಡುವ ಶಕ್ತಿ ಹೆಚ್ಚುವುದೋ ಅಷ್ಟರ ಮಟ್ಟಿಗೆ ಆ ಭಾಷೆಯ ಶಾಸ್ತ್ರ ಗದ್ಯವು ಶಕ್ತಿ ಸಂಪನ್ನವಾಗುವುದು...."

ಇನ್ನೊಂದು ಕಡೆ ಬರೆದಿದ್ದಾರೆ: "ನಮ್ಮ ಭಾಷೆಗೆ ಬಂದಿರುವ ರೋಗವು ಶಬ್ದಗಳ ಅಭಾವವೆಂಬುದಕ್ಕಿಂತ ಶಬ್ದಗಳ ಅಪವ್ಯಯ ಎಂದು ಹೇಳುವುದೇ ಹೆಚ್ಚು ಸಮಂಜಸ. ನಾವು, ಎಂದರೆ ಬರಹಗಾರರು, ನಮ್ಮ ಪ್ರಯೋಗಗಳ ಸಾಧುತ್ವವನ್ನು ಪರೀಕ್ಷಿಸುವ ಗೊಡವೆಗೆ ಹೋಗುತ್ತೇವೆಯೇ?"

ಬಿಡಿ ಸಮಸ್ಯೆಯಿಂದ ತೊಡಗಿ ಸಾರ್ವತ್ರಿಕ ನಿಯಮದ ಮಂಡನೆ, ಮತ್ತೆ ಈ ನಿಯಮವನ್ನು ಆಧರಿಸಿ ಬಿಡಿ ಸಮಸ್ಯೆಯ ಪರಿಹಾರ—ಇದು ಸೇಡಿಯಾಪು ಶೈಲಿ. ವೈಜ್ಞಾನಿಕ ವಿಧಾನದ ತತ್ತ್ವವಿದು.

ಇವರ ಕವಿತೆಗಳನ್ನೂ ಖಂಡಕಾವ್ಯಗಳನ್ನೂ ಓದುವಾಗ, ಅಲ್ಲಲ್ಲಿ ಮಿಂಚಿನ ಸ್ಪರ್ಶದಿಂದ ಪುಳಕಿತರಾಗುವೆವಾದರೂ—

"ಜಗಕೆ ನಗೆಯೇ ದೀಪ; ಕತ್ತಲೆಗೆ ಬಹುರೂಪ
ಎಲ್ಲಿ ಕಣ್ ಕಾಣದೋ ಎಲ್ಲಿ ಬಗೆ ಬಗೆಯದೋ
ಅಲ್ಲಿ ಕತ್ತಲೆಯ ವಾಸ"
"ಅಂಬುಜದ ಬಾಯ್ತೆರೆಗೆ ಸಿಡಿಲಿನ
ತುಂಬಿ ಹೊಕ್ಕಿತು !"
"ನರರ ಚಿಕ್ಕಳಿಕೆಯು ಕೊಚ್ಚು
ರಾಗರೋಷಗಳನು ಹಿಡಿವ ಬಲ್ಮೆಗಳನು
ಒರೆಗೆ ಹಚ್ಚು !"

—ಸಮಗ್ರವಾಗಿ ಇವರು ನಮಗೆ ಆಪ್ತರಾಗುವುದು ಮತ್ತು ಸದಾ ಪ್ರಸ್ತುತರಾಗುವುದು ಇವರ ಗಹನ ಶಾಸ್ತ್ರೀಯ ಚಿಂತನೆಗಳಲ್ಲಿ ಜಾಗೃತವಾಗಿರುವ ಕವಿಹೃದಯದಿಂದ: ಅಂದರೆ ಶಾಸ್ತ್ರವನ್ನು ಕಲೆಯ ಮಟ್ಟಕ್ಕೆ ಮತ್ತು ಮಾರ್ದವತೆಗೆ ಎತ್ತರಿಸಿರುವ ಬಲ್ಮೆ ಇವರದು.

ಒಮ್ಮೆ ಕೇಳಿದೆ: "ಪರಂಪರೆ ಮತ್ತು ಸಂಪ್ರದಾಯ ಎರಡನ್ನೂ ಟ್ರೆಡಿಷನ್ ಎನ್ನುವ ಅರ್ಥದಲ್ಲಿ ಬಳಸುವುದು ವಾಡಿಕೆ ಆಗಿದೆ. ಇವುಗಳ ನಿಷ್ಪತ್ತಿ ಹೇಗೆ?"

"ಇಂಗ್ಲಿಷ್, ಅಥವಾ ವ್ಯಾಪಕವಾಗಿ ಪಾಶ್ಚಾತ್ಯ, ಸಂಸ್ಕೃತಿಯ ಮುನ್ನೆಲೆಯಲ್ಲಿ ಟ್ರೆಡಿಷನ್ ಪದದ ಅರ್ಥ ಸ್ವಾರಸ್ಯ ಗ್ರಹಿಸಿ ಬಳಿಕ ಅದಕ್ಕೆ ಸಂವಾದಿಯಾಗಿ ನಮ್ಮ ಯಾವ ಪದ ಬಳಸಬೇಕು ಎಂದು ವಿಮರ್ಶಿಸುವಾಗ ಈ ಗೊಂದಲ ತಲೆದೋರುತ್ತದೆ. ಭಿನ್ನ ಸಂಸ್ಕೃತಿಜನ್ಯ ಭಾಷೆಗಳ ನಡುವೆ ಪರಿಕಲ್ಪನೆಗಳ ಕೊಡು-ಕೊಳು ಕ್ರಿಯೆ ಜರಗುವಾಗ ಉದ್ಭವಿಸುವ ಸಾರ್ವತ್ರಿಕ ಸಮಸ್ಯೆ ಇದು. ಇದರ ಪರಿಹಾರಕ್ಕಿರುವ ಏಕೈಕ ಮಾರ್ಗವೆಂದರೆ ನಾವು ಭಾರತೀಯ ಸಂಸ್ಕೃತಿಯ ಮುನ್ನೆಲೆಯಲ್ಲಿಯೇ ಈ ಮೂಲಭೂತ ಪರಿಕಲ್ಪನೆಗಳನ್ನು ಅರ್ಥವಿಸಿ ವ್ಯಾಖ್ಯಾನಿಸಲು ಪ್ರಯತ್ನಿಸುವುದು." (ಗಮನಿಸಬೇಕು: 'ಮುನ್ನೆಲೆ' ಪ್ರಯೋಗ.)

ನಮ್ಮ ಸಂಭಾಷಣೆಯ ಸಾರವಿದು:

ಜೀವಂತ ಜನಾಂಗದ ಪಥಕ್ರಮಣದಲ್ಲಿ ಸಂಸ್ಕೃತಿ ಕೆನೆಗಟ್ಟುತ್ತದೆ: ಜೀವನ ಪ್ರಕ್ರಿಯೆಗಳ ಸಾರವಿದು. ತಲೆಮಾರಿನಿಂದ ತಲೆಮಾರಿಗೆ ಸಂಸ್ಕೃತಿ ಪ್ರವಹಿಸುತ್ತದೆ. ಈ ಪ್ರವಾಹವೇ ಪರಂಪರೆ. ಪರಂಪರೆಯ ವರ್ತಮಾನ ಮುಖ ಸಂಪ್ರದಾಯ. ಪ್ರಾಚೀನ ಕಾಲದಿಂದ ನಮಗೆ ಬಳುವಳಿಯಾಗಿ ಬಂದಿರುವ ಜೀವನ ಧರ್ಮ ಅಥವಾ ಮೌಲ್ಯಗಳ ಮೊತ್ತ ಪರಂಪರೆ. ಇಂದು ನಾವು ಈ ಪರಂಪರೆ

ಯನ್ನು ವಾಸ್ತವವಾಗಿ ಜೀವನದಲ್ಲಿ ಹೇಗೆ ಅನುಷ್ಠಾನಿಸುತ್ತೇವೆ ಅಥವಾ ಅನುಷ್ಠಾನಿಸಬೇಕು—ಇದು ಸಂಪ್ರದಾಯ. ಆದ್ದರಿಂದ ಬೇರಿಗೂ ಚಿಗುರಿಗೂ ನಡುವಿನ ಅನ್ಯೋನ್ಯ ಸಂಬಂಧ. ಅಂದರೆ ಕಾಂಡ ಪರಂಪರೆ, ಚಿಗುರು ಸಂಪ್ರದಾಯ; ಗಂಗೋತ್ರಿಗೂ ಪ್ರಯಾಗಕ್ಕೂ ನಡುವಿನ ಭಾಗೀರಥಿ ಪರಂಪರೆ, ಪ್ರಯಾಗದಲ್ಲಿಯ ತೀರ್ಥ ಸಂಪ್ರದಾಯ. "ಸತ್ಯಂ ವದ ಧರ್ಮಂ ಚರ" ಪರಂಪರೆಯಿಂದ ಬಂದಿರುವ ಜೀವನ ಮೌಲ್ಯ. ಇದನ್ನು ನಿತ್ಯ ಜೀವನದಲ್ಲಿ ನಾವು ಹೇಗೆ ಅನುಸರಿಸುವೆವು ಎಂಬುದು ಇಂದಿನ ಸಂಪ್ರದಾಯ. ಜೀವನ ನಾಣ್ಯಕ್ಕೆ ಪರಂಪರೆ ರಾಷ್ಟ್ರಲಾಂಛನವಿದ್ದಂತೆ, ಸಂಪ್ರದಾಯ ಟಂಕಿತ ಮೌಲ್ಯದಂತೆ. ಎಂದೇ ಪರಂಪರೆ ಇರದ ಸಂಪ್ರದಾಯ ಬುರುಗು ನೊರೆ, ಸಂಪ್ರದಾಯವಿರದ ಪರಂಪರೆ ನಿಂತ ನೆರೆ.

ಸಾಂಪ್ರದಾಯಿಕವಾಗಿ (ಪಾರಂಪರಿಕವಾಗಿ ಅಲ್ಲ!) ಸೇಡಿಯಾಪು ಕಲಿತದ್ದು ಒಂಬತ್ತನೆಯ ಇಯತ್ತೆವರೆಗೆ ಮಾತ್ರ. ಅವರ ಪಾಂಡಿತ್ಯವೆಲ್ಲವೂ ಸ್ವಯಾರ್ಜಿತ—ಜೀವನಶಿಕ್ಷಣ ಶಾಲೆಯಲ್ಲಿ. ನಡೆ ನುಡಿ ಬಗೆಗಳಲ್ಲಿ ಐಕ್ಯ ಸಾಧಿಸಿರುವ ಪ್ರಖರ ಪ್ರತಿಭೆ ಯಾವ ಔನ್ನತ್ಯಕ್ಕೆ ಏರಬಹುದೆಂಬುದಕ್ಕೆ ಸೇಡಿಯಾಪು ಕೃಷ್ಣಭಟ್ಟರು ದಿವ್ಯ ಪ್ರತೀಕ.

ವಿಸ್ತಾರದಲಿ ಬಾಳು ವೈಶಾಲ್ಯದಿಂ ಬಾಳು
ಕತ್ತಲೆಯ ಮೊಡಕು ಮೂಲೆಗಳ ಸೇರದಿರು
ಭಾಸ್ಕರನನುಗ್ರಹವೆ ನೂತ್ನ ಜೀವನಸತ್ತ್ವ
ಮೃತ್ಯು ನಿನಗಲ್ಪತೆಯೊ ಮಂಕುತಿಮ್ಮ



ಧೈರ್ಯವು ನಮ್ಮ ದೃಷ್ಟಿಯಲ್ಲಿ ಕಟ್ಟಿರಬೇಕು. ಧಾರ್ಮಿಕ ಶಿಕ್ಷಣವಿಲ್ಲದೇ ನಮ್ಮ ನಡೆನುಡಿಗಳಲ್ಲಿ ನೀತಿ ತುಂಬಲಿಕ್ಕಿಲ್ಲ. ನಾಸ್ತಿಕತೆ ನಮಗುಚಿತವಲ್ಲ. ಧಾರ್ಮಿಕ ದೃಷ್ಟಿಗೆ ನಾವು ಮಹತ್ವ ಕೊಡಬೇಕು.

—ಗಾಂಧೀಜಿ

ನಿನ್ನ ನೆನಪಲ್ಲಿ

ಸಿ. ನಾಗಣ್ಣ

೨-೯-೧೯೫೪.

ಅನೇಕ ವರ್ಷಗಳ ನಂತರ ಇದ್ದಕ್ಕಿದ್ದ ಹಾಗೆಯೇ ಈವತ್ತು ಲೀಲಾಳ ನೆನಪಾಯಿತು. ಲೀಲಾ ಅಂದ ಕೂಡಲೇ ನೀವು ತಪ್ಪು ಅಭಿಪ್ರಾಯಕ್ಕೆ ಬರುವ ಮೊದಲು ನಾನು ನಿಮಗೆ ತಿಳಿಸುವುದು ಒಳ್ಳೆಯದು, ಲೀಲಾ ನನ್ನ ತಂಗಿ!

ಈ ವಿಷಯ ಜಗತ್ತಿನಲ್ಲಿ ಬಹಳ ಜನಕ್ಕೆ ಗೊತ್ತಿಲ್ಲ.

ನನ್ನ ಪೆಟ್ಟಿಗೆಯಲ್ಲಿ ರಬ್ಬರ್ ಗೂಬೆಯನ್ನು ಕಂಡ ಕಾರಣ ನನಗೆ ಲೀಲಾಳ ನೆನಪಾಯಿತು. ಹಳೆ ಶರಟು, ಧೋತಿ ಹಾಗೂ ಹಳೆ ಕಾಗದವನ್ನು ತುರುಕಿದ್ದ ಟ್ರಂಕು ತೆಗೆಯಲು ಈವತ್ತು ತೊಡಗಿದ್ದೆ. ಅದರೊಳಗೆ ರಬ್ಬರ್ ಗೂಬೆಯ ಬೊಂಬೆ ಇರುವುದು ಗೊತ್ತಾಯಿತು. ಅದರ ಬಣ್ಣ ಮಾಸಿತ್ತಲ್ಲದೆ ಮೊದಲಿನಷ್ಟು ಅದು ಆಕರ್ಷಕವಾಗಿರಲಿಲ್ಲ. ಅದರ ಗಾಜಿನ ಕಣ್ಣುಗಳು ಮಾತ್ರ ಇನ್ನೂ ಹೊಳಪಿನಿಂದ ಕೂಡಿದ್ದವು.

ಆ ಗೊಂಬೆ ಅಂದರೆ ನನಗೆ ಬಹಳ ಇಷ್ಟ. ಅದು ನನ್ನ ಹತ್ತಿರ ಇದೆ ಅಂತ ನನಗೆ ಬಹಳ ಹೆಮ್ಮೆಯೆನಿಸಿತ್ತು. ಅದನ್ನ ಪಡೆಯೋದಕ್ಕೆ ಮೊದಲು ಅದಕ್ಕಾಗಿ ಎಷ್ಟು ಹಂಬಲಿಸಿದ್ದೆ ಅಂತ. ಅದನ್ನ ನನ್ನ ಬ್ಯಾಗಿನಲ್ಲಿಟ್ಟುಕೊಂಡು ನಾನು ಸ್ಕೂಲಿಗೆ ಹೋದ ದಿನ ಎಷ್ಟು ದೊಡ್ಡವನಾದ ಹಾಗೆ ನನಗೆ ಭಾಸವಾಗಿತ್ತು. ನನ್ನ ಬಳಿ ಆ ಹೊತ್ತು ಇದ್ದ ಆ ಬೊಂಬೆ ಒಂದು ಅಮೂಲ್ಯ ವಸ್ತು. ಅಪ್ಪು ಕುಟ್ಟನ್‌ನ ಬಳಿ ಇದ್ದ ಹರಳಿನ ಪೆಟ್ಟಿಗೆಯಾಗಲೀ, ಪುಟಾಣಿ ಎಂಬ್ರಾನ್‌ನ ಮೌತಾರ್ಗನ್ ಆಗಲೀ ನನ್ನ ಬೊಂಬೆ ಮುಂದೆ ಏನೇನೂ ಆಗಿರಲಿಲ್ಲ. ನನ್ನ ಬೊಂಬೆಯನ್ನು ಎಲ್ಲಿಂದ ತಂದಿದ್ರು ಗೊತ್ತಾ, ಕೊಲಂಬೋದಿಂದ!

ರಬ್ಬರ್ ಗೂಬೆಗೆ ಎರಡು ವಿಶೇಷವಾದ ಗುಣಗಳಿದ್ದವು. ಅದರ ಕೆಳಗಿನ ಒಂದು ಗುಂಡಿಯನ್ನು ಒತ್ತಿದರೆ ಅದರ ಹೊಟ್ಟೆ ತೆರೆದುಕೊಳ್ಳೋದು. ಒಳಗೆ ಒಂದು ಪುಟ್ಟ ಮೆತ್ತನೆಯ ಮೇಲೆ ಒಂದು ಪುಟ್ಟ ನೀಲಿ ಶೀಶೆ ಇತ್ತು. ಆ ಶೀಶೆಯಲ್ಲಿ ಪರಿಮಳ ವಿತ್ತು. ಅದರ ಪರಿಮಳ ಮುಚ್ಚಳ ತೆರೆದರೆ ಇಡೀ ತರಗತಿ ಕೊಠಡಿಯೆಲ್ಲಾ ಮಲ್ಲಿಗೆಯ ಸುವಾಸನೆಯಿಂದ ತುಂಬಿ ಹೋಗ್ತಾ

ಮೂಲ: ಎಂ. ಟಿ. ವಾಸುದೇವನ್ ನಾಯರ್ ಅವರ ಮಲಯಾಳಂ ಲೇಖನದ ಅನುವಾದ.

ಯಿತ್ತು. ಹುಡುಗೀರು ಕುಳಿತಿದ್ದ ಬೆಂಚುಗಳ ಕಡೆಯಿಂದ ಗುಸುಗುಸು ಕೇಳಿಬರೋದು.

"ಆ ಮಗು ತಂದಿದೆ."

ಆ ಮಗು ಅಂತ ಅವರು ಕರೆಯುತ್ತಿರುವುದು ನನ್ನನ್ನೇ ಎಂದು ನೆನೆದು ನನಗೆ ಹೆಮ್ಮೆ ಎನಿಸುವುದು.

ಅದನ್ನು ಮಾಪಿಳ್ಳಾ ಪರಿಮಳವೆಂದು ಸಂಕುನ್ನಿ ಕರೆದ ಪರಿಣಾಮವಾಗಿ ನಾವು ಕೈಕೈ ಮಿಲಾಯಿಸಿದ್ದೆವು. ಇದನ್ನ ಈಗ ನೆನೆದರೆ ನನಗೆ ವಿಶಾದವೆನಿಸುವುದಿಲ್ಲ.

ಆ ಬೊಂಬೆಯ ಇನ್ನೊಂದು ವಿಶೇಷವೆಂದರೆ ಅದರ ಹಿಂಭಾಗದ ದಾರವನ್ನು ಎಳೆದರೆ ಗೂಬೆ ತನ್ನ ಕಣ್ಣುಗಳನ್ನು ಹೊರಳಿಸುತ್ತಿತ್ತು.

ಮಧ್ಯಾಹ್ನದ ವೇಳೆ ಮಕ್ಕಳ ಮುಂದೆ ಆ ಬೊಂಬೆಯನ್ನು ಪ್ರದರ್ಶಿಸುವಾಗ ಅಜ್ಜಿ ಹೇಳುತ್ತಿದ್ದ ಮಾಯದ ಕುದುರೆಯನ್ನು ಹೊಂದಿದ್ದ ರಾಜಕುಮಾರನ ಕತೆ ನನಗೆ ನೆನಪಾಗುವುದು. ಆ ಗೂಬೆಯೇ ನನ್ನ ಪ್ರಾಣ. ಅದನ್ನು ನಾನು ಯಾರ ಬಳಿಯೂ ಕೊಡಲೊಲ್ಲೆ. ಅದು ಹೇಗೆ ಕೆಲಸ ಮಾಡುತ್ತಿತ್ತೆಂಬುದು ನನ್ನ ಬಿಟ್ಟು ಬೇರೆ ಯಾರಿಗೆ ತಾನೇ ಗೊತ್ತಿತ್ತು?

ಅಂದ ಹಾಗೆ, ನಾನು ಲೀಲಾಳ ಬಗ್ಗೆ ಹೇಳುತ್ತಿದ್ದೆನಲ್ಲವೆ? ಆದರೆ ಒಂದು ವಿಷಯ ನಿಮಗೆ ಹೇಳುವುದನ್ನು ಮರೆತೆ. ವಾಸ್ತವವಾಗಿ ನನಗೆ ಬೊಂಬೆಯನ್ನು ಕೊಟ್ಟಿದ್ದವಳು ಲೀಲಾಳೇ.

ಗತಕಾಲದ ಸಂಪುಟದಿಂದ ಹರಿದ ಒಂದು ಪುಟ ಇದು.

ಹರಿದ ಚಡ್ಡಿಯಲ್ಲಿ ಒಡೆದು ಹೋದ ಗುಂಡಿಗಳು; ಆ ಚಡ್ಡಿಯನ್ನು ಹಾಕಿಕೊಂಡು ಅದು ಕೆಳಕ್ಕೆ ಜಾರದಿರಲಿ ಅಂತ ಸೊಂಟಕ್ಕೊಂದು ದಾರ ಬಿಗಿದುಕೊಳ್ಳುತ್ತಿದ್ದೆ. ನನಗೆ ಆಗ ಹನ್ನೊಂದೊ ಹನ್ನೆರಡೋ ವಯಸ್ಸು. ನನ್ನ ಅಮ್ಮ ಮತ್ತು ನನ್ನ ಅಣ್ಣಂದಿರು ಮಾತು ಮಾತಿಗೂ ನನ್ನ ತಲೆ ಮೇಲೆ ಮದ್ದುತ್ತಿದ್ದರು. ಅಮ್ಮಲಮ್ಮನ ಮಗ ವಾಸು ಬಹಳ ತುಂಟ ಹುಡುಗ ಅನ್ನುವ ಮಾತು ಎಲ್ಲರ ಬಾಯಲ್ಲೂ ಇತ್ತು. ನಮ್ಮ ಪಕ್ಕದ ಮನೆ ಪಾರುಅಮ್ಮ ಇದನ್ನು ಎಲ್ಲ ಕಡೆ ಹಬ್ಬಿಸಿಬಿಟ್ಟಿದ್ದಳು. ಸಾಮಾನ್ಯವಾಗಿ ಮಧ್ಯಾಹ್ನದ ಹೊತ್ತು ನಮ್ಮ ಮನೆ ಹೆಂಗಸರ ಜೊತೆ ಅವಳು ಹರಟಲು ಬರುತ್ತಿದ್ದಳು. ಅಮ್ಮನ ತಲೆ ಹೇನು ಸೋಸುತ್ತಾ ಎಲ್ಲ ಸುದ್ದಿಗಳನ್ನು ಮಾತಾಡುತ್ತಿದ್ದಳು. ಅವಳ ಮಾತು ಕೇಳೋದು ಅಂದ್ರೆ ನನಗೆ ಇಷ್ಟ. ಮಾಲತೋಳ್ ಬಗ್ಗೆಯಾಗಲೀ ಅಥವಾ ವಯಸ್ಸಿಗೆ ಬಂದ ಇನ್ಯಾವುದೋ ಹುಡುಗಿಯ ಬಗ್ಗೆಯಾಗಲೀ ಅವಳು ಮಾತಾಡುವಳು. ಆ ವಿಷಯವೆಂದರೆ ನನಗೆ ಹೆಚ್ಚು ಆಪ್ಯಾಯಮಾನ. ಈ ಮಾತುಗಳ ಮಧ್ಯೆ ಇದ್ದಕ್ಕಿದ್ದಂತೆ "ಆ ಎಲೆಯಡಿಕೆ ಪೆಟ್ಟಿಗೆ ತಗೊಂಬಾ, ಪುಟಾಣಿ" ಎನ್ನುತ್ತಿದ್ದಳು.

ಅಲ್ಲಿಗೆ ಶುರುವಾಗೋದು ತಕರಾರು. ನಾನು ಪೆಟ್ಟಿಗೆ ತರುತ್ತಿರಲಿಲ್ಲ, ಅಮ್ಮ ರೇಗುತ್ತಿದಳು. ನಾನು ಅವಳ ಮಾತು ಕೇಳುತ್ತಿರಲಿಲ್ಲ, ಬೈಗಳಿಗೆ ನಾಂದಿಯಾಗೋದು. ಆಮೇಲೆ ನಾನು ಏನಾದ್ರೂ ಹೇಳಿಬಿಡುತ್ತಿದ್ದೆ. ಬೆನ್ನ ಮೇಲೆ ಒಂದು ಗುದ್ದು ಬೀಳ್ತಾಯಿತ್ತು.

ಇದು ಮಾಮೂಲಿಯಾಗಿಬಿಟ್ಟಿತ್ತು.

ನನ್ನ ಅಮ್ಮನ ವಿಷಯದಲ್ಲಿ ಸೇರಿ ಹೊರೆಯ ಹೆಂಗಸರಿಗೆ ಬಹಳ ಗೌರವ. ಇದಕ್ಕೆ ಕಾರಣವೇನೆಂದರೆ, ಅಮ್ಮನ ಹತ್ತಿರ ಕಡವಾಗಿ ಅವರು ಹಣವನ್ನೋ, ಅಕ್ಕಿಯನ್ನೋ ಯಾವಾಗ ಅಂದರೆ ಆವಾಗ ಪಡೆಯುತ್ತಿದ್ದರು. ಎಲ್ಲಿಗಾದರೂ ಔತಣಕ್ಕೆ ಹೋಗಬೇಕೆಂದಾಗ ಅಮ್ಮನ ಒಡವೆಗಳನ್ನು ಅವರು ಈಸಿಕೊಂಡು ಹೋಗೋರು; ಹಾಗಾಗಿ ಅವಳ ಜೊತೆ ತುಂಬಾ ಹೊಂದಿಕೊಂಡಿದ್ದರು.

"ಆ ಹೆಂಗಸಿಗೆ ತಿಂಗಳು ತಿಂಗಳು ಎಷ್ಟು ಎಷ್ಟು ಹಣ ಬರತ್ತೆ ಗೊತ್ತಾ?"

"ಕೊಲಂಬೋದಲ್ಲಿ ಅವ ಭಾರಿ ಹಣ ಸಂಪಾದಿಸ್ತಿದ್ದಾನೆ ಅಂತಾರೆ."

ಹೀಗೆ ಜನರು ಮಾತನಾಡಿಕೊಳ್ಳುತ್ತಿದ್ದರು.

ಅಪ್ಪ ಸಿಲೋನ್‌ನಲ್ಲಿ ಬಹಳ ದಿನದಿಂದ ಇದ್ದರು. ಪ್ರತಿ ತಿಂಗಳು ತುಂಬಾ ಹಣ ಕಳಿಸ್ತಾಯಿದ್ದರು.

ನಾವು ನಾಲ್ಕು ಮಂದಿ ಗಂಡು ಮಕ್ಕಳು. ನಮಗೆ ಅಕ್ಕ ತಂಗಿಯರು ಇದ್ದಿಲ್ಲ. ಜನರ ದೃಷ್ಟಿಯಲ್ಲಿ ಇದು ಬಹಳ ಅನುಕೂಲಕರವಾದ ಸಂಗತೀನೆ. ಪಾರು ಅಮ್ಮನ ಪ್ರಕಾರ ಹೆಣ್ಣು ಮಕ್ಕಳಿಲ್ಲದಿರುವುದು ಅದೃಷ್ಟವೇ ಸರಿ. ಪಾರು ಅಮ್ಮನಿಗೆ ಹೀಗೆ ಅನ್ನಿಸಿದ್ದು ಸಹಜವೇನೋ; ಅವಳ ಮನೆಯಲ್ಲಿ ಏತ ಗುಡುವಷ್ಟು ಹೆಣ್ಣು ಸಂತಾನ. ಎಲ್ಲಾ ಹೆಂಗಸರು ಆ ಕುಟುಂಬಕ್ಕೆ ಹಡೆದು ಕೊಟ್ಟಿದ್ದು ಹದಿಮೂರು ಹೆಣ್ಣು ಮಕ್ಕಳನ್ನು.

ಅಪ್ಪ ಮತ್ತು ಅಮ್ಮ ಒಂದು ಹೆಣ್ಣು ಮಗುವಿಗಾಗಿ ತುಂಬಾ ಆಸೆಪಟ್ಟಿದ್ದರು. ಮೂರು ಗಂಡು ಮಕ್ಕಳಾದ ಬಳಿಕ ಅಮ್ಮ ಗರ್ಭಿಣಿಯಾದಾಗ ಶಾಸ್ತ್ರದವ ಹೇಳಿದ್ದ, "ಈ ಬಾರಿ ಹೆಣ್ಣು ಮಗೂನೇ ಆಗೋದು" ಅಂತ.

ಪ್ರತಿಯೊಬ್ಬರಿಗೂ ಖುಷಿಯಾಗಿತ್ತು. ಸಣ್ಣ ಪುಟ್ಟ ಶಾಸ್ತ್ರಗಳನ್ನೂ ಬಿಡಲಿಲ್ಲ, ಯಾವ ದೇವಸ್ಥಾನ, ಗುಡಿಯನ್ನೂ ಬಿಡಲಿಲ್ಲ.

ಆದರೆ, ಆದದ್ದೇನು ಕಡೆಗೆ? ಅವರೆಲ್ಲರ ಕನಸುಗಳನ್ನು ಛಿದ್ರ ಮಾಡಿ ಒಂದು ಒಣಕಲು ಗಂಡುಮಗು ಭೂಮಿಗೆ ಅವತರಿಸಿತ್ತು. ಆ ಮಗು ಯಾರು ಅಂತ ಹೇಳಲು ಅವಕಾಶ ಕೊಡಿ, ಅದು ಬೇರೆ ಯಾರೂ ಅಲ್ಲ—ನಾನೇ.

ನನ್ನ ಬದಲು ಒಂದು ಹೆಣ್ಣುಮಗು ಹುಟ್ಟಬಾರದಿತ್ತೆ? ಈ ವಿಷಯವಾಗಿ ನಾನು ದೇವರಿಗೆ ಶಾಪ ಹಾಕಿದೆ ಅಂತ ಇಟ್ಟುಕೊಳ್ಳಿ.

ನಾನು ಒಡೆದುಹೋದ ಗುಂಡಿಗಳ ಕೊಳಕು ಚಡ್ಡಿ ಹಾಕಿಕೊಂಡು ತರಲೆ ಮಾಡುತ್ತ ಓಡಾಡುತ್ತಿದ್ದ ಹುಡುಗನಾಗಿದ್ದಾಗ ಮಾತ್ರ ಅಪ್ಪನ ನೆನಪು; ಅನಂತರ ನೆನಪಿಲ್ಲ. ಸುಮಾರು ಕೊಠಡಿಗಳಲ್ಲಿ ಅವರ ಭಾವಚಿತ್ರ ತೂಗಿಹಾಕಿದ್ದರು. ನಾನು ನಾಲ್ಕು ವರ್ಷದವನಾಗಿದ್ದಾಗ ಅವರು ಸಿಲೋನ್‌ಗೆ ಹೋದದ್ದು, ಮತ್ತೆ ಬಂದಿರಲಿಲ್ಲ.

ಇದರ ಪ್ರಸ್ತಾಪ ಮಾಡಿದಾಗಲೆಲ್ಲಾ ನನ್ನ ಅಣ್ಣಂದಿರು ನನ್ನನ್ನು ಅಣಕಿಸಿ ಕಾಟ ಕೊಡುತ್ತಿದ್ದರು. ಅವರೂ ಸಿಲೋನ್‌ನಲ್ಲಿ ಇದ್ದದ್ದರಿಂದ ನಮ್ಮ ಅಪ್ಪನ ಬಗ್ಗೆ ತುಂಬಾ ಅಧಿಕಾರವಾಣಿಯಿಂದ ಮಾತನಾಡುತ್ತಿದ್ದರು.

ನಾನು ನನ್ನ ತಾಯಿ ಹೊಟ್ಟೆಯಲ್ಲಿದ್ದಾಗಲೇ ಅಮ್ಮ ಮತ್ತು ನನ್ನ ಅಣ್ಣಂದಿರು ಕೇರಳಕ್ಕೆ ವಾಪಸ್ಸಾಗಿದ್ದರು. ಆದಾದ ನಂತರ ಅಪ್ಪ ವರ್ಷದಲ್ಲಿ ಒಂದು ಮೂರು–ನಾಲ್ಕು ತಿಂಗಳು ರಜಕ್ಕೆ ಬರೋದು ಮಾಮೂಲಿಯಾಗಿತ್ತು.

ನನ್ನ ಅಮ್ಮ ಆಗಾಗ ನನಗೆ ಏಟು ಕೊಡೋಳು, ನನ್ನ ಅಣ್ಣಂದಿರು ನನ್ನನ್ನು ಗದರಿಕೊಳ್ಳೋರು. ನಾನು ಒಬ್ಬನೇ ಇದ್ದಾಗ ನನ್ನ ಪರಿಸ್ಥಿತಿಯ ಬಗ್ಗೆ ಮರುಗುತ್ತಿದ್ದೆ, ಒಂದು ಹೆಣ್ಣು ಮಗುವಿನ ಜಾಗದಲ್ಲಿ ನಾನು ಅವತರಿಸಿಬಿಟ್ಟದ್ದೆ- ನನ್ನ ಬಗ್ಗೆ ಕೋಪಗೊಂಡಿದ್ದ ಕಾರಣದಿಂದಲೇ ಅಪ್ಪ ಕೇರಳಕ್ಕೆ ವಾಪಸ್ಸು ಬರ್ತಾಯಿಲ್ಲವೇನೊ?

ರಾತ್ರಿ ವೇಳೆ ಎಚ್ಚರವಾಗಿದ್ದುಕೊಂಡು ಈ ಮುಂತಾಗಿ ಯೋಚಿಸುತ್ತಿದ್ದೆ. ಇದ್ದಕ್ಕಿದ್ದ ಹಾಗೆಯೇ ಪ್ರಶ್ನೆಯೊಂದು ಬಾಯಿಂದ ಜಾರಿ ಹೊರಗೆ ಬರುತ್ತಿತ್ತು.

"ಅಮ್ಮ, ನಾನು ಹುಡುಗಿಯಾಗಿದ್ದರೆ ಹೇಗನ್ನಿಸುತ್ತಿತ್ತು?"

"ಬಾಯಿಮುಚ್ಚಿಕೊಂಡು ಮಲಕ್ಕೋ". ನಿದ್ದೆ ಮಂಪರು ಕವಿಯುತ್ತಿದ್ದ ಸಮಯವಾದ್ದರಿಂದ ಅಮ್ಮನಿಗೆ ಈ ಪ್ರಶ್ನೆಯಿಂದ ರೇಗಿ ನನ್ನ ತೊಡೆಗೊಂದು ಒಳಶುಂಠಿ ಕೊಟ್ಟುಬಿಡುತ್ತಿದ್ದಳು.

ಹೆಣ್ಣು ಮಗುವಿಲ್ಲದ ಕಾರಣದಿಂದ ಅಮ್ಮ ಮತ್ತು ಅಪ್ಪ ಬಹಳ ಕೊರಗಿದ್ದರು. ನನಗದು ಗೊತ್ತಿತ್ತು.

ಒಬ್ಬಳು ಸೋದರಿ ಇದ್ದರೆ! ಎಂಥ ಒಳ್ಳೆಯ ಅನುಭವ! ನನ್ನ ತರಗತಿಯ ಬಹುತೇಕ ಹುಡುಗರಿಗೆ ಅಕ್ಕಂದಿರೋ ತಂಗಿಯರೋ ಇದ್ದರು. ನಾನು ಕೇಳಿದ ಪ್ರಕಾರ ಗೋಪಿಯ ಅಕ್ಕ ಭಾನುನೇ ಅವನ ಪುಸ್ತಕಗಳಿಗೆಲ್ಲಾ ಕ್ಯಾಲೆಂಡರ್‌ನಿಂದ ರಟ್ಟು ಹಾಕಿಕೊಡುತ್ತಿದ್ದವಳು. ಅವಳ ಹ್ಯಾಂಡ್ ರೈಟಿಂಗ್ ಎಷ್ಟು ಮುದ್ದಾಗಿದೆ. ಕರುಣಾಕರನ್‌ನ ಅಕ್ಕನಿಗೆ ಮದುವೆಯಾಯಿತು. ಅವಳನ್ನು ಮದುವೆಯಾದ ಆಸಾಮಿಗೆ ದಪ್ಪ ಮೀಸೆ ಇತ್ತಂತೆ; ನೋಡಿದವರ ಪ್ರಕಾರ ವರಸಾಮ್ಯ ಇರಲಿಲ್ಲ. ವರನ ದಿಬ್ಬಣದವರು ಮದುವೆಮನೆ ಚಪ್ಪರದೊಳಗೆ ಪ್ರವೇಶ ಮಾಡಿದಾಗ ವರನ ಪಾದ ತೊಳೆದವನು ಕರುಣಾಕರನೇ ಅಂತೆ. ರಾತ್ರಿ ವೇಳೆ ನಾದಸ್ವರ ಮತ್ತು ಬೇರೆಲ್ಲ ಸಡಗರದ ಸದ್ದು ನನ್ನ ಕಿವಿಯ ಮೇಲೆ ಬಿದ್ದಿತ್ತು.

ಇದೆಲ್ಲಾ ಸರೀನೆ. ಆದರೆ ಬೇರೊಬ್ಬರ ಪಾದ ತೊಳೆಯುವ ಕಾಯಕ ಮಾತ್ರ ನನಗೆ ಹಿಡಿಸಲಿಲ್ಲ.

ಕರುಣಾಕರನ್ ಒಮ್ಮೆ ಹೇಳಿದ, "ನಾನು ಅವರನ್ನ ಏನಂತ ಕರೀತೀನಿ ಗೊತ್ತಾ? ಭಾವ ಅಂತ."

ಕರುಣಾಕರನ್ ಮತ್ತು ಗೋಪಿ ಅದೃಷ್ಟವಂತರು ಎಂದು ನನಗೆ ಅನ್ನಿಸಿತು. ಮನೆಯಲ್ಲಿ ಮದುವೆ ನಡೆಯೋದು ಅಂದರೆ ಅದೊಂದು ಭಾರಿ ಸಂಭ್ರಮ. ಸಿಂಗರಿಸಿದ ಚಪ್ಪರ, ಪೆಟ್ರೊಮ್ಯಾಕ್ಸ್ ದೀಪಗಳು, ಜನರ ಗದ್ದಲ, ಹೊಗಸರು ಒಳಾಂಗಣದಲ್ಲಿ ಜಮಾಯಿಸುವುದು, ಅಂದಹಾಗೆ ಇನ್ನೊಂದು ವಿಷಯ ಮರೆತೆ, ಗ್ರಾಮಾಫೋನಿನ ಸಂಗೀತ.

ನಮ್ಮ ಮನೆಯಲ್ಲಿ ಮದುವೆ ನಡೆಯುವ ಪ್ರಸಂಗ ಇಲ್ಲವೇ ಇಲ್ಲ. ಕಾರಣ ನನಗೊಬ್ಬಳು ಸೋದರಿ ಅಂತ ಇರಲಿಲ್ಲ.

ನನ್ನ ಪುಸ್ತಕಗಳಿಗೆ ಯಾರೂ ನೀಟಾಗಿ ರಟ್ಟು ಹಾಕುವವರಿರಲಿಲ್ಲ. ಸುಂದರವಾದ

ಹಸ್ತಾಕ್ಷರಗಳಿಂದ ಆ ಪುಸ್ತಕಗಳ ಮೇಲೆ ನನ್ನ ಹೆಸರನ್ನು ಬರೆಯುವವರೂ ಇಲ್ಲ. ನನಗೊಬ್ಬ ಭಾವ ಅನ್ನುವವನು ದಕ್ಕುವುದೇ ಇಲ್ಲ.

ಭಾವ ಅನ್ನುವವ ನನಗೆ ದಕ್ಕುವ ಹಾಗಿದ್ದರೆ ಕರುಣಾಕರನ್‌ನ ಮನೆಯಲ್ಲಾದ ಮದುವೆಗಿಂತ ತುಂಬಾ ಅದ್ದೂರಿಯಾದ ಮದುವೆ ನಮ್ಮ ಮನೆಯಲ್ಲಿ ನಡೆಯುತ್ತಿತ್ತು. ಆ ಮದುವೆಯನ್ನು ಒಂದು ವೇಳೆ ಕರುಣಾಕರನ್ ಕಂಡಿದ್ದರೆ, ಅವನ ಮನೆ ಮದುವೆ ಅಷ್ಟು ಕಳೆಕಟ್ಟುತ್ತಿರಲಿಲ್ಲ. ಅವನು ಕೊಚ್ಚಿಕೊಳ್ಳುವುದನ್ನು ಕೇಳೋದು....

ನನ್ನ ಪುಸ್ತಕಗಳಿಗೆ ನಾನೇ ರಟ್ಟು ಹಾಕಿಕೊಳ್ಳುತ್ತಿದ್ದೆ, ನೀಟಾಗಿ ಮಾತ್ರ ಅಲ್ಲ. ನಮ್ಮ ಅಣ್ಣಂದಿರನ್ನು ಕೇಳಿದರೆ ಏನಾದರೂ ಸಬೂಬು ಹೇಳೋರು. ನಾನು ಹಟ ಹಿಡಿದರೆ ನಾನು ತುಂಬಾ ತುಂಬಾ ತುಂಟಾ ಅನ್ನುವ ಪ್ರಚಾರದ ಹಿನ್ನೆಲೆಯಲ್ಲಿ ನನಗೆ ಏಟು ಬೀಳುತ್ತಿತ್ತು.

ಅಪ್ಪನಿಂದ ಆಗಾಗ್ಗೆ ಕಾಗದಗಳು ಬರುತ್ತಿದ್ದವು. ಅಮ್ಮ ಗಮನವಿಟ್ಟು ಅವುಗಳನ್ನು ಓದುತ್ತಿದ್ದಳು. ಹತ್ತನೇ ತರಗತಿಯಲ್ಲಿ ಕಲಿಯುತ್ತಿದ್ದ ನನ್ನ ದೊಡ್ಡಣ್ಣ ಕಾಗದ ಓದುವಾಗ ಮತ್ತೆ ನಾನು ಕೇಳಿಸಿಕೊಳ್ಳಬೇಕಾಗಿತ್ತು.

“ಮಕ್ಕಳು ಕ್ಷೇಮವೆಂದು ಭಾವಿಸುವೆ. ಅವರ ಬಗ್ಗೆ ವಿವರವಾಗಿ ನೀನು ತಿಳಿಸುವೆಯಾಗಿ ನಂಬುವೆ.”

ನನಗೋ ತಡೆಯಲಾರದಷ್ಟು ಕುತೂಹಲ. ಮಕ್ಕಳು ಅಂದರೆ ಅವರಲ್ಲಿ ನಾನೂ ಸೇರಿದ್ದೇನೆ ತಾನೆ?

ಮುನ್ನೂರು ಮೈಲಿಗಳ ಆಚೆ ಕೆಲಸ ಮಾಡುತ್ತಿರುವ ಈ ಅಪ್ಪನ ಬಗ್ಗೆ ನಾನು ಅನೇಕ ಬಾರಿ ಯೋಚಿಸಿದ್ದುಂಟು. ಯಾವುದೋ ಕಂಪನಿಯಲ್ಲಿ ಅವರು ಸೇವೆ ಸಲ್ಲಿಸುತ್ತಿರುವುದಾಗಿ ನನಗೆ ತಿಳಿಸಿದ್ದರು. ನನ್ನ ಅಣ್ಣಂದಿರೆಲ್ಲಾ ಅವರ ಕಛೇರಿಯನ್ನು ನೋಡಿದ್ದರು.

ಸಿಲೋನಿನ ಬಗ್ಗೆ ಅವರು ಮಾತನಾಡಿಕೊಳ್ಳುತ್ತಿದ್ದುದನ್ನೆಲ್ಲಾ ನಾನು ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದೆ. ಅಲ್ಲಿನ ಜನರು ಬೇರೆ ಭಾಷೆಯಲ್ಲಿ ವ್ಯವಹರಿಸುತ್ತಿದ್ದ ಕಾರಣ ಅವರ ಮಾತು ನನಗೆ ಅರ್ಥವಾಗುವಂತಿರಲಿಲ್ಲ. ಅಲ್ಲಿನ ಜನರನ್ನ ಅಸಹ್ಯದವರು ಅಂತ ವರ್ಣಿಸುತ್ತಿದ್ದರು. ಬಲೆತ್ತನ್ ಹೇಳ್ತಾಯಿದ್ದ ಅವರು ರಸ್ತೆಯಲ್ಲಿ ಯಾರಾದರೂ ಚಿಕ್ಕ ಮಕ್ಕಳು ಕಣ್ಣಿಗೆ ಬಿದ್ದರೆ ಚಕ್ಕನೆ ಚಾಕು ತೆಗೆದು ಅವರ ಕತ್ತು ಕತ್ತರಿಸಿ ಬಿಡ್ತಾರೆ ಅಂತ. ವಾಸ್ತವವಾಗಿ ಅಂತಹ ಘಟನೆಯೊಂದನ್ನು ಬಲೆತ್ತನ್ ತಾನೇ ಕಣ್ಣಾರೆ ಕಂಡಿದ್ದ.

ಇದನ್ನು ಕೇಳಿ ನನಗೆ ನಡುಕ ಹುಟ್ಟಿತು. ಇಂಥ ಜನರ ಮಧ್ಯೆ ಇದ್ದಾರಾ ಅಪ್ಪಾ, ದೇವರೆ! “ಬರೀ ಮಕ್ಕಳನ್ನು ಮಾತ್ರ ಅಲ್ಲವಾ ಅವರು ಕೊಲ್ಲೋದು?”

“ಹಣಕ್ಕಾಗಿ ಯಾರನ್ನು ಬೇಕಾದ್ರೂ ಅವರು ಕೊಲ್ತಾರೆ.”

ಒಳಗೇ ಕಂಪಿಸುತ್ತಿದ್ದೆನಾದರೂ ನನ್ನ ಭಯವನ್ನು ಹೊರಗೆ ತೋರಿಸಿಕೊಳ್ಳುತ್ತಿರಲಿಲ್ಲ. ದೇವರೆ, ಅಪ್ಪನ ಹತ್ತಿರ ಬಹಳ ಹಣ ಇದೆ ಅಂತ ಜನರು ಮಾತಾಡಿಕೊಳ್ತಾರಲ್ಲ.

ಆ ಸುಮಾರಿನಲ್ಲೇ ಒಂದು ದಿನ ಟೆಲಿಗ್ರಾಂ ಬಂದದ್ದು. ಅಪ್ಪ ಊರಿಗೆ ಬರುವ ಮಾರ್ಗದಲ್ಲಿದ್ದಾರೆ ಅಂತ ತಿಳಿಸುವ ಟೆಲಿಗ್ರಾಂ ಅದು.

ಆ ಸಮಯದಲ್ಲಿ ಅನೇಕ ಕಡೆ ಯುದ್ಧ ನಡೆಯುತ್ತಿತ್ತು; ಅಪ್ಪ ಕೆಲಸ ಮಾಡುವ ಪ್ರದೇಶಕ್ಕೂ ಕಾಲಿಟ್ಟಿತ್ತು. ಆದದ್ದರಿಂದ ಕೂಡಲೇ ಆ ಸ್ಥಳವನ್ನು ಬಿಡಲು ಅವರು ನಿರ್ಧರಿಸಿದ್ದರು. ಸುದ್ದಿ ಪತ್ರಿಕೆ ಓದುತ್ತಿದ್ದ ವೆಲಿಯತ್ತನ್ ಈ ಯುದ್ಧದ ಬಗ್ಗೆ ಚೆನ್ನಾಗಿ ತಿಳಿದುಕೊಂಡಿದ್ದ. ಅಪ್ಪ ಬರುವ ಸುದ್ದಿಯಿಂದಾಗಿ ಮನೆಯಲ್ಲಿ ಒಂದು ಬಗೆಯ ಸಂಭ್ರಮ ಶುರುವಾಯಿತು. ಅಪ್ಪ ಬರ್ತಿದ್ದಾರೆ! ಆರು ವರ್ಷಗಳ ನಂತರ ನಾನು ಅವರನ್ನು ನೋಡಬಹುದು!

"ಕೊಲಂಬೋದಿಂದ ಇಲ್ಲಿಗೆ ಬರೋದಕ್ಕೆ ಎಷ್ಟು ದಿನ ಹಿಡಿಯತ್ತೆ?" ನಾನು ಕೇಳಿದೆ. ಹಡಗಿನಲ್ಲಿ ಮೂರು ಗಂಟೆ. ನಂತರ ರೈಲಿನಲ್ಲಿ ಎರಡು ದಿನ.

ನನ್ನ ಪುಸ್ತಕದ ಐದನೇ ಪಾಠದಲ್ಲಿ ತಿಳಿಸಿತ್ತು ನೀರಿನ ಮೇಲೆ ಉತ್ತಮವಾದ ಸಾರಿಗೆಯೆಂದರೆ ಹಡಗು ಅಂತ. ನೀರಿನ ಮೇಲೆ ನಡೆಯುವುದನ್ನು ಕಂಡರೆ ನನಗೆ ಹೆದರಿಕೆ. ಭಗವತಿ ದೇವಸ್ಥಾನಕ್ಕೆ ಪೂಜೆಗೆ ಹೋದಾಗ ನಾನು ದೋಣಿಯಲ್ಲಿ ಕುಳಿತಿದ್ದೆ. ದೋಣಿ ಯಾವ ಕ್ಷಣದಲ್ಲಿ ಮೊಗಚಿಕೊಳ್ಳುತ್ತೋ ಅಂತ ನಾನು ಭಯದಲ್ಲಿ ಉಸಿರು ಬಿಗಿಹಿಡಿದು ಕುಳಿತಿರುತ್ತಿದ್ದೆ. ದೋಣಿಯು ನದಿಯ ಮೇಲೆ ಸಾಗಿದರೆ ಹಡಗು ಸಮುದ್ರದ ಮೇಲೆ ಸಾಗುತ್ತದೆ. ಸಮುದ್ರದಲ್ಲಿ ಭಾರಿಭಾರಿ ಅಲೆಗಳು. ಹಡಗುಗಳೂ ಮೊಗಚಿಕೊಳ್ತವಾ?

ಸಧ್ಯ, ಅಪ್ಪ ಬೇಗ ಬಂದುಬಿಟ್ಟರೆ ಸಾಕು!

ಅಮ್ಮನ ಲೆಕ್ಕಾಚಾರದ ಪ್ರಕಾರ ಅಪ್ಪ ಸೋಮವಾರ ಬಂದುಬಿಡ್ತಾರೆ. ಅವತ್ತು ನಮಗೆ ತರಗತಿ ಇದ್ದರೂ ನಾನು ಹೋಗಬಾರದೆಂದು ತೀರ್ಮಾನಿಸಿದ್ದೆ. ನಮ್ಮ ಅಣ್ಣಂದಿರೂ ಕೂಡ ಶಾಲೆಗೆ ಹೋಗಲಿಲ್ಲ. ಅಮ್ಮ ಎಲ್ಲರಿಗೂ ರಜೆ ಮಂಜೂರು ಮಾಡಿದಳು.

ನಿದ್ದೆ ಮಂಪರು ಹತ್ತುವ ತನಕ ಗೇಟಿನ ಕಡೆಯೇ ನೋಡುತ್ತಾ ಕುಳಿತೆ. ಅಪ್ಪ ಕಣ್ಣಿಗೆ ಬೀಳಲಿಲ್ಲ.

ಮಾರನೇ ದಿನ ಮುಂಜಾನೆ ಅವರು ಬಂದರು.

ಮಹಡಿಯಿಂದ ಮೊದಲು ಅವರನ್ನು ಕಂಡವನು ಬಲೆತ್ತನ್. ಗದ್ದೆಯ ಮಧ್ಯದ ಹಾದಿಗುಂಟಾ ಅಪ್ಪ ಮೂರು ಜನರ ಜೊತೆಯಲ್ಲಿ ಭಾರಿಭಾರಿ ಟ್ರಂಕುಗಳನ್ನು ತೆಗೆದುಕೊಂಡು ಬರುವುದನ್ನು ಆತ ಕಂಡ.

ಹಜಾರದ ಹತ್ತಿರ ಬಂದ ಕೂಡಲೇ ಅಪ್ಪ ನನ್ನನ್ನು ಬಲವಾಗಿ ತಬ್ಬಿಕೊಂಡರು. ನನ್ನ ಅಣ್ಣಂದಿರ ಎದುರಿಗೆ ನಾನು ತುಂಬಾ ಖುಷಿಗೊಂಡ ಕ್ಷಣವೆಂದರೆ ಆ ಕ್ಷಣವೆಂದು ನನಗೆ ನೆನಪಾಗುತ್ತದೆ.

ನಂತರ ಅವರ ಸರದಿ. ಅವರು ಒಬ್ಬೊಬ್ಬರನ್ನೂ ಮುಟ್ಟಿ ಅಪ್ಪ ಅವರ ಕೆನ್ನೆ ಸವರಿದರು. ಅಲ್ಲಿ ನಿಂತುಕೊಂಡು ನನ್ನ ಚಡ್ಡಿಯನ್ನು ಮೇಲಕ್ಕೆ ಎಳೆದುಕೊಳ್ಳುತ್ತಾ ನಾಚಿಕೊಂಡು, ಅಪ್ಪನನ್ನೇ ತದೇಕ ದೃಷ್ಟಿಯಿಂದ ನೋಡುತ್ತಾ ಇದ್ದೆ. ಫೋಟೋಗಳಲ್ಲಿ ಕಂಡದಕ್ಕಿಂತ ಹೆಚ್ಚು ಕಪ್ಪಾಗಿ ಅಪ್ಪ ತೋರಿದರು; ಸ್ವಲ್ಪ ತೋರವಾಗಿಯೂ ಕೂಡ. ಕೊರಳ ತುಂಬಾ ಉದ್ದನೆಯ ಅಂಚಿನಲ್ಲಿ ಕಲಾಪತ್ತು ಹಾಕಿದ ಶಾಲನ್ನು ಸುತ್ತಿದ್ದರು.

ಇದೆಲ್ಲದರ ಮಧ್ಯೆ ನನಗೆ ಏನೋ ವಿಸ್ಮಯವಾದದ್ದು ಕಾಣಿಸಿತು. ಅಪ್ಪನ ಹಿಂದೆ ಒಂದು ಪುಟ್ಟ ಹುಡುಗಿ ನಿಂತಿದ್ದಳು!

ಪೇಲವವಾದ, ದುಂಡು ಮುಖದ, ತಾಮ್ರವರ್ಣದ ತಲೆಗೂದಲಿನ ಪುಟ್ಟ ಹುಡುಗಿ. ಬಿಳಿ ರೇಷ್ಮೆ ಲಂಗದ ಮೇಲೆ ಕೆಂಪುಹೂಗಳು ಬಿಡಿಸಿದ್ದವು. ನನಗಿಂತ ಅವಳು ಕೊಂಚ ಎತ್ತರವಾಗಿದ್ದಳು.

ಅವಳಿಗೆ ಏನೋ ಹೇಳಿದರು ಅಪ್ಪಾ. ಅವರು ಆಡಿದ ಭಾಷೆ ನನಗೆ ಅರ್ಥವಾಗಲಿಲ್ಲ. ತಲೆಯಾಡಿಸಿದವಳು, ನಿಧಾನವಾಗಿ ನಡೆದು ಬಂದು ಮುಂಭಾಗದ ಮೊಗಸಾಲೆಯಲ್ಲಿ ನಿಂತುಕೊಂಡಳು, ಗಾಬರಿಗೊಂಡಿದ್ದಳು.

ಎಲ್ಲಾ ಕಿಟಕಿ ಬಾಗಿಲುಗಳಲ್ಲಿ ಆತಂಕ ಪೂರಿತವಾದ ಕಣ್ಣುಗಳು ಕಾಣಿಸಿಕೊಂಡವು.

ಆರುವರ್ಷಗಳ ನಂತರ ವಾಪಸ್ಸು ಬಂದಿದ್ದ ಅಪ್ಪನಿಗಿಂತ ಮಿಗಿಲಾಗಿ ಆಹುಡುಗಿಯೇ ಎಲ್ಲರ ಗಮನ ಸೆಳೆದಂತಿದ್ದಳು.

ಟ್ರಂಕು ಹೊತ್ತು ಬಂದಿದ್ದವರು ತಮ್ಮ ಹೊರೆ ಇಳಿಸಿದರು. ಭಾರಿಗಾತ್ರದ ಪೆಟ್ಟಿಗೆಗಳವು. ತೆಳುನೀಲಿ ಕವರಿನ ಒಂದು ಲೆದರ್ ಕೇಸು ಕೂಡ ಅವುಗಳ ಮಧ್ಯೆ ಇತ್ತು. ಹುಡುಗಿ ಅದನ್ನು ಪ್ರತ್ಯೇಕವಾಗಿ ಇಟ್ಟಳು.

ಟೀ ಮೊಗಸಾಲೆಗೇ ಬಂತು. ಅಜ್ಜಿ ಹೊರಗೆ ಬಂದಳು. ಬರಗೆಮ್ಮಿನಿಂದಾಗಿ ಅವಳ ಗಂಟಲು ಗೊರಗುಟ್ಟಿತು.

"ಮುಂಜಾನೆ ರೈಲಿಗೆ ಬಂದಿರೇನು?"

"ಹ್ಞೂ. ಏನು ಜನ ಅಂತೀನಿ! ಸೆಕೆಂಡ್ ಕ್ಲಾಸ್‌ನಲ್ಲಿ ಕುಳಿತುಕೊಳ್ಳುವುದಕ್ಕೂ ಜಾಗ ಸಿಗಲಿಲ್ಲ", ಕಣ್ಣುಗಳನ್ನು ಉಜ್ಜುತ್ತಾ ಅಪ್ಪ ಹೇಳಿದರು

"ಎಂಥ ಕಷ್ಟದ ಕಾಲ ಇದು! ಹಳೆಯ ಕಾಲದಲ್ಲಿ ಕಾಶಿಗೂ ಜನ ನಡೆದು ಹೋಗುತ್ತಿದ್ದರು."

"ಅವರೆಲ್ಲಾ ಸಿಲೋನ್‌ನಿಂದ ಬಂದವರು. ಬಾಂಬ್ ಬಿದ್ದ ನಂತರ ಎಲ್ಲರೂ ಬಂದು ಬಿಡುತ್ತಿದ್ದಾರೆ."

ಆಗೊಮ್ಮೆ ಈಗೊಮ್ಮೆ ಅಜ್ಜಿ ಆ ಹುಡುಗಿಯ ಕಡೆ ನೋಡುತ್ತಿದ್ದಳು. ಆ ಮಗು ಮಾತ್ರ ಗೋಡೆಗೆ ಒರಗಿಕೊಂಡು ನಿಂತವಳು, ಭೂಮಿಯ ಗರ್ಭದಿಂದ ಹೊರ ಬಂದು ಬೆಳಕನ್ನು ಮೊದಲನೇ ಬಾರಿಗೆ ಕಾಣುತ್ತಿರುವ ಯಾವುದೋ ವಿಚಿತ್ರ ಪ್ರಾಣಿಯಂತೆ ಗೋಚರಿಸಿದಳು.

ಅಮ್ಮ ಇನ್ನೂ ಹೊರಗೆ ಬಂದಿರಲಿಲ್ಲ. ಅವಳನ್ನು ಕರೆಯಬೇಕೋ ಏನೋ ನನಗೆ ಗೊತ್ತಾಗಲಿಲ್ಲ. ಅಪ್ಪ ಆರು ವರ್ಷಗಳ ನಂತರ ವಾಪಸ್ಸು ಬಂದಿದ್ದರು. ಹೊರಗೆ ಬರಬಾರದೆ ಅವಳು? ಇಡೀ ಮನೆಯಲ್ಲಿ ಅರ್ಥಗರ್ಭಿತವಾದ ಮೌನ ಹೆಪ್ಪುಗಟ್ಟಿತ್ತು. ಅದಕ್ಕೆ ಕಾರಣವೇನೆಂದು ನನಗೆ ತಿಳಿದಿತ್ತು.

ಬರಿ ಅಜ್ಜಿಗೆ ಮಾತ್ರ ಹೇಳುವವರಂತೆ ನಟಿಸುತ್ತಾ ತಾನು ಕೆಲಸ ಮಾಡುವ ಸ್ಥಳಕ್ಕೆ ಬಾಂಬ್ ಬಿದ್ದ ಸುದ್ದಿಯನ್ನು ಅಪ್ಪ ಜೋರಾಗಿ ಒಪ್ಪಿಸುತ್ತಿದ್ದರು. ಅಪ್ಪ ವಾಸವಾಗಿದ್ದ ಬೀದಿಯ ಒಂದು ತುದಿಯ ಮೇಲೂ ಬಾಂಬ್ ಬಿದ್ದಿತೆಂದು ತಿಳಿಸಿದರು. ಒಂದು ದೊಡ್ಡ ಜವಳಿ ಅಂಗಡಿ ಸುಟ್ಟು ಭಸ್ಮವಾಗಿ ಹೋಯಿತಂತೆ. ಅನೇಕ ಕಟ್ಟಡಗಳು ನೆಲಸಮವಾಗಿದ್ದವು. ಅನೇಕರ ಪ್ರಾಣಹಾನಿಯಾಗಿತ್ತು, ಅಪ್ಪನ ಸ್ನೇಹಿತರೊಬ್ಬರು—ಅವರು ಸಿಲೋನಿನವರು—ಅವರೂ ಮಡಿದಿದ್ದರು. ಅವರ ಮಗಳೇ ಲೀಲಾ, ಅಪ್ಪನ ಜೊತೆಯಲ್ಲಿ ಬಂದಿದ್ದ ಹುಡುಗಿ.

ಲೀಲಾಳಿಗೆ ತನ್ನವರೆಂಬುವವರು ಯಾರೂ ಇರಲಿಲ್ಲ. ಅವಳು ತುಂಬಾ ಚಿಕ್ಕವಳಿದ್ದಾಗ ಅವಳ ತಾಯಿ ಸತ್ತಿದ್ದರು, ಈಗ ಬಾಂಬಿನ ದಾಳಿಯಲ್ಲಿ ತಂದೆ ಮಡಿದಿದ್ದರು. ಅದೇ ಸ್ಥಳದ ಮೇಲೆ ಮತ್ತೆ ಬಾಂಬ್ ಬೀಳುವ ವರ್ತಮಾನವಿದ್ದಿತು. ಅವಳ ಪ್ರಾಣ ಉಳಿಸುವ ಒಂದೇ ಮಾರ್ಗವೆಂದರೆ ಅವಳನ್ನು ಜೊತೆಯಲ್ಲಿ ಕರೆತರುವುದೇ ಆಗಿತ್ತು.

ಅಪ್ಪನಾಗಲೀ, ಅಮ್ಮನಾಗಲೀ ಇಲ್ಲದ ಆ ಮಗುವಿನ ಕಡೆ ಒಮ್ಮೆ ನೋಡಿದೆ. ನನಗೆ ದುಃಖವೆನಿಸಿತು. ಬಡಪಾಯಿ ಮಗು.

ನೋಡುವುದಕ್ಕೆ ಅವಳು ಮುದ್ದಾಗಿದ್ದಳು ನನ್ನ ತರಗತಿಯಲ್ಲಿನ ಎಲ್ಲ ಹುಡುಗಿಯರಿಗಿಂತ ಮುದ್ದಾಗಿದ್ದಳು ಎನ್ನಬೇಕು.

ಅಜ್ಜಿ ಅವಳನ್ನು ಒಳಗೆ ಕರೆದಳು, ಆದರೆ ಅವಳು ಕದಲಲಿಲ್ಲ. ನಾನು ಅವಳ ಬಳಿ ಹೋಗಿ ಅವಳ ಕೈಗಳನ್ನು ಮುಟ್ಟಿದಾಗ, ಹಾವಿನಂತೆ ಬುಸುಗುಟ್ಟಿ ಕೂಗಿಕೊಂಡಳು.

"ಡ್ಯಾಡಿ...."

ಅಪ್ಪನ ಬಳಿಗೆ ಹೋಗಿ ಅಜ್ಜಿಯ ಕಡೆ ಕೈ ತೋರಿಸಿ ಏನೋ ಒದರಿದಳು. ಅದೆಲ್ಲ ನನಗೆ ಇಡಿಸಲಿಲ್ಲ. ಅವಳು ಹೇಳಿದ ಸಂಗತಿಯಲ್ಲ, ಅಪ್ಪನ ಬಳಿ ಅವಳು ನಿಂತುಕೊಂಡ ರೀತಿ.

ಆ ರಾತ್ರಿ ಅಪ್ಪ ಮತ್ತು ಅಮ್ಮ ಬಹಳ ಹೊತ್ತಿನ ತನಕ ವಾದ ಮಾಡಿದರು. ಅಪ್ಪನ ಜೊತೆ ಅಮ್ಮ ಏಕೆ ಅಷ್ಟು ಕೋಪಗೊಂಡಿದ್ದಳು?

ನಾನು ಎಣಿಸಿದ ರೀತಿಯಲ್ಲಿ ಮನೆಯ ವಾತಾವರಣ ಹರ್ಷದಾಯಕವಾಗಿರಲಿಲ್ಲ. ನಾನಾ ಕಡೆಯಿಂದ ಗುಸುಗುಸು ಹೊರಟಿತ್ತು. ಅಮ್ಮನ ಕಿವಿಗೆ ಯಾವುದೂ ಬೀಳಬಾರದೆಂಬುದು ಸ್ಪಷ್ಟವಾಗಿತ್ತು. ನನಗೆ ಅರ್ಥವಾದ ಮಟ್ಟಿಗೆ ಈ ಎಲ್ಲ ತಾಪತ್ರಯಕ್ಕೆ ಆ ಹುಡುಗಿಯೇ ಕಾರಣವಾಗಿದ್ದಳು.

ಚೆರ್ರಿಯಮ್ಮ ನಮ್ಮ ಪಕ್ಕದಮನೆ ಪಾರುಅಮ್ಮನ ಹತ್ತಿರ ಪಿಸುಗುಟ್ಟಿದ್ದಳು.

"ಅವಳನ್ನ ನೋಡಿದ್ರೇನೇ ನಿನಗೆ ಗೊತ್ತಾಗೋದಿಲ್ವ?"

"ಗೊತ್ತಾಗ್ದೇ ಏನು?"

"ಎಡತಿಗೆ ಹೇಳಬೇಡ. ಇದು ದೊಡ್ಡ ಮಗೂನಂತೆ...."

ಯಾವುದರ ಬಗ್ಗೆ ಇವರು ಮಾತಾಡಿಕೊಳ್ಳುತ್ತಿದ್ದಾರೆ ಎಂದು ನನಗೆ ಸುಮಾರು ತಿಳಿಯಿತು. ಮನೆಯಲ್ಲಿ ನಡೆಯುತ್ತಿದ್ದ ಎಲ್ಲಾ ಗುಸುಗುಸುವಿನ ಅರ್ಥ ಒಂದೇ ಆಗಿತ್ತು; ಅದೆಂದರೆ, ಲೀಲಾ ಅಪ್ಪನ ಮಗಳು ಎಂಬುದು.

ಅಪ್ಪನ ಮಗಳು! ಹಾಗಾದರೆ ಅವಳು ನನ್ನ ಸೋದರಿ ನಾನು ಇಲ್ಲಿ ತನಕ ಅಂದುಕೊಂಡಿದ್ದು ಸುಳ್ಳು. ನನಗೊಬ್ಬಳು ಸೋದರಿ ಇದ್ದಾಳೆ.

ಇದು ನಿಜಕ್ಕೂ ಮಹತ್ವದ ವಿಚಾರ. ಆದರೆ ಇವರೆಲ್ಲಾ ಯಾಕೆ ಗೊಣಗಾಟದಲ್ಲಿ ತೊಡಗಿದ್ದಾರೆ?

ಲೀಲಾ ಹೇಳಿದ್ದು ಮಾತ್ರ ನನಗೆ ಒಂದೂ ಅರ್ಥವಾಗಲಿಲ್ಲ. ಆಮೇಲೆ ಅವಳು ದುರುದುರನೆ ನೋಡೋದು ಬೇರೆ. ಆದಾಗ್ಯೂ, ಅವಳ ವಿರುದ್ಧ ನನ್ನ ಮನಸ್ಸು ಏನೂ ಯೋಚಿಸುತ್ತಿಲ್ಲ. ಎಷ್ಟೇ ಆದರೂ ಅವಳು ನನ್ನ ಸೋದರಿ ತಾನೆ?

ಅವಳು ನನ್ನ ತಂಗೀನೋ ಅಕ್ಕಾನೋ? ಹೇಳೋದು ಕಷ್ಟ. ಅಪ್ಪನನ್ನ ಕೇಳಿದ್ರೆ

ಗೊತ್ತಾಗತ್ತೆ. ಆದರೆ ಅವರನ್ನು ಕೇಳೋದಕ್ಕೆ ನನಗೆ ಮನಸ್ಸು ಬರಲಿಲ್ಲ ನನಗಿಂತ ಚಿಕ್ಕವಳಿರಬೇಕು. ನನ್ನ ಭಾಷೆ ಅವಳಿಗೆ ಅರ್ಥವಾಗೋದಕ್ಕೆ ಶುರುವಾದರೆ ಅವಳನ್ನ ತಂಗಿ, ತಂಗಿ ಅಂತ ಕರೀತೀನಿ.

ನನ್ನ ತಂಗಿಯನ್ನು ಹೆಚ್ಚು ಸಲಿಗೆಯಿಂದ ಕಾಣಬೇಕೆಂದು ನಾನು ಎಷ್ಟೇ ಪ್ರಯತ್ನಿಸಿದರೂ ನನಗೆ ಗೆಲುವು ದೊರೆಯಲಿಲ್ಲ. ನಮ್ಮೆಲ್ಲರಿಂದ ಅವಳು ದೂರವಾಗಿಯೇ ಉಳಿದಳು. ಕೇವಲ ಅಪ್ಪನೊಡನೆ ಮಾತ್ರ ಮಾತನಾಡುವಳು. ತನ್ನ ಡ್ಯಾಡಿಯನ್ನು ಮಾತ್ರ ಅವಳು ಒಂದು ಕ್ಷಣವೂ ಬಿಡಳು. ವೆಲಿಯತ್ತನ್ ಹೇಳಿದ ಪ್ರಕಾರ 'ಡ್ಯಾಡಿ' ಅಂದರೆ ಅಪ್ಪ ಅಂತ, ವೆಲಿಯತ್ತನ್‌ಗೆ ಇಂಗ್ಲೀಷ್ ಗೊತ್ತಿದೆ.

ಇಡೀ ದಿನ ಅವಳು ತನ್ನ ಚರ್ಮದ ಸೂಟ್‌ಕೇಸ್ ಮೇಲೆಯೇ ಕುಳಿತಿರುವಳು. ಅದರ ಕೀಲಿಯನ್ನು ಸದಾ ತನ್ನ ಕಿರುಬೆರಳಿನಲ್ಲಿ ತಿರುಗಿಸುವಳು. ಯಾರಾದರೂ ಸೂಟ್‌ಕೇಸ್ ಹತ್ತಿರ ಹೋದರೆ ಸಾಕು ಮೊಟ್ಟೆ ಹಾಕುವ ಹಂತದಲ್ಲಿರುವ ಹಾವಿನ ಹಾಗೆ ಬುಸುಗುಟ್ಟುವಳು.

ಆ ಸೂಟ್‌ಕೇಸ್ ತುಂಬಾ ಅಂದವಾದ ಬಟ್ಟೆಗಳಿಂದ ತಯಾರಿಸಿದ ಉಡುಪುಗಳಿದ್ದವು. ಅದನ್ನು ತೆರೆದಾಗಲೆಲ್ಲಾ ನುಸಿಗುಳಿಗೆಗಳ ಗಮಲು ಹೊರಸೂಸುವುದು. ಇದರ ಜೊತೆಗೆ ಬೇರೇನೊ ಪರಿಮಳವೂ ಬೆರೆಯುವುದು.

ಎರಡು ದಿನಗಳ ನಂತರ ನನಗೆ ರಬ್ಬರ್ ಗೊಂಬೆ ಕಣ್ಣಿಗೆ ಬಿದ್ದದ್ದು. ಸೂಟ್‌ಕೇಸ್ ತೆರೆಯುವಾಗ ಲೀಲಾಳ ಹಿಂದೆ ನಿಂತು ಇಣುಕಿದೆ. ಅವಳ ಉಡುಪುಗಳ ಮಧ್ಯೆ ಸುಂದರವಾದ ಆ ಬೊಂಬೆ ಇತ್ತು.

"ಏನದು?" ನನ್ನ ಕುತೂಹಲವನ್ನು ತಡೆಯಲಾರದೆ ಕೇಳಿದ್ದೆ.

ಕಣ್ಣುಗಳನ್ನು ನನ್ನ ಕಡೆ ಕೀಲಿಸಿ ಒಂದು ಬಗೆಯಾದ ತಾತ್ಸಾರದಿಂದ ನನ್ನನ್ನು ಗಮನಿಸಿದಳು. ಪ್ರಾಯಃ ನಾನು ಹೇಳಿದ ಮಾತಿನ ಅರ್ಥ ಅವಳಿಗೆ ಆಗಲಿಕ್ಕಿಲ್ಲ.

"ಅದು, ಅಲ್ಲಿದೆಯಲ್ಲಾ, ಅದು?" ಹಾಗಂತ ಬೆರಳು ಮಾಡಿ ತೋರಿಸಿದೆ.

ಆ ರಬ್ಬರ್ ಗೊಂಬೆಯನ್ನು ಹೊರಕ್ಕೆ ತೆಗೆದಳು. ಅದನ್ನೊಮ್ಮೆ ಚೆನ್ನಾಗಿ ಗಮನಿಸಿ ನನ್ನ ಕಡೆ ನೋಡಿದಳು. ಅವಳ ಸಪೂರವಾದ ಬೆರಳುಗಳು ಅದರ ಹಿಂಭಾಗಕ್ಕೆ ಸರಿದವು. ಗೊಂಬೆ ತನ್ನ ನೀಲಿ ಕಣ್ಣುಗಳನ್ನು ಹೊರಳಿಸಿತು.

"ಎಲ್ಲಿ ನಾನು ಮಾಡ್ತೀನಿ", ಅಂತನಾಚಿಕೆಯಿಂದಲೇ ಹೇಳಿದೆ. ಬೇರೆ ಯಾರಾದ್ರೂ ಕೇಳಿಸಿಕೊಂಡ್ರೆ ನನ್ನನ್ನು ಅಣಕಿಸ್ತಾರೆ ಅಂತ ನನಗೆ ಭಯವಾಗಿತ್ತು.

ಮತ್ತೆ ಅದೇ ಪ್ರಕಾರದ ತಿರಸ್ಕಾರದಿಂದ ನನ್ನನ್ನು ನೋಡಿದಳು. ನಂತರ ಆ ಗೊಂಬೆಯನ್ನು ಸೂಟ್‌ಕೇಸ್‌ನ ತಳಭಾಗಕಿಟ್ಟು ಭದ್ರವಾಗಿ ಬೀಗ ಹಾಕಿಬಿಟ್ಟಳು. ನನ್ನ ಮುಖಕ್ಕೆ ಮಂಗಳಾರತಿಯಾದ ಹಾಗಿತ್ತು. ಅವಳು ನಮ್ಮಪ್ಪನ ಮಗಳಿರಬಹುದು, ಆದರೆ ತೀರಾ ಜಂಭದ ಹುಡುಗಿ ಎಂಬುದಂತೂ ಸ್ಪಷ್ಟವಾಗಿತ್ತು.

ಆ ರಬ್ಬರ್ ಗೊಂಬೆಯಿಂದ ನಾನು ತುಂಬಾ ಆಕರ್ಷಿತವಾಗಿರುವೆನೆಂದು ಅವಳಿಗೆ ತಿಳಿದಿರಬೇಕು. ಇಲ್ಲದೇಹೋದರೆ ಮತ್ತೆ ಮತ್ತೆ ಸೂಟ್‌ಕೇಸ್ ತೆರೆದು ಆ ಬೊಂಬೆಯನ್ನೇಕೆ ನನ್ನ ಮುಂದೆ ಪ್ರದರ್ಶಿಸುತ್ತಿದ್ದಳು?

ಅವಳ ಜಂಭದ ಮಾತುಗಳನ್ನು ಕೇಳಿಸಿಕೊಳ್ಳಲು ನನಗೆ ಇಷ್ಟವಿರಲಿಲ್ಲ. ನಾನು ಒಂದು ವೇಳೆ ಕೇಳಿದರೆ ಅಪ್ಪ ಅದೇ ತರಹದ್ದು ಇನ್ನೊಂದು ಬೊಂಬೆ ಕೊಡಿಸಿಕೊಡುತ್ತಿದ್ದರು. ತರಗತಿಗೆ ತೆಗೆದುಕೊಂಡು ಹೋಗಿ ನನ್ನ ಜೊತೆಗಾರರ ಎದುರು ಅದು ಕಣ್ಣು ಹೊರಳಿಸುವುದನ್ನು ತೋರಿಸಬಲ್ಲೆ ಕೂಡ. ಅದರ ಹೊಟ್ಟೆ ತೆರೆಯುವ ಹಾಗೆ ಮಾಡುವೆ.

ಅಪ್ಪನಿಗೆ ಹೇಳಿ ನೋಡಲೆ?

ಅವರ ಬಳಿ ಹೋಗುವುದೆಂದರೆ ನನಗೆ ಸ್ವಲ್ಪ ಮುಜುಗರ. ಬೇರೆ ಏನೋ ಕಾರಣಕ್ಕಾಗಿಯಲ್ಲ. ಅವಳ ಹಾಗೆ ನಿರ್ಭಯವಾಗಿ 'ಡ್ಯಾಡಿ' ಎಂದು ಕರೆದು ಓಡಿಹೋಗಿ ಅವರ ತೊಡೆಯ ಮೇಲೆ ಕುಳಿತುಕೊಳ್ಳಲು ನನಗೆ ಆಗದು.

ಅಪ್ಪ ಹೆಚ್ಚು ಮಾತಾಡುವವರಲ್ಲ. ಆರಾಮು ಕುರ್ಚಿಯಲ್ಲಿ ಅವರು ಕುಳಿತಾಗ ನಾನು ಸ್ವಲ್ಪದೂರದಲ್ಲಿ ನಿಂತೇ ಇರುತ್ತಿದ್ದೆ. ಅವರು ತಲೆ ಇತ್ತ ತಿರುಗಿಸಿದಾಗ ಅವರ ದಪ್ಪ ಗಾಜಿನ ಕನ್ನಡಕ ಮಿರುಗುವುದನ್ನು ನೋಡುವುದೇ ಒಂದು ತಮಾಷೆ.

ಒಂದು ದಿನ ಧೈರ್ಯಮಾಡಿ ಕೇಳಿಯೇ ಬಿಡಬೇಕೆಂದು ನಿರ್ಧರಿಸಿದೆ. ಅಷ್ಟಕ್ಕೂ ಲೀಲಾಳ ಮುಂದೆ ನಾನು ಪ್ರಯೋಜನಕ್ಕೆ ಬಾರದವನು ಎಂದು ತೋರಿಸಿಕೊಳ್ಳಲು ಇಷ್ಟವಿರಲಿಲ್ಲ. ಹಾಗಾಗಿ ಅವರ ಬಳಿ ಹೋದೆ; ಅಪ್ಪ "ಹೂಂ?" ಎಂದು ಕೇಳಿದರು.

ತಲೆಯೆತ್ತಿ ಮೇಲೆ ನೋಡಿದರು, ಅವರ ಕನ್ನಡಕ ಫಳಗುಟ್ಟುತ್ತಿತ್ತು.

ನನಗೇನೂ ಮಾತನಾಡಲಾಗಲಿಲ್ಲ. ತುಂಡಾಗಿ ಕತ್ತರಿಸಿದ ನನ್ನ ತಲೆಗೂದಲನ್ನು ನೇವರಿಸುತ್ತಾ ಅವರಂದರು, "ನೀನು ಶಾಲೆಗೆ ಹೋಗ್ತಾಯಿಲ್ವೆ?"

"ಹ್ಞೂಂ...."

ಅದಾದ ನಂತರ ನಾನು ಅವರನ್ನು ಏನೂ ಕೇಳಲಿಲ್ಲ; ಅಥವಾ ಮಾತೂ ಆಡಲಿಲ್ಲ.

ಆ ರಬ್ಬರ್ ಗೂಬೆ ನನ್ನ ಹತ್ತಿರ ಇಲ್ಲದೇ ಹೋದ್ರೆ ಅಷ್ಟೇ ಹೋಯಿತು. ಆದರೆ ನನ್ನ ತರಗತಿಯ ಹುಡುಗರು ಯಾವಾಗಲೂ ನನ್ನನ್ನ ನೋಯಿಸುವುದೇಕೆ?

ಅಪ್ಪ ಊರಿಗೆ ಬಂದಿರೋದು, ಜೊತೆಯಲ್ಲಿ ಒಂದು ಪುಟ್ಟ ಹುಡುಗಿಯನ್ನು ಕರೆತಂದಿರೋದು—ಎಲ್ಲಾ ಎಲ್ಲರಿಗೆ ಎಷ್ಟು ಬೇಗ ಗೊತ್ತಾಗಿಬಿಟ್ಟಿದೆ. ನಮ್ಮ ತರಗತಿಯ ಜಾನು ಅದರ ಬಗ್ಗೆ ಕೇಳಿಯೇಬಿಟ್ಟಳು.

ನನಗೆ ಕೇಳಿಸಲಿ ಅಂತಲೇ ಅವಳು ಹೇಳಿದಳು. "ಇವನ ಅಪ್ಪ ಬರುವಾಗ ಜೊತೆಯಲ್ಲಿ ಒಂದು ಪುಟ್ಟಹುಡುಗಿಯನ್ನೂ ಕರಕೊಂಬಂದಿದ್ದಾರೆ".

"ಎಲ್ಲಿಂದ?" ವೇಲುತೇದತ್‌ನ ನಾಣಿ ಕೇಳಿದಳು.

"ಕೊಲಂಬೋದಿಂದ. ನಿನಗೆ ಗೊತ್ತಾ, ನಮ್ಮಮ್ಮ ಹೇಳ್ತಾಯಿದ್ದರು, ಇವರ ತಂದೆಗೆ ಅಲ್ಲೊಂದು ಸಂಸಾರ ಇದೆಯಂತೆ ....ಹೆಂಡತಿ, ಮಕ್ಕಳು, ಎಲ್ಲಾ."

ಅವಳನ್ನು ನೂಕಿ ಕೆನ್ನೆಗೊಂದು ಕೊಟ್ಟುಬಿಡಲಾ ಅನ್ನುವಷ್ಟು ಸಿಟ್ಟು ಬಂದಿತ್ತು. ಆದ್ರೆ ಹಾಗೆ ಮಾಡಲಿಲ್ಲ. ಒಂದು ಸಾರಿ ಅವಳು ನನಗೆ ಗೇರು ಹಣ್ಣು ಕೊಟ್ಟಿದ್ದಳು.

ಆದರೂ ಅವಳು ಹೇಳಿದ್ದು ಬಹಳ ಕಠೋರವಾದದ್ದೆ. ನನ್ನಪ್ಪನ ಬಗ್ಗೆ ತಾನೆ ಅವಳು ಆ ಮಾತಾಡಿದ್ದು. ಕೊಲಂಬೊ·

ದಲ್ಲಿ ಅಪ್ಪ ಎರಡನೇ ಹೆಂಡತಿ....ಅದು ಬರಿ ಸುಳ್ಳು! ಅವಳ ಅಮ್ಮನಿಗೇ ಟೆಲಿಗ್ರಾಂ ಬಂದಿತ್ತೇನೋ ಎನ್ನುವ ಹಾಗೆ. ಅವಳಮ್ಮ ಅವಳ ಅಜ್ಜಿ–ಎಲ್ಲರೂ ಸುಳ್ಳು ಪುರಕಿಯರು.

ನನಗೆ ಬೇಸರವಾಗಿತ್ತು. ನನ್ನ ಸಂಶಯ ಪರಿಹರಿಸಿಕೊಳ್ಳುವುದಕ್ಕೆ ಶಾಲೆಯಿಂದ ವಾಪಸ್ಸು ಬರುವಾಗ ಅಮ್ಮನನ್ನು ಕೇಳಿಯೇ ಬಿಟ್ಟಿದ್ದೆ.

"ಅಮ್ಮ, ನನ್ನ ತರಗತಿಯ ಜಾನು ಹೇಳ್ತಾಳೆ...."

"ಏನು...."

"ಅಪ್ಪ...ಅಪ್ಪನಿಗೆ ಕೊಲಂಬೋದಲ್ಲಿ ಇನ್ನೊಬ್ಬರು ಹೆಂಡತಿ ಹಾಗೂ ಮಕ್ಕಳು ಎಲ್ಲಾ ಇದ್ದಾರಂತೆ." ಜಾನುವಿಗೆ ನಾನು ಕೊಡಬೇಕೆಂದುಕೊಂಡಿದ್ದ ಹೊಡೆತ ನನಗೇ ಬಿದ್ದಿತು.

"ಹೋಗಿ ಆ ನಿನ್ನ ಮುದಿಯನನ್ನು ಕೇಳು."

ಇನ್ನು ಮೇಲೆ ಆ ಬಗೆಯಾದ ಮಾತುಗಳಿಗೆ ಕಿವಿಗೊಡಬಾರದೆಂದೂ, ಯಾರನ್ನೂ ಯಾವ ವಿಷಯವನ್ನೂ ಕೇಳಬಾರದೆಂದು ನಿರ್ಧರಿಸಿದೆ.

ಅಪ್ಪ ಬಂದ ಆರನೇ ದಿನ ಹಾಗಾದದ್ದು.

ಅಪ್ಪ ಮಲಗಿದ್ದ ಕೊಠಡಿಯ ಪಕ್ಕದ ಕೋಣೆಯಲ್ಲಿ ನಾನು ಮಲಗುವುದು. ಊಟದ ನಂತರ ನಾನು ಅಲ್ಲಿಗೆ ಹೋದಾಗ ಲೀಲಾ ಅಪ್ಪನಿಗೆ ತೀರಾ ಹತ್ತಿರದಲ್ಲಿ ನಿಂತುಕೊಂಡು ಮಾತನಾಡುತ್ತಿದ್ದಳು. ಸಿಗಾರಿನ ಕಟುವಾದ ಗಮಲು ಆ ಕೊಠಡಿಯಿಂದ ಹೊರಗೆ ತೂರಿ ಬರುತ್ತಿತ್ತು.

ನೋಡಿಯೂ ನೋಡದವನಂತೆ ನಟಿಸಿದೆ. ಅಪ್ಪನಿಗೆ ಅಷ್ಟು ಹತ್ತಿರವಾಗಿ ನಿಂತುಕೊಂಡು ನಾನು ಯಾವತ್ತೂ ಮಾತನಾಡಿದ್ದಿಲ್ಲ. ನನಗೆ ಹೊಟ್ಟೆಕಿಚ್ಚಾಯಿತು. ನಾನು ನಿಷ್ಪ್ರಯೋಜಕನೆಂದು ಕೂಡ ನನಗೆ ಅನ್ನಿಸಿತು. ಗಮ್ಮಂತ ಅನ್ನುವ ಅಂದವಾದ ಉಡುಪಾಗಲೀ, ಸುಂದರವಾದ ರಬ್ಬರ್ ಗೂಬೆಯಾಗಲೀ, ಲಕ್ಷಣವಾದ ಮುಖವಾಗಲೀ ನನಗೆ ಇಲ್ಲ. ಒಡೆದ ಗುಂಡಿಗಳ ನನ್ನ ಹರಿದ ಚೆಡ್ಡಿ ಮುದುರಿ ಕೊಳಕಾಗಿತ್ತು. ಅಪ್ಪ ಹತ್ತಿರಕ್ಕೆ ಕರೆದು ನನ್ನನ್ನು ಮಾತನಾಡಿಸದುದಕ್ಕೆ ಇದು ಕಾರಣವಿರಬಹುದೆ?

ಅಳಬೇಕು ಅನ್ನಿಸಿತು. ದಿಂಬಿಗೆ ಮುಖ ಒತ್ತಿ ಸುಮ್ಮನೆ ಬಿದ್ದುಕೊಂಡೆ.

"ವಾಸು...." ಅಪ್ಪ ಕರೆದರು.

"ಬಂದೆ?"

"ಇಲ್ಲಿ ಬಾ."

ನಿಧಾನವಾಗಿ ನಡೆದೆ. ಪಕ್ಕದಲ್ಲಿ ನಿಂತುಕೊಂಡು ಅಪ್ಪನ ಹೆಗಲ ಮೇಲೆ ಬೆರಳಾಡಿಸುವ ಲೀಲಾಳನ್ನು ಕಣ್ಣೆತ್ತಿ ನೋಡಲು ನನಗೆ ಧೈರ್ಯವಿರಲಿಲ್ಲ.

"ಬಾ ಮಗನೆ ಇಲ್ಲಿ."

ಅಪ್ಪ ನನ್ನನ್ನು ಹತ್ತಿರಕ್ಕೆ ಕರೆದುಕೊಂಡರು. ನನ್ನ ತುಂಡುಕೂದಲನ್ನು ನೇವರಿಸುತ್ತಾ ಲೀಲಾಳಿಗೆ ಏನೋ ಹೇಳಿದರು.

ಈವತ್ತಿಗೂ ಕೂಡ ಅವರು ಮಾತನಾಡಿಕೊಳ್ಳುವ ಭಾಷೆ ನನಗೆ ಅರ್ಥವಾಗದು. ಆದರೆ ಅವರು ಏನು ಹೇಳಿದರೆಂಬುದರ ಅರ್ಥ ನನಗೆ ಆಗಿತ್ತು.

"ಮಗಳೆ, ಇವ ನಿನ್ನ ಸೋದರ."

ದುಃಖದಲ್ಲಿ ನನಗೆ ಈ ಮಾತುಗಳು ನೆನಪಾಗುತ್ತವೆ.

ಆ ದಿನ ಇಡೀ ಕುಟುಂಬದಲ್ಲಿ ಒಂದು ಚಂಡಮಾರುತವೆದ್ದಿತು. ಕಳೆದ ಆರು ದಿನಗಳಿಂದ ಅದು ಗುರಿಗಾಯಿಸುತ್ತಿತ್ತೆಂದು ನನಗೆ ಆಗ ತಿಳಿಯಿತು. ಅಪ್ಪ ಮತ್ತು ಅಮ್ಮ ಜಗಳ ಮಾಡತೊಡಗಿದರು. ಉಳಿದವರು ಬಾಯಿ ಹಾಕಲಿಲ್ಲ. ಮಾತಿನ ಚಕಮಕಿ ತಾರಕ ಮುಟ್ಟಿತು. ಶಾಂತಿಯಿಂದ ಇರಬೇಕೆಂದು ಅಪ್ಪ ಏನೇನೋ ಪ್ರಯತ್ನಿಸಿದರು.

"ನೀನು ಸಂಪೂರ್ಣವಾಗಿ ತಪ್ಪು ತಿಳಿದುಕೊಂಡಿದ್ದೀಯಾ...."

"ನನಗದೆಲ್ಲಾ ಬೇಕಾಗಿಲ್ಲ. ಎಲ್ಲಾ ನನಗೆ ತಿಳಿದಿದೆ."

"ಏನು ಗೊತ್ತು ನಿನಗೆ?"

"ನನ್ನ ಬಾಯಲ್ಲೇ ಕೇಳಬೇಕಾ? ಮಾಧವನ್ ಎಲ್ಲಾ ಬರೆದು ತಿಳಿಸಿದ್ದಾನೆ."

ಮಾಧವನ್ ಯಾರು ಅಂತ ನನಗೆ ಗೊತ್ತಿತ್ತು. ಮಾಧವನ್‌ಮಾಮ ಅಮ್ಮನ ಅಣ್ಣ. ಅವರು ಇದ್ದದ್ದು ಅಪ್ಪ ಕೆಲಸ ಮಾಡುತ್ತಿದ್ದ ಜಾಗದ ಸಮೀಪದಲ್ಲೆ."

ಅದಾದ ಬಳಿಕ ಅಪ್ಪ ವಾದ ಮುಂದುವರಿಸಲಿಲ್ಲ. ಅಮ್ಮ ಮಾತ್ರ ಏರು ದನಿಯಲ್ಲಿ ಮಾತಾಡ್ತಾನೇ ಇದ್ದಳು. ಮಾತಿನಲ್ಲಿ ಬೆಂಕಿಯುಗುಳುತ್ತಾ.

ಹಾಸಿಗೆಗೆ ಮುಖ ಒತ್ತಿ ನಾನು ಉರುಳಿದ್ದೆ. ನನ್ನ ಹೃದಯ ಒಡೆದುಹೋಗುವುದೇನೋ ಎನ್ನಿಸುತ್ತಿತ್ತು. ನಾನು ಒಳಗಿನಿಂದ ಪ್ರಾರ್ಥಿಸಿದೆ. "ಭಗವತಿ....ಏನೂ ಸಂಭವಿಸದಿರಲಿ ತಾಯಿ....!"

ಟೇಬಲ್ಲಿನಿಂದ ಲೋಟಗಳು ಬಿದ್ದು ಚೂರು ಚೂರಾದವು.

ನನ್ನ ಕಿವಿ ಮುಚ್ಚಿಕೊಂಡೆ.

ದಿಂಬಿನ ಮೇಲೆ ಕಣ್ಣೀರು ಹರಿಯಿತು.

"ಈಶ್ವರ!"

ಸ್ವಲ್ಪ ಹೊತ್ತಿನ ನಂತರ ಅಮ್ಮ ಮಹಡಿ ಇಳಿದು ಹೋಗುವುದು ಕಂಡಿತು. ಸುಮ್ಮನೆ ಅಳುವ ಸದ್ದು.

ಮಾರನೇ ದಿನ ಬೆಳಗ್ಗೆ ನನಗೆ ಎಚ್ಚರವಾದಾಗ, ಅಪ್ಪ ಮತ್ತು ಲೀಲಾ ಹೊರಡಲು ಸಿದ್ಧವಾಗಿದ್ದರು.

ಹಜಾರದಲ್ಲಿ ಅವರ ಪೆಟ್ಟಿಗೆಗಳು ಜೋಡಿಸಿದ್ದವು.

ಮೆಲ್ಲಗೆ ಎಟ್ಟನ್‌ನ ಕೇಳಿದೆ. "ಅಪ್ಪ ಎಲ್ಲಿಗೆ ಹೋಗ್ತಿದ್ದಾರೆ?"

"ಯಾರಿಗೆ ಗೊತ್ತು?"

ದುಃಖದಲ್ಲಿ ನಾನಂದುಕೊಂಡೆ: ಯಾಕೆ ಎಲ್ಲರೂ ಹೀಗಾಡ್ತಿದ್ದಾರೆ ಇಲ್ಲಿ? ಮೊದಲು ಅಪ್ಪ ಅಜ್ಜಿಗೆ ಹೋಗಿ ಬರ್ತೀನಿ ಅಂತ ಹೇಳಿದರು. ನಂತರ ನಮಗೆಲ್ಲಾ. ಎಟ್ಟನ್ ಮತ್ತು ಬಲೆಕ್ತನ್ ತಮ್ಮ ಕಣ್ಣುಗಳನ್ನು ಒರೆಸಿಕೊಂಡರು.

ಅಪ್ಪ ಇದನ್ನು ಗಮನಿಸಿದ್ದಂತಿಲ್ಲ. ಅಂಗಳಕ್ಕೆ ನಡೆದುಹೋಗಿ ತಮ್ಮ ಮುಂಗೈ ಮೇಲೆ ಛತ್ರಿಯನ್ನು ನೇತುಹಾಕಿಕೊಂಡು ಕೂಗಿದರು.

"ಲೀಲಾ!"

"ಡ್ಯಾಡಿ...."

ಹೊರಡುವುದಕ್ಕೆ ಅಂತ ಸಿದ್ಧವಾಗಿ ಉಡುಪು ಧರಿಸಿದ್ದಳು. ಅವಳ ಲಂಗದ ಮೇಲೆ ಸೂರ್ಯಕಾಂತಿಯ ಹೂವುಗಳ ಚಿತ್ರವಿತ್ತು. ಸೊಂಟದ ಸುತ್ತಾ ಒಂದು ನೀಲಿ ರೇಶಿಮೆ ದಾರ ಸುತ್ತಿಕೊಂಡಿದ್ದಳು. ಕೈಯಲ್ಲಿ ರಬ್ಬರ್‌ಗೊಂಬೆ ಹಿಡಿದಿದ್ದಳು.

ಹಜಾರದ ಕಂಭಕ್ಕೊರಗಿ ನಾನು ನಿಂತಿರಬೇಕಾದರೆ ನನ್ನತ್ತ ನೋಡಿ ನಕ್ಕಳು. ಪ್ರತಿಯಾಗಿ ನಾನು ನಗಲಿಲ್ಲ. ನನ್ನ ಬಳಿ ಬಂದು ಅವಳು ಆ ರಬ್ಬರ್ ಬೊಂಬೆಯನ್ನು ನನ್ನ ಕೈಗೆ ಇಟ್ಟಾಗ ವಿಸ್ಮಯದಿಂದ ನಾನು ಮರಗಟ್ಟಿದ್ದೆ. ಮತ್ತೆ ನಕ್ಕು, ಮೃದುವಾಗಿ ಏನೋ ಅಂದು ತನ್ನ ಪುಟ್ಟ ಕೊಡೆ ಹಿಡಿದು ಮೆಟ್ಟಿಲಿಳಿದು ಹೋದಳು.

ಗೇಟಿನ ಆಚೆ ನಡೆದು ಹೋದರು, ಅಪ್ಪ ಮುಂದು ಮುಂದೆ, ಲೀಲಾ ಹಿಂದೆ. ನಿಡಿದಾದ ಓಣಿಯನ್ನು ದಾಟಿ ದೂರಕ್ಕೆ ಅವರು ಹೊರಟು ಹೋದರು. ನಿಜವಾಗಿಯೂ ಅವರು ಹೊರಟು ಹೋಗುತ್ತಿದ್ದಾರೆಯೇ?

ಸೂರ್ಯಕಾಂತಿ ಹೂವುಗಳು ಮತ್ತು ನೀಲಿ ರೇಶಿಮೆದಾರ ದೃಷ್ಟಿಯಿಂದ ಹಾಗೇ ಮಾಯವಾಗತೊಡಗಿದವು.

ಅನೇಕ ವರ್ಷಗಳ ನಂತರ ಇವತ್ತು ನಾನು ಲೀಲಾಳ ಬಗ್ಗೆ ಯೋಚಿಸಿದೆ. ಪ್ರೀತಿಯ ಸೋದರಿ ಇಷ್ಟು ದೂರದಿಂದ ನಿನಗೆ ಶುಭಕಾಮನೆಗಳನ್ನು ಕೋರುತ್ತಿದ್ದೇನೆ.

ನಿನ್ನ ನೆನಪಲ್ಲಿ, ಇದನ್ನು ಬರೆಯುತ್ತಿದ್ದೇನೆ.



ಜನರು ಒಬ್ಬನಿಗೆ ತಾವು ಕೊಟ್ಟುದನ್ನು ನೆನಪಿಡುವುದೇ ಬಹಳ. ಆದರೆ ತಾವು ಇತರರಿಂದ ಪಡೆದುದರ ಕಡೆಗೆ ಅವರ ಗಮನ ಹೆಚ್ಚಾಗಿರುವುದಿಲ್ಲ.

—ಅಲೆಗ್ಸಾಂಡರ ಡುಮಾ

ಅನೇಕರು ತಮಗಿರುವ ಸುಖ ಸಂತೋಷಗಳಿಂದ ಸಂತೋಷಿಸುವುದಕ್ಕಿಂತ ಹೆಚ್ಚು ಆ ಸುಖ ಸಂತೋಷಗಳು ಎಲ್ಲಿ ಕಡಿಮೆಯಾಗುತ್ತವೋ ಎಂದು ಚಿಂತಿಸುತ್ತಿರುತ್ತಾರೆ.

—ರಿವರೋಲ

ಕಾಗದದ ದೋಣಿಗಳು

ಎಂ. ಎಸ್. ಲಕ್ಷ್ಮಣಾಚಾರ್

ವರಾಂಡದ ಅಂಚಿನಲ್ಲಿದ್ದ ಕಬ್ಬಿಣದ ಕಟಕಟೆಯನ್ನು ಹಿಡಿದುನಿಂತ ಕಲಾವಿದನು ಸುತ್ತಲೂ ಕಣ್ಣೋಡಿಸಿದನು: "ಇಲ್ಲ ಈ ಪ್ರಪಂಚಕ್ಕೇನೂ ಆಗಿಲ್ಲ."

ಅವನ ವಾಸಸ್ಥಳದ ಮುಂಭಾಗದಲ್ಲಿ ಎರಡು ಹೂವಿನ ಮರಗಳಿದ್ದವು. ಎರಡರ ತುಂಬಾ ಹೂವುಗಳು. ಎಳೆಬಿಸಿಲಿನಿಂದ ಬಾಡಿಹೋಗಿರುವ ಹೂವುಗಳು. ಲೋಕ ವ್ಯಾಪಾರಕ್ಕೆ ಯಾವುದೇ ರೀತಿಯ ಸ್ತಂಭನ ವಿಲ್ಲ. ದೂರದಲ್ಲಿದ್ದ ರೈಲ್ವೆ ಹಳಿಗಳ ಮೇಲೆ ರೂಢಿಯಂತೆ ವಾಗನ್‌ಗಳು ಒಂದರ ಹಿಂದೆ ಒಂದರಂತೆ ಚಲಿಸುತ್ತಲೇ ಇವೆ. ಆ ಕಾಂಪೌಂಡ್‌ನಿಂದ ಆಚೆ ವಾಸಿಸುತ್ತಿರುವ ಫೋರ್‌ಮೆನ್ ಪಟ್ಟೆಪಟ್ಟೆ ಇರುವ ನಿಕ್ಕರನ್ನು ಮಾತ್ರ ಧರಿಸಿ ನಿಂತು ಷಾಟ್‌ಗನ್ ಅನ್ನು ಗುರಿ ಇಟ್ಟು ಹೊಡೆಯುವಂತೆ ನಟಿಸುತ್ತಾ ಮಧ್ಯೆಮಧ್ಯೆ ಪಕ್ಷಿಗಳ ಬೇಟೆಯನ್ನು ಮಾಡುತ್ತಿದ್ದಾನೆ. ನೆರೆಹೊರೆಯ ಮಕ್ಕಳೆಲ್ಲರೂ ಅಂಗಳದಲ್ಲಿ ಆಟವಾಡುತ್ತಿದ್ದಾರೆ. ಅಬ್ಬಾ ಏನು ಕೋಲಾಹಲ.

ಆದರೆ ಕಲಾವಿದನು ಮಾತ್ರ ನೋವಿನಿಂದ ಮುಖ ಹಿಂಡಿದನು. ಎಳೆಯ ಬಿಸಿಲು ತಾಗಿ ಬಾಡುತ್ತಿರುವ ಹೂಗಳು, ಆಟವಾಡುತ್ತಾ ಕೋಲಾಹಲ ಎಬ್ಬಿಸುತ್ತಿದ್ದ ಮಕ್ಕಳು ಇರುವ ಇಂತಹ ಒಂದು ಸುಪ್ರಭಾತದಲ್ಲಿ ಒಬ್ಬ ಮನುಷ್ಯನು ಈ ಲೋಕದೊಂದಿಗೆ ವಿದಾಯ ಹೇಳಲು ಸಿದ್ಧನಾಗುತ್ತಿದ್ದಾನೆ.

ಅವನು ಜೀವನದ ವೈಫಲ್ಯಕ್ಕೆ ಸಂಬಂಧಿಸಿದಂತೆ ಆಲೋಚಿಸತೊಡಗಿ ಬಹುದಿನಗಳೇ ಆಗಿದ್ದವು. ರಾಜ್ಯವನ್ನು ಅಧಿಕಾರವನ್ನು, ಕಿರೀಟವನ್ನು ದೂರಕ್ಕೆಸೆದು, ಅರಮನೆಯನ್ನು ತ್ಯಜಿಸಿಹೋದ ಸಿದ್ಧಾರ್ಥನ ಬಗ್ಗೆ ಅವನಿಗೆ ಅಂದು ತಿರಸ್ಕಾರ ತೋರುತ್ತಿತ್ತು. ಈಗ ಅವನ ಬಗ್ಗೆ ಯೋಚಿಸುವಾಗ ಮೈ ನವಿರೇಳುತ್ತಿತ್ತು.

....ಎಡ್‌ವಿನ್ ಆರ್ನಾಲ್ಡ್‌ನ ಆ ಒಂದು ಕವಿತೆಯನ್ನು ಅವನು ಬಹುಹಿಂದೆ ಓದಿದ್ದನು. ಆದರೂ ಅದು ಈಗಲೂ ಅವನ ನೆನಪಿನಲ್ಲಿತ್ತು. ನಿಶ್ಶಬ್ದವಾದ ಆ ರಾತ್ರಿ, ಬಹುಕ್ಷೀಣಳಾಗಿ ನಿದ್ರಿಸುತ್ತಿದ್ದ ಹೆಂಡತಿ ಮತ್ತು ಮಗು, ಹಗಲೆಲ್ಲ ನೃತ್ಯ ಮಾಡಿದ ನರ್ತಕಿಯರು, ಅಲ್ಲಿ ಒರಗಿಸಿಟ್ಟಿದ್ದ ವೀಣೆಗಳಿಗೆಳೆದು ಕಟ್ಟಿದ್ದ ತಂತಿಗಳ ಮೇಲೆ

ಮೂಲ: ಎಂ. ಟಿ. ವಾಸುದೇವನ್ ನಾಯರ್ ಅವರ ಮಲೆಯಾಳಂ ಕಥನದ ಅನುವಾದ.

ಜೋರಾಗಿ ಗಾಳಿ ಬೀಸಿದಾಗ ಶೋಕಾತ್ಮಕವಾದ ಒಂದು ನಾದವೇಳುತ್ತಿದೆ....

ಆದರೆ ಸಿದ್ಧಾರ್ಥನ ಆ ನಿಷ್ಕ್ರಮಣವು ಒಂದು ಅನ್ವೇಷಣೆಯ ಆರಂಭವಾಗಿತ್ತು. ಆದರಿದು ಒಂದು ಅಂತ್ಯವಾಗಿದೆ.

ಸುಪ್ರಸಿದ್ಧನಾದ ಈ ಕಲಾವಿದನು ಆತ್ಮಹತ್ಯೆಮಾಡಿಕೊಂಡನೆಂದು ತಿಳಿದಾಗ ಬಹುಶಃ ಈ ಲೋಕಕ್ಕೆ ಒಂದು ನಡುಕವುಂಟಾಗಬಹುದು... ಛೆ ಬೇಡ.

ಆದರೆ ಅವನಿಗೆ ರೋಸಿಹೋಗಿತ್ತು. ಈ ಲೋಕವನ್ನೇ ಅವನು ದ್ವೇಷಿಸುತ್ತಿದ್ದನು. ರೈಲ್ವೆ ಯಾರ್ಡ್‌ನಲ್ಲಿ ಶಬ್ದ ಮಾಡುತ್ತಾ ಚಲಿಸುತ್ತಿದ್ದ ಆ ರೈಲ್ವೆ ಎಂಜಿನ್‌ಗಳು, ಷಾಟ್‌ಗನ್ ಎತ್ತಿಹಿಡಿದು ಹಕ್ಕಿಗಳನ್ನು ಬೇಟೆಯಾಡುತ್ತಾ ನಡೆಯುತ್ತಿದ್ದ ಡೊಳ್ಳು ಹೊಟ್ಟೆಯ ಫೋರ್‌ಮನ್ ಎಲ್ಲವನ್ನು ಅವನು ದ್ವೇಷಿಸುತ್ತಿದ್ದನು.

ಆರಾಮ ಸೋಪಾನದ ಮುಂಭಾಗಕ್ಕೆ ಕುರ್ಚಿಯನ್ನೆಳೆದು ಹಾಕಿಕೊಂಡು ಆ ಕಲಾವಿದನು ಕುಳಿತನು. ಪತ್ರಿಕೆಗಳು, ಪುಸ್ತಕಗಳು, ಖಾಲಿಯಾದ ಸಿಗರೇಟ್ ಪ್ಯಾಕೆಟ್‌ಗಳು, ಆಹ್ವಾನ ಪತ್ರಿಕೆಗಳು, ಕಟ್ಟು ಕಟ್ಟಾಗಿದ್ದ ಬಿಳಿಯ ಕಾಗದಗಳು....ಎಲ್ಲಾ ಎದುರಿಗೇ ಚೆದುರಿಬಿದ್ದಿದ್ದವು. ಅವನು ದೊಡ್ಡ ಪುಸ್ತಕದಿಂದ ಒಂದು ಕಾಗದವನ್ನು ಹರಿದು ತೆಗೆದುಕೊಂಡು ತನ್ನ ಮುಂದಿದ್ದ ಪೆನ್‌ನ ಕ್ಯಾಪನ್ನು ತೆರೆದನು. ಪೆನ್‌ನ ಕ್ಯಾಪ್ ತೆಗೆಯುವಾಗ ಅನೇಕ ವಿಷಯಗಳು ಅವನ ಮನಃ ಪಟಲದಲ್ಲಿ ಸುಳಿಯುತ್ತಿದ್ದುವು. ಅಂದವಾದ ಆ ಪಾರ್ಕರ್ ಪೆನ್‌ಗೆ ಸಂಬಂಧಿಸಿದಂತೆ ಅವನು ಹಿಂದೊಮ್ಮೆ ಬರೆದಿದ್ದುದುಂಟು: "ಪ್ರೇಮ, ಪಾರ್ಕರ್ ಪೆನ್ ಮತ್ತು ಸಹೋದರಿಯ ಮದುವೆ"—ಆ ಕಥೆ ಈಗಲೂ ಅವನಿಗೆ ಜ್ಞಾಪಕವಿತ್ತು.

ಅದನ್ನು ಓದಿದಾಗ ಪ್ರೇಮಿ ಪುಳಕಗೊಂಡಿರಬಹುದು.

ಸಹೋದರಿ ಅತ್ತು ಬಿಟ್ಟು....

ಕಾಗದದ ಮೇಲ್ಭಾಗದಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆದನು: ಕಲಾವಿದ ಶ್ರೀ.... ಆತ್ಮಹತ್ಯೆ ಮಾಡಿಕೊಳ್ಳಲು ನಿಶ್ಚಯಿಸಿದ ಕಾರಣಗಳು.

ಅದರ ಕೆಳಗವನು ಗೆರೆಹಾಕಿದನು. ಆ ಗೆರೆಯನ್ನು ಮತ್ತಷ್ಟು ಕಪ್ಪಾಗಿಸಿದನು.

ಅನಂತರ ಅವನು ಆಲೋಚಿಸಿದನು: ಯಾವುದಾ ಕಾರಣಗಳು?

ಯೋಚಿಸಿದಷ್ಟು ಅವನ ಕ್ಲೇಶ ವರ್ಧಿಸಿತು. ಯಾವುದೂ ಸ್ಪಷ್ಟವಲ್ಲ. ಕಾರಣಗಳೇನೋ ಅನೇಕವಿವೆ. ಮಬ್ಬಾದ ಬೆಳದಿಂಗಳಲ್ಲಿ ನೆರಳುಗಳು ನಿಶ್ಚಲವಾಗಿ ಹೆಣೆದುಕೊಂಡು ಬಿದ್ದಿರುವಂತೆ....ಎಲ್ಲಾ ಕಾರಣಗಳನ್ನು ಒಟ್ಟಿಗೆ ಗಮನಿಸಿದರೆ.... ಏನೆಂದು ಹೇಳುವುದು? ನಾನು ಈ ಲೋಕವನ್ನೇ ದ್ವೇಷಿಸುತ್ತೇನೆ....

ಆದರೆ ಅಲ್ಲಿಗದು ಮುಗಿಯುವುದಿಲ್ಲ ತಾನು ಸತ್ತರೆ ಈ ಬಿಳಿಯ ಕಾಗದವು ಕಾನೂನಿನ ಕೈಗಳಿಗೆ ಸಿಗುತ್ತವೆ....ಕಾನೂನಿಗಾದರೆ, ಮನುಷ್ಯ ಸ್ವಭಾವದ ಸಂಕೀರ್ಣ ಶಕ್ತಿಗಳಾಗಲೀ, ಮನೋಮಂಡಲದಲ್ಲಿನ ಅತಿ ಸೂಕ್ಷ್ಮ ಚಲನೆಗಳಾಗಲಿ ತಿಳಿಯದು. ಆಗ ಏನು ಮಾಡುವುದು?

ಅವನು ಕಬ್ಬಿಣದ ಕಟಕಟೆಯ ಮೂಲಕ ಹೊರಕ್ಕೆ ನೋಡಿದನು. ಅತ್ತಕಡೆಗಿರುವ ದೊಡ್ಡ ಕಟ್ಟಡದ ಹಿಂಭಾಗದಲ್ಲಿ ಒಂದು

ಕೆಂಪು ಗುಲಾಬಿಯನ್ನು ನೇವರಿಸುತ್ತಾ ಒಬ್ಬ ಹುಡುಗಿ ನಿಂತಿದ್ದಾಳೆ. ಅವಳು ನಾಟಕ ಕಂಪನಿಯಲ್ಲಿ ಅಭಿನಯಿಸುವವಳು. ಕಳೆದ ಎಷ್ಟೋ ದಿನಗಳಿಂದ ಅಲ್ಲಿ ನಾಟಕಗಳನ್ನು ಕಲಿಸುತ್ತಿದ್ದಾರೆ. ಅನೇಕರು ಕಲಿಯಲೂ ಬರುತ್ತಲೂ ಇದ್ದಾರೆ. ಅವಳು ಸ್ನೇಹಿತೆಯರಿಗಾಗಿ ಕಾದು ನಿಂತಿದ್ದಾಳೆ.

ಈಗ ಅವಳು ಆ ಗುಲಾಬಿ ಹೂವುಗಳ ದಳಗಳನ್ನು ಒಂದೊಂದಾಗಿ ಜಿಗುಟಿ ಹಾಕುತ್ತಿದ್ದಾಳೆ. 'ಬೇಡ, ಸುಂದರಿ, ಗುಲಾಬಿಯ ದಳಗಳಿರುವುದು ಜಿಗುಟಿ ಹಾಕಲಲ್ಲ' ಎಂದು ಹೇಳೋಣವೆನಿಸಿತು.

ಅವನು ನೋಡುತ್ತಲೇ ಇರಬೇಕಾದರೆ ಅವಳ ಸ್ನೇಹಿತೆಯರು ಬಂದರು. ಬಿಳಿಯ ಕಾಗದವನ್ನು ಮುಂದಿರಿಸಿಕೊಂಡು ಪೆನ್ ಕ್ಯಾಪ್ ತೆಗೆದು ಕುಳಿತಿರುವ ತನ್ನನ್ನು ಕಂಡರೇ? ಕಾಣಲಿಲ್ಲವೇ? ನಕ್ಕರೇ?

ನಕ್ಕರು, ಆ ನಗುವಿನಲ್ಲಿ ಅಪಹಾಸ್ಯವಿಲ್ಲವೇ?....

ಜೀವನದಲ್ಲೂ ನಾಟಕದಲ್ಲೂ ಚೆನ್ನಾಗಿ ನಟಿಸುವ ಹುಡುಗಿಯರೇ? ನಗಿರಿ, ಜೋರಾಗಿ ನಗಿರಿ, ನಾಳೆ ನೀವು ನಾಟಕವನ್ನು ಅಭಿನಯಿಸಲು ಬರುವಾಗ ನಾನಿಲ್ಲಿರುವುದಿಲ್ಲ. ನೀವು ನಾನೆಲ್ಲಿಂದು ಅವರಿವರನ್ನು ಕೇಳಬಹುದು.

"ನಾಟಕದಲ್ಲಭಿನಯಿಸಲು ಬರುವ ನಟಿಗಳೇ?
ನಾಳೆ.................................."

ಇದನ್ನು ಪೂರ್ತಿ ಬರೆಯಲು ಸಾಧ್ಯವಾಗುತ್ತಿಲ್ಲ ಅಥವಾ ಆತ್ಮದಲ್ಲಿ ಕವಿತೆ ಇಲ್ಲದಿರುವುದರಿಂದಲೋ? ಬಾಲ್ಯಕಾಲದಲ್ಲಿ ಕವಿತೆಯನ್ನು ಬರೆದಿರುವುದುಂಟು. ಅನಂತರ ಲೇಖನಗಳನ್ನು ಬರೆದಿರುವುದೂ ಉಂಟು. ಕೊನೆಗೆ ಕಥೆಗಳನ್ನು ಬರೆದಿರುವುದುಂಟು....ಸಿಕ್ಕಾಪಟ್ಟೆ ಅವನು ಕಥೆಗಳನ್ನು ಬರೆದು ಬಿಸಾಡಿರುವುದುಂಟು.

ಅವರೆಲ್ಲ ರಿಹರ್ಸಲ್ ಕೋಣೆಗೆ ಹೋಗುತ್ತಿದ್ದಾರೆ. ಅಲ್ಲಿ ನಟರು ಕಾದಿರುತ್ತಾರೆ. ನಿರ್ದೇಶಕನೂ ಇದ್ದಾನೆ, ನಿರ್ದೇಶಕನ ಗಂಭೀರವಾದ ಹುಸಿನಗುವು ಆಗಾಗ್ಗೆ ರಿಹರ್ಸಲ್ ಹಾಲ್‌ನಿಂದ ಕೇಳಿಬರುವುದುಂಟು.

ಅವನು ಸಿಟ್ಟಿನಿಂದ ಉರಿಯುತ್ತಾ ತನ್ನ ಮುಂದಿರುವ ಕಾಗದದಲ್ಲಿ ಬರೆದನು.

ಒಂದು: ಜೀವನದಲ್ಲಿ ನಾಟಕವೂ ಲೋಕದಲ್ಲಿ ನಟೀನಟರೂ ವರ್ಧಿಸುತ್ತಿದ್ದಾರೆ.

ಬರೆದ ಪಂಕ್ತಿಗಳನ್ನು ಒಂದೆರಡು ಬಾರಿ ಓದಿದನು. ಈ ದಡ್ಡ ಲೋಕಕ್ಕೆ ಅದು ಅರ್ಥವಾಗುತ್ತೆಯೇ?

ಅವನು ಮತ್ತೆ ಕೆಳಕ್ಕೆ ದಿಟ್ಟಿಸಿ ನೋಡಿದನು. ಕಪ್ಪಗೆ ತೆಳ್ಳಗಿದ್ದ ಒಬ್ಬ ಹುಡುಗಿ ಚಪ್ಪಲಿಯ ಹಿಮ್ಮಡಿಯನ್ನು ಅದುಮಿ ತುಳಿಯುತ್ತಾ ಬಳುಕುತ್ತಾ ರಿಹರ್ಸಲ್ ಕೋಣೆಯೊಳಗೆ ಹೋಗುತ್ತಿದ್ದಳು. ಅವಳೊಬ್ಬಳು ನರ್ತಕಿ. ಮೊದಲು ನಟಿಯರು. ಅನಂತರ ನರ್ತಕಿ. ಪರವಾಗಿಲ್ಲ. ಎತ್ತರದ ಹಿಮ್ಮಡಿಯಿದ್ದ ಚಪ್ಪಲಿಯನ್ನು ಹಾಕಿಕೊಂಡಿದ್ದ, ಬಳುಕುತ್ತಾ ನಡೆಯುತ್ತಿದ್ದ ಆ ನೆರೆಹೊರೆಯ ನರ್ತಕಿಗೆ ಅವನು ನಿಶ್ಶಬ್ದವಾಗಿ ವಿದಾಯ ಹೇಳಿದನು.

ಹೊಡೆದುಹಾಕಿದ ಪಂಕ್ತಿಯ ಕೆಳಗೆ ಅವನು ಒಂದು ಕಾರಣವನ್ನು ಬರೆದನು.

ಒಂದು: ನಾಟಕಕ್ಕೂ ಜೀವನರೀತಿಗೂ ಹೊಂದಾಣಿಕೆ ಇರುವುದಿಲ್ಲ.

ಕಾರಣಗಳನ್ನು ಬರೆದಾದ ಮೇಲೆಯೇ ಮಿಕ್ಕ ವಿಷಯಗಳನ್ನು ಯೋಚಿಸುವುದು.

ಈ ಚಿಂತೆ ಅವನ ಮನಸ್ಸಿನೊಳಹೊಕ್ಕದ್ದ್ಯಾವಾಗೆಂದು ಅವನಿಗೆ ಜ್ಞಾಪಕವಿರಲಿಲ್ಲ. ನೆನ್ನೆಯೇ? ಕೆಲ ತಿಂಗಳುಗಳ ಹಿಂದೆಯೇ? ನೆನ್ನೆ—ನೆನೆಸಿಕೊಂಡಾಗ ದ್ವೇಷವೂ ಜುಗುಪ್ಸೆಯೂ ತೋರಿತು. ಎಂತಹ ಅಧಃಪತನವಾಗಿತ್ತು! ಸಂಜೆ ಅವನ ಸ್ನೇಹಿತರು ಬಂದು ಅವನನ್ನು ಕರೆದುಕೊಂಡು ಹೋಗಿದ್ದು, ನಗರದ ಮಧ್ಯಭಾಗದಲ್ಲಿದ್ದ ಒಂದು ಕಟ್ಟಡದ ಎರಡನೆಯ ಅಂತಸ್ತಿಗೆ. ಧೂಳು ತುಂಬಿದ್ದ ಮೇಜಿನ ಸುತ್ತಲೂ ಕುಳಿತು ಅವರೆಲ್ಲ ಮಾತನಾಡಿದ್ದರು.... ಅನೇಕ ವಿಷಯಗಳ ಬಗ್ಗೆ ಮಾತನಾಡಿದ್ದರು. ತಾನು ಸುಮ್ಮನೆ ನಕ್ಕಿದ್ದಷ್ಟೋ ಅಷ್ಟೆ. ಅನಂತರ ಆ ರಂಗವು ಬದಲಾಗಿತ್ತು.

ಮೇಜಿನ ಮೇಲೆ ಸಾಲುಸಾಲಾಗಿ ಗಾಜಿನ ಸೀಸೆಗಳೂ, ಸೋಡಾ ಬಾಟಲ್‌ಗಳೂ, ಜೊತೆಗೆ ತಿಳಿ ಹಳದಿ ಬಣ್ಣದ ದ್ರಾವಕ ತುಂಬಿದ ಒಂದು ದೊಡ್ಡ ಬಾಟಲೂ ಬಂದವು.

ಯಾರೋ ಹೇಳಿದರು.

"ಹೈವಾರ್ಡ್ಸ್‌ಗೆ ವಂದನೆಗಳು."

ರಾತ್ರಿ ತನ್ನ ವಾಸಸ್ಥಳಕ್ಕೆ ಹಿಂದಿರುಗಿ ಬಂದು ಹಾಸಿಗೆಯಲ್ಲಿ ಉರುಳಿಕೊಂಡಾಗ ಅವನಿಗೆ ಏನೂ ತೋಚಲಿಲ್ಲ. ತನ್ನ ಸುತ್ತ ಕೇವಲ ಶೂನ್ಯತೆಯೇ ತುಂಬಿತ್ತು. ಲೋಕದಲ್ಲಿನ ಕಟ್ಟಡಗಳೂ ವೃಕ್ಷಗಳೂ, ಎಲೆಕ್ಟ್ರಿಕ್ ಕಂಬಗಳೂ, ಎಲ್ಲವನ್ನೂ ತೆಗೆದು ಹಾಕಿ ಇಬ್ಬನಿಯನ್ನು ತುಂಬಿಸಿಟ್ಟವೆಂದು ಕೊಳ್ಳೋಣ. ಆಗ ಎಲ್ಲೆಲ್ಲಿ ನೋಡಿದರೂ ಬರಿ ಇಬ್ಬನಿಯೇ ತುಂಬಿರುತ್ತೆ.... ಅವನಿಗೆ ಎಚ್ಚರವಾದಾಗ ಅಳಬೇಕೆಂದೆನಿಸುತ್ತಿತ್ತು.

ಆ ಕಲಾವಿದನು ತನ್ನ ಪ್ರೇಯಸಿಯನ್ನು ನೆನೆಸಿಕೊಂಡನು. ಪ್ರೀತಿ ಪಾತ್ರಳಾದ ಪ್ರಿಯೆ—ಅವಳಿಗೆ ಇನ್ನೆಂದೂ ನೋವು ತೋರುವುದಿಲ್ಲ. ಅವಳ ದುರಿತಗಳು ಕೊನೆಯಾಗಲಿವೆ.

ಅವನು ಸತ್ತ ಸುದ್ದಿ ತಿಳಿದಾಗ ಲೋಕಾರೂಢಿಯಂತೆ ಅವಳು ಸ್ವಲ್ಪ ಅತ್ತಳೆಂದೆನ್ನಬಹುದಷ್ಟೆ.

ಅವನು ಒಳಗಿನ ಕೋಣೆಯಲ್ಲಿದ್ದ ಹಾಸಿಗೆಯಲ್ಲಿ ಹೋಗಿ ಕುಳಿತನು. ಹೂಗಳನ್ನೂ, ಚಿಟ್ಟೆಗಳನ್ನೂ, ಕಸೂತಿ ಹಾಕಿದ್ದ ಕುಷನ್ ಕವರ್ ಒಂದನ್ನು ಅವಳು ಅವನಿಗೆ ಪಾರಿತೋಷಕವಾಗಿ ಕೊಟ್ಟಿದ್ದಳು—ಈಗ ಅದರಲ್ಲಿ ದುರ್ಗಂಧ ತುಂಬಿಕೊಂಡಿದೆ. ಅವಳಿಗದು ಗೊತ್ತಾದಾಗ....ಇಲ್ಲ, ಅವಳಿಗದು ಗೊತ್ತಾಗುವುದೇ ಇಲ್ಲ....ಒಂದು ವೇಳೆ ತಿಳಿದರೆ.... ತಿಳಿಯುವ ವೇಳೆಗೆ ...ರಾತ್ರಿಯೆಲ್ಲಾ ಅವನಿಗೆ ವಾಂತಿಯಾಯಿತು.

ಬೆಳಗಿನ ಜಾವದಲ್ಲಿ ಅವನೊಂದು ಸ್ವಪ್ನವನ್ನು ಕಂಡನು. ಆಗ ಅವನು ನಿದ್ದೆ ಮಾಡುತ್ತಿದ್ದನೆಂದು ಹೇಳಲಾಗುವುದಿಲ್ಲ. ಜೋಂಪು ಹತ್ತಿರಬೇಕಷ್ಟೆ. ಆಗ ಅವನು ನಿರ್ಜನವಾದ ರಸ್ತೆಯೊಂದರಲ್ಲಿ ನಡೆದು ಹೋಗುತ್ತಿದ್ದನು. ಅವನ ಎದುರಿಗೆ ಅಂತ್ಯವಿಲ್ಲದ ರಸ್ತೆ ಉದ್ದಕ್ಕೆ ಮಲಗಿತ್ತು. ಆಗ ಜೋರಾಗಿ ಶಬ್ದಮಾಡುತ್ತಾ, ನಗುವಿನ ಅಲೆಗಳನ್ನೆಬ್ಬಿಸುತ್ತಾ ಇದ್ದ ಒಂದು ವಾಹನವು ಅವನನ್ನು ದಾಟಿ ಮುಂದೆ ಹೋಯಿತು. ಅದರಲ್ಲಿ ಅವಳು ಕುಳಿತಿದ್ದಳು. ಅವನು ಅವಳ ಹೆಸರು ಹಿಡಿದು ಕೂಗುತ್ತಾ ಆ ವಾಹನದ ಹಿಂದೆ ಓಡಿದನು....ಆದರೆ ಆಮೇಲೆ ಅವನು ಎಲ್ಲೋ ಮಾಯವಾಗಿ ಬಿಟ್ಟನು.

ಇದೇನಾದರೂ ಸಿಂಬಾಲಿಕ್ ಸ್ವಪ್ನವಾಗಿರಬಹುದೇ, ರಸ್ತೆಯನ್ನು ಪ್ರಪಂಚದ ಪ್ರತೀಕವೆಂದು ಹೇಳಬಹುದು. ಆದರೆ ವಾಹನವೋ? ಜೀವನವಿರಬಹುದು.... ಹಾಗಾದರೆ ಭಾಮ?

ಅವನು ಕಾಗದದಲ್ಲಿ ಬರೆದನು.

ಎರಡು: ಸ್ವಪ್ನಗಳು ಗೊಂದಲವನ್ನೆಬ್ಬಿಸುತ್ತವೆ.

ಭಾಮಳಿಗೆ ಕೋಪವೇ? ಅವಳ ಬಗ್ಗೆ ನೆನೆಸಿಕೊಂಡಾಗ ಅವನಿಗೆ ನೋವಾಗದೆ ಇಲ್ಲ. ಜೀವನದ ಅತಿ ಸುಂದರವಾದ ನಿಮಿಷಗಳನ್ನ ಅವನಿಗರ್ಪಿಸಿದ್ದು ಅವಳೇನೇ. ಅವಳಿಂದು ಅವನಿಂದ ದೂರ ಹೋಗುತ್ತಿದ್ದಾಳೆ.

ಕೆಳಗೆ ಕೆಲಸದವನು ಯಾರೊಂದಿಗೋ ಜಗಳವಾಡುತ್ತಿರುವ ಗಲಾಟೆ ಕೇಳಿಸಿತು. ಯಾರೋ ಮೇಲಕ್ಕೆ ಬರುತ್ತಿರುವ ಶಬ್ದ ಕೇಳಿಸಿತು. ತಂಗಪ್ಪನ್ ಅವನ ಆಜ್ಞೆಯನ್ನನುಸರಿಸಿ ಅವರನ್ನು ತಡೆಯಲೆತ್ನಿಸುತ್ತಿದ್ದನು. ಆದರೆ ತಂಗಪ್ಪನನ್ನು ಪಕ್ಕಕ್ಕೆ ತಳ್ಳುತ್ತಾ ಯಾರೋ ಮಹಡಿಯ ಮೇಲಕ್ಕೆ ಹತ್ತಿ ಬರುತ್ತಿದ್ದರು.

"ಗುಡ್ ಮಾರ್ನಿಂಗ್."

ಅವನು ತಲೆಯೆತ್ತಿ ನೋಡಿದನು. ಬಂದದ್ದು ರಾಲ್ ಆಗಿತ್ತು. ಅವನು ಆ ಮನುಷ್ಯನನ್ನು ಕಣ್ಣು ತಪ್ಪಿಸಿ ನಡೆಯಲೆತ್ನಿಸುತ್ತಿದ್ದನು.

ರಾಲ್ ಮಾತನಾಡುತ್ತಿದ್ದದ್ದು ಮಲೆಯಾಳ, ಇಂಗ್ಲೀಷ್, ಕನ್ನಡ ಎಂಬ ಮೂರೂ ಭಾಷೆಗಳನ್ನು ಬೆರೆಸಿದ ಒಂದು ವಿಚಿತ್ರವಾದ ಭಾಷೆಯಾಗಿತ್ತು. ಆದರೆ ಯಾವುದೇ ಭಾಷೆಯಲ್ಲಿ ಹಿಡಿತವಿಲ್ಲದ್ದರಿಂದ ರಾಲ್ ಇವನ ಕೈಯಲ್ಲಿ ಒಂದು ಲೇಖನ ಬರೆಸಲು ಪ್ರಯತ್ನ ಮಾಡುತ್ತಿದ್ದನು. ಗೋಡಂಬಿಯ ಕೈಗಾರಿಕೆಯ ಬಗ್ಗೆ ಒಂದು ಲೇಖನವನ್ನು ಬರೆದುಕೊಡೆಂದು ಇವನನ್ನು ರಾಲ್ ಪ್ರಾಣ ಹಿಂಡುತ್ತಿದ್ದನು. ಅದು ರಾಲ್‌ನ ಔದ್ಯೋಗಿಕ ಜವಾಬ್ದಾರಿಗೆ ಸೇರಿದ್ದಾಗಿತ್ತು. ಮಲೆಯಾಳದಲ್ಲಿ ಒಂದು ಲೇಖನವನ್ನು ಬರೆದುಕೊಡಬೇಕೆಂದು ರಾಲ್ ಹೇಳುತ್ತಿದ್ದನು. ಅಷ್ಟೇ ಅಲ್ಲ. ಅದನ್ನು ತನ್ನ ಪ್ರಭಾವವನ್ನುಪಯೋಗಿಸಿ ನಗರದ ಒಂದು ಪ್ರಮುಖ ಪತ್ರಿಕೆಯಲ್ಲಿ ಪ್ರಕಟ ಮಾಡಲೂ ಬೇಕೆಂದು ರಾಲ್ ಬಲವಂತ ಮಾಡುತ್ತಿದ್ದನು. ಇದಕ್ಕಾಗಿ ಇದೂ ಸೇರಿ ಐದನೆಯ ಬಾರಿ ರಾಲ್ ಇವನ ಬಳಿಗೆ ಬಂದಿದ್ದನು.

"ಬರೆದಿರಾ, ಮಿಸ್ಟರ್,"

"ಇಲ್ಲ."

"ಹಾಗೆ ಮಾಡಿದರೆ ಹೇಗೆ, ಮಿಸ್ಟರ್, ಇದೊಂದೇ ಸಲ ಬರೆದುಕೊಟ್ಟುಬಿಡಿ."

"ಸಾಧ್ಯವೇ ಇಲ್ಲ."

"ಎ ಸ್ಮಾಲ್ ಆರ್ಟಿಕಲ್ ವಿಲ್ ಡು ಆನ್ ಕ್ಯಾಷ್ಯೂ ಇಂಡಸ್ಟ್ರಿ–ಒಳ್ಳೆಯ ಸ್ಕೋಪಿದೆ–ಖಾಲಿಯಾದ ಜಾಗದಲ್ಲೆಲ್ಲಾ ಕ್ಯಾಷ್ಯೂ ಟ್ರೀಸ್ ಬೆಳೆಸಿ–ವೆರಿ ಪ್ರಾಫಿಟೆಬಲ್–ಎಲ್ಲೆಲ್ಲೂ ಕ್ಯಾಷ್ಯೂ ಎಸ್ಟೇಟ್ಸ್...."

ಕಲಾವಿದನ ಹೃದಯವು ಸಣ್ಣಗೆ ನುಡಿಯಿತು. "ನೀನು ತಕ್ಷಣ ಸತ್ತು ಹೋದರೆ.... ನಿನ್ನನ್ನೇ ಸುಟ್ಟ ಸ್ಮಶಾನದಲ್ಲಿ ನಾನೊಂದು ಕ್ಯಾಷ್ಯೂ ಗಿಡವನ್ನು ನೆಟ್ಟು ಬೆಳೆಸುತ್ತೇನೆ.

"ಹೇಯ್ ಮಿಸ್ಟರ್, ಬರೆದು ಕೊಟ್ಟುಬಿಡಬಾರದೆ, ನನ್ನ ಲಾಂಗ್ವೇಜ್ ಚೆನ್ನಾಗಿಲ್ಲ."

ಕಲಾವಿದನು ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿ ಎದ್ದು ನಿಂತು ಹೇಳಿದನು.

"ಮಿಸ್ಟರ್ ರಾಲ್, ನಿಮ್ಮನ್ನು ನಾನು ದ್ವೇಷಿಸುತ್ತೇನೆ. ನಿಮ್ಮ ಗೋಡಂಬಿ ಕೈಗಾರಿಕೆಯನ್ನೂ ನಾನು ದ್ವೇಷಿಸುತ್ತೇನೆ."

ಪಾಚಿ ಕಟ್ಟಿದ್ದ ಹಲ್ಲುಗಳನ್ನೆಲ್ಲಾ ಹೊರಕ್ಕೆ ತೋರಿಸುತ್ತಾ ರಾಲ್ ನಕ್ಕನು.

"ಟೆಂಪರ್ ಲೂಸ್! ನೆವರ್ ಮೈಂಡ್, ಇಂದೇ ಬರೆಯಬೇಕು." ರಾಲ್ ಹೊರಟು ಹೋದನು.

ಕಲಾವಿದನು ಬಿಳಿಯ ಕಾಗದವನ್ನು ತೆಗೆದುಕೊಂಡು ತನ್ನ ಮುಂದೆ ಹರಡಿಟ್ಟು ಕಾರಣಗಳ ಪಟ್ಟಿಯಲ್ಲಿ ಮೂರು ಎಂದು ಗುರುತು ಹಾಕಿ ಬರೆದನು.

—ಲೋಕದಲ್ಲಿ ದಯಾನಂದನಂತಹ ಮನುಷ್ಯ ದ್ರೋಹಿಗಳ ಸಂಖ್ಯೆ ಹೆಚ್ಚುತ್ತಿದೆ.

ಅವನು ಅದನ್ನು ಒಮ್ಮೆ ಓದಿದನು. ಅನಂತರ ಗಾಢವಾಗಿ ಚಿಂತಿಸಿದನು. ಬರೆದ ವಾಕ್ಯವನ್ನು ಹೊಡೆದು ಹಾಕಿದನು. ಬೇರೆ ಬರೆದನು.

ಮೂರು: ಕಲೆಗೂ ಗೋಡಂಬಿಯ ಕೈಗಾರಿಕೆಗೂ ಯಾವುದೇ ರೀತಿಯ ಸಂಬಂಧವಿಲ್ಲ.

ಅನಂತರ ಅವನು ಸಮಾಧಾನದಿಂದ ವರಾಂಡದಲ್ಲಿ ಅತ್ತಿಂದಿತ್ತ ಶತಪಥ ನಡೆದನು.

ಕೆಳಗೆ ರಿಹರ್ಸಲ್ ಹಾಲ್‌ನಿಂದ ನಾಟಕದವರ ಗಡಿಬಿಡಿಯೂ ಗಲಾಟೆಯೂ ವರ್ಧಿಸುತ್ತಿದೆ. ಒಂದು ಸಣ್ಣ ಹುಸಿನಗು.... ಒಂದು ದೇಶಾವರದ ನಗು.

"ಅಪ್ಪಾ, ನಾನೇನು ತಪ್ಪು ಮಾಡಿದೆ?" ನಾಟಕದಲ್ಲಿ ಮಗಳು ಕೇಳಿದಳು.

"ಪ್ರೇಮ! ಪ್ರೇಮ! ಇದೊಂದೂ ಇಲ್ಲಿ ನಡೆಯುವುದಿಲ್ಲ."

ತಂದೆ ಇರಬೇಕು.

ಅಲ್ಲೂ ಪ್ರೇಮವೇ ಸಮಸ್ಯೆಯಾಗಿರಬಹುದು. ಲೋಕದಲ್ಲಿ ಇವಲ್ಲದೆ ಏನೂ ಇಲ್ಲವೇ?

ಆ ನಾಟಕವು ಒಂದು ಟ್ರ್ಯಾಜಿಡಿಯೋ? ಕಾಮಿಡಿಯೋ?

ಅದೇನೇ ಆಗಲಿ ತನ್ನ ಜೀವನವು ಒಂದು ದುರಂತ ನಾಟಕವಾಗಲಿದೆ. ಅದೊಂದು ಸತ್ಯವಾದ ವಿಷಯ. ಆ ಸತ್ಯವೇ ಈಗ ನಮ್ಮ ಮುಂದಿರುವುದು. ಗಾಢ ಕೆಂಪು ಬಣ್ಣದಲ್ಲಿನ ಒಂದು ಗುಲಾಬಿ ಹೂವಿನ ದಳಗಳನ್ನು ಚಿವುಟಿ ಹಾಕುತ್ತಿದ್ದ ನಟಿಯೂ, ಎತ್ತರದ ಹಿಮ್ಮಡಿಯಿದ್ದ ಚಪ್ಪಲಿಯನ್ನೆ ಹಾಕಿಕೊಂಡಿದ್ದ ಬಳುಕುತ್ತಾ ನಡೆಯುತ್ತಿದ್ದ ನರ್ತಕಿಯೂ—ಪ್ರತಿಯೊಂದೂ ತನಗೆ ಇನ್ನು ಮೇಲೆ ದೂರವೇ.

ಈಗ ಭಾಮ ಏನು ಮಾಡುತ್ತಿರಬಹುದು?

ಕಬ್ಬಿಣದ ಪೆಟ್ಟಿಗೆಯಿಂದ ತಾನು ಕಳುಹಿಸಿದ ಪ್ರೇಮ ಲೇಖನಗಳ ಕಟ್ಟನ್ನೂ ಹೊರಕ್ಕೆ ತೆಗೆದು ಪೇರಿಸಿಟ್ಟು ಬೆಂಕಿ ಹಚ್ಚಿ ಸುಡುತ್ತಿರಬೇಕು ಅಥವಾ ಕೋಣೆಯಲ್ಲಿ ಕಟ್ಟುಹಾಕಿಸಿ ನೇತು ಹಾಕಿದ್ದ ತನ್ನ ಫೋಟೋವನ್ನು ಒಡೆದು ಚೂರು ಚೂರು ಮಾಡುತ್ತಿರಬೇಕು. ಅವಳು ಒಮ್ಮೆ ಹೇಳಿದ್ದಳು.

"ಓಹ್, ಒಬ್ಬ ಕಲಾವಿದನು ಬಂದಿದ್ದಾನೆ."

ಅವನು ಮತ್ತೆಯೂ ಆರಾಮ ಸೋಪಾನದ ಮುಂದೆ ಕುಳಿತನು. ಮಿತ್ರರನ್ನೂ ಆರಾಧಕರನ್ನೂ ನೆನೆಸಿಕೊಂಡನು.

ಆರಾಧಕರನ್ನು ಅವನು ನೆನೆಸಿಕೊಂಡಾಗ ಹೃದಯದಲ್ಲಿ ಸಂಗೀತವು ಏಳುತ್ತಿತ್ತು. ನಿಶ್ಶಬ್ದವಾದ ಪ್ರೇಮ ತುಂಬಿದ ಕೊಡದೊಂದಿಗೆ ನಿಂತವರೂ ಇದ್ದಾರೆ. ಆ ಗುಂಪಿನಲ್ಲಿ ತಲೆಯಲ್ಲಿ ಸೇವಂತಿಕೆ ಹೂಗಳು, ತುಟಿಗಳಲ್ಲಿ ಮಂದಹಾಸ ಇದ್ದವರೂ ಉಂಟು. ಬಿದಿರಿನ ಬಾಗಿಲನ್ನು ಹಿಡಿದು ನಿಲ್ಲುವ ಪದ್ಮ, ಫಾತಿಮಾ, ದೇವಿ ಆಮೇಲೆ ಅವಳು ಆ ಹಳ್ಳಿಯ ಹುಡುಗಿ. ಅವಳ ಹೆಸರೇನು? ಪಾರುಕುಟ್ಟಿ. ಅವಳ ಬಗ್ಗೆಯೂ ಒಂದು ಕಥೆ ಬರೆಯಬಹುದು; ಒಂದು ಒಳ್ಳೆಯ ಮಾಡಲ್ ಕಥೆ.

ಇಂದು ಅವನನ್ನು ಆರಾಧಿಸುವವರಿಲ್ಲ. ಜೀವನವು ವರ್ಣರಂಜಿತವಲ್ಲ. ರೆಕ್ಕೆಗಳೂ ಒಡೆದು, ನಿರೀಕ್ಷೆಗಳೂ, ನೋವನ್ನುಂಟು ಮಾಡುವ ನೆನಪುಗಳೂ ಬಾಕಿಯಾಗಿವೆ.

"ಲೋಕವೇ ನಾನು ವಿದಾಯ ಹೇಳುತ್ತೇನೆ." ಅವನು ಮೆಲ್ಲನೆ ಗುಂಯ್‌ಗುಟ್ಟಿದನು.

"ನಾಟಕವಾಡಲು ಬರುವ ನಟಿಗಳೇ
ನಾಳೆ................................."

ಅಯ್ಯೋ, ಮುಂದಕ್ಕೆ ಬರೆಯಲಾಗುತ್ತಿಲ್ಲ. ಅದನ್ನು ಪೂರ್ಣಗೊಳಿಸಲಾಗುವುದೇ? ಏತಕ್ಕೆ? ತನ್ನ ಕಲಾಸೃಷ್ಟಿಗಳ ಮೂಲಕ ಎಲ್ಲವನ್ನೂ ಹೇಳಿ ಮುಗಿಸಿದ್ದಾಗಿತ್ತು.

ಇನ್ನೇನೇನು ಕಾರಣಗಳನ್ನು ಬರೆಯುವುದು! ಸದ್ಯಕ್ಕೆ ಇದು ಸಾಕು. ಅದರ ಕೆಳಗೆ ಅವನು ಹೀಗೆ ಬರೆದನು.

"ನನ್ನ ಮರಣಕ್ಕೆ ಎಲ್ಲರೂ ಜವಾಬ್ದಾರರೇ. ಎಲ್ಲರೂ."

ಅನಂತರ ಅವನು ತನ್ನ ಹೆಸರು ಬರೆದು ರುಜು ಹಾಕಿದನು. ಇನ್ನು ಹೊರಡೋಣ. ಆತ್ಮಹತ್ಯೆ ಹೇಗೆ ಮಾಡಿಕೊಳ್ಳಬೇಕು ಎಂಬುದರ ಬಗ್ಗೆ ಆಲೋಚಿಸಿಲ್ಲ. ಅದು ಒಂದು ಬಹು ಹೊಸದಾದ ಸಾಂಕೇತಿಕ ರೀತಿಯಲ್ಲಾಗಿರಬೇಕು. ಅದಕ್ಕೆ ಬಹು ಸೂಕ್ತವೆನಿಸಿದ ಸಂಪ್ರದಾಯಗಳು ಇವೆ. ಅನೇಕವನ್ನು ವಿಜ್ಞಾನವು ಒದಗಿಸಿದೆ. ತನಗಿಂತ ಮುಂಚೆ ಆತ್ಮಹತ್ಯೆ ಮಾಡಿಕೊಂಡ ವೀರಾತ್ಮಗಳು, ಚರಿತ್ರೆಗಳು ತನ್ನ ಮುಂದಿವೆ. ಅವನು ಮಯಾಕೋವಸ್ಕಿಯನ್ನು ನೆನೆಸಿಕೊಂಡನು. ಸ್ಟೀಫನ್ ಸ್ವೈಗನ್ ಅನ್ನೂ ನೆನೆಸಿಕೊಂಡನು. ಅವರ್‍ಯಾರೂ ಕಂಡು ಹಿಡಿಯದಿರುವಂತಹ ಒಂದು ಹೊಸ ಮಾರ್ಗವಾಗಿರಲಿ, ಬಾಳಿನಲ್ಲಿ ಪರಾಜಯ ಹೊಂದಿದ ಕಡೆ ಮರಣವು ವಿಜಯವನ್ನು ಪಡೆದಿದೆ.

ಅವನು ಮೆಲ್ಲನೆ ಮಹಡಿಯಿಂದಿಳಿದನು. ಕೆಳಗಿನ ಅಂಗಳಕ್ಕೆ ಬಂದನು. ಮಕ್ಕಳು ಅಂಗಳದಲ್ಲಿ ಆಟವಾಡುತ್ತಿದ್ದಾರೆ. ಹಾಲ್‌ನಲ್ಲಿ ನಾಟಕವಿದೆ. ರೈಲ್ವೆ ಯಾರ್ಡ್‌ನಲ್ಲಿ ಎಂಜಿನ್‌ಗಳು ವಿಸಿಲ್ ಹಾಕುತ್ತಿವೆ.

ಸಿದ್ಧನ್‌ನ ನಗು ಕೇಳಿಸಿತು.

ಕಲಾವಿದನೂ ನಕ್ಕನು.

ಸಿದ್ಧನ್ ಒಂದು ಪುಟ್ಟ ಮಗುವಾಗಿದ್ದನು. ಸಿದ್ಧನ್ ತನ್ನ ತಾಯಿ ಮತ್ತು ಅಣ್ಣನೊಂದಿಗೆ ಆ ಮನೆಯ ಮತ್ತೊಂದು ಭಾಗದಲ್ಲಿ ವಾಸಿಸುತ್ತಿದ್ದನು. ಸಿದ್ಧನ್‌ನ ಕಣ್ಣುಗಳಲ್ಲಿ ಯಾವಾಗಲೂ ಒಂದು ವಿಷಾದದ ಛಾಯೆ ಇರುತ್ತಿತ್ತು.

"ಸಿದ್ಧೂ, ನೀನೇಕೆ ಆಟ ಆಡಲು ಹೋಗುವುದಿಲ್ಲ?"

"ನಾನು ಆಟವಾಡಲು ಹೋಗುವುದಿಲ್ಲ."

"ಯಾಕೆ?"

"ಆಟವಾಡುವಾಗ ನಾನು ಬಿದ್ದು ಬಿಡುತ್ತೇನೆ."

ಸಿದ್ಧನ್ ಮೆಲ್ಲನೆ ದಿಣ್ಣೆಯಿಂದ ಕೆಳಗಿಳಿದನು. ಅವನ ಬಳಿ ಬಂದನು.

"ಏನು ಸಿದ್ಧಾ ?"

"ಒಂದು ದೋಣಿ ಮಾಡಿಕೊಡ್ತೀರಾ ?"

ಓಹ್, ಅವನು ಯಾವಾಗಲೂ ಮಾಡಿಕೊಡುತ್ತಿದ್ದ ಕೆಲಸವಾಗಿತ್ತದು. ಅವನು ಆತ್ಮಹತ್ಯೆಯ ಗಡಿಬಿಡಿಯಲ್ಲಿ ಅದನ್ನು ಮರೆತೇಬಿಟ್ಟಿದ್ದನು.

ದಿನವೂ ಸಿದ್ಧನ್ ಅಲ್ಲಿ ಕಾದಿರುತ್ತಿದ್ದನು. ಕಲಾವಿದನು ಮಹಡಿಯನ್ನಿಳಿದು ಬಂದೊಡನೆ ಒಂದು ದೋಣಿಯನ್ನು ಮಾಡಿಕೊಡೆಂದು ಕೇಳಿಕೊಳ್ಳುವನು. ಅವನು ಬಿಳಿಯ ಕಾಗದ ಒಂದರಲ್ಲಿ ಒಂದು ಪುಟ್ಟ ದೋಣಿಯನ್ನು ಮಾಡಿಕೊಡುವನು. ಸಿದ್ಧನ್ ಅರಳಿದ ಕಣ್ಣುಗಳಿಂದ ಅವನ್ನು ನೋಡುತ್ತಾ ನಿಂತುಬಿಡುತ್ತಿದ್ದನು.

ಒಂದೊಂದು ಸಲ ಅವನು ಬಹಳ ಅವಸರದಿಂದ ಹೋಗುತ್ತಿರುವಾಗಲೂ ಸಿದ್ಧನ್ ದೋಣಿಯ ವಿಷಯವನ್ನು ಜ್ಞಾಪಿಸುವನು.

"ನೆನ್ನೆ ಮಾಡಿಕೊಟ್ಟ ದೋಣಿಯನ್ನು ತೆಗೆದುಕೊಂಡು ಆಡಬಾರದೆ?" ಎಂದವನು ಹೇಳಿದರೂ ಸಿದ್ಧನ್ ಒಪ್ಪಿಕೊಳ್ಳುತ್ತಿರಲಿಲ್ಲ.

ಕಾಗದದ ದೋಣಿಗಳನ್ನಿಟ್ಟುಕೊಂಡು ಸಿದ್ಧನ್ ಆಟವಾಡುವುದನ್ನು ಕಲಾವಿದನು ಎಂದೂ ನೋಡೇ ಇರಲಿಲ್ಲ. ಒಮ್ಮೆ ಸಿದ್ಧನ್ ಒಂದು ದೊಡ್ಡ ಬಿಸ್ಕೆಟ್ ಟಿನ್ ತೆಗೆದುಕೊಂಡು ಬಂದು ಕಲಾವಿದನಿಗೆ ತೋರಿಸಿದನು. ಅದರ ತುಂಬ ಕಾಗದದ ದೋಣಿಗಳಿದ್ದವು.

"ಇವೆಲ್ಲಾ ಯಾಕೆ ?"

"ಆಟವಾಡಲು"

"ಯಾವಾಗ ?"

ಸಿದ್ಧನ್ ಕಾಗದದ ದೋಣಿಗಳನ್ನೆಲ್ಲ ಭದ್ರವಾಗಿ ಬಚ್ಚಿಟ್ಟಿದ್ದನೇ ವಿನಾ ಆಟವಾಡುತ್ತಿರಲಿಲ್ಲ.

ಕಲಾವಿದನು ತನ್ನ ಮಹಡಿಯ ಮೇಲಿದ್ದ ಕೊಠಡಿಗೆ ಹೋಗಿ ಒಂದು ಕಾಗದವನ್ನು ತಂದು ದೋಣಿ ಮಾಡತೊಡಗಿದನು.

ಸಿದ್ಧನ್‌ನನ್ನು ಕಂಡರೆ ಕಲಾವಿದನಿಗೆ ಬಲು ಇಷ್ಟವಿತ್ತು. ಅದೇ ಸಮಯದಲ್ಲಿ ಕಾಗದದ ದೋಣಿಗಳೊಂದಿಗೆ ದ್ವೇಷವೂ ಅವನಿಗಿರಲಿಲ್ಲ.

ಆದರೆ, ನಾಳೆ....?

ನಾಳೆಯೂ ಸಿದ್ಧನು ವರಾಂಡದಲ್ಲಿ ಬಂದು ಕಾದು ನಿಲ್ಲುತ್ತಾನೆ. ಆದರೆ ಎಷ್ಟು ಹೊತ್ತಾದರೂ ತಾನು ಕಾಣಸಿಗುವುದಿಲ್ಲ. ಕಾಗದದ ದೋಣಿಗಳನ್ನು ಮಾಡಿಕೊಡಲು ತಾನಿರುವುದಿಲ್ಲ. ತಾನು ಎಂದೆಂದಿಗೂ ಇನ್ನು ಇರುವುದೇ ಇಲ್ಲ.

ಆ ಮಾತನ್ನು ನೆನೆಸಿಕೊಂಡಾಗ ಅವನ ಕರುಳು ಚುರಕ್ಕೆಂದಿತು. ಇದ್ಯಾವ ತಿಂಗಳು? ಮಾರ್ಚ್. ಏಪ್ರಿಲ್, ಮೇ—ಈ ಎರಡು ತಿಂಗಳುಗಳು ಕಳೆದರೆ ಮಳೆ ಆರಂಭವಾಗುತ್ತದೆ. ಬಲು ಜೋರಾಗಿ ಸುರಿಯುವ ಮಳೆ ಚಾವಣಿಯಿಂದ ನೀರು ಜೋರಾಗಿ ಹರಿದು ಬರುತ್ತದೆ. ಅಂಗಳದಲ್ಲೆಲ್ಲ ನೀರು ನಿಂತಿರುತ್ತದೆ. ಹೊರ ಹೊಸ್ತಿಲ ಬಳಿ ಪುಟ್ಟ ಪುಟ್ಟ ಪ್ರವಾಹಗಳು. ಅಲ್ಲಲ್ಲೇ ಧಾರಾಳವಾಗಿ ನೀರು ಕಾಲುವೆಗಳು. ಆಗ ಸಿದ್ಧನ್ ದೊಡ್ಡ ಬಿಸ್ಕೆಟ್ ಟಿನ್ ಹಿಡಿದುಕೊಂಡು ಹೊರ ಬರುತ್ತಾನೆ. ಕಾಗದದ ದೋಣಿಗಳನ್ನು

ಒಂದೊಂದಾಗಿ ಇಳಿಸುವನು. ಹೊಸಿಲುಬಳಿ ಇದ್ದ ಕೆಂಪು ನೀರಿನಲ್ಲಿ ನೀರಿನ ಗುಳ್ಳೆಗಳು ಒಡೆಯುತ್ತಿರುತ್ತವೆ. ಸಿದ್ಧನ್ ಕೈ ತಟ್ಟಿ ನಗುತ್ತಾನೆ. ಅದನ್ನು ನೋಡಲು, ಓ ದೇವರೇ ಅದನ್ನು ನೋಡಲು....ತಾನಿರುವುದಿಲ್ಲ. ತಾನೇ ನಿರ್ಮಿಸಿದ ಕಾಗದದ ದೋಣಿಗಳನ್ನು ನೋಡಲು ತಾನೇ ಇರುವುದಿಲ್ಲ.... ತಾನೇ....

"ಹುಂ ಬೇಗ ಮಾಡಿಕೊಡಿ"
ಸಿದ್ಧನ್ ಅವಸರ ಮಾಡಿದನು.

ಅವನು ಒಂದು ದೋಣಿಯನ್ನು ಮಾಡಿ ಸಿದ್ಧನ್‌ನ ಕೈಯಲ್ಲಿರಿಸಿದನು. ಆ ಹುಡುಗನು ಅದನ್ನು ತೆಗೆದುಕೊಂಡು ಒಳಕ್ಕೋಡಿದನು. ಆ ದೊಡ್ಡ ಬಿಸ್ಕೆಟ್ ಟಿನ್‌ನಲ್ಲಿ ಇನ್ನೂ ಒಂದು ಕಾಗದದ ದೋಣಿ.

ಕಲಾವಿದನು ದಿಕ್ಕು ತೋಚದೆ ನಿಂತನು. ಎಲ್ಲಿಗೆ ಹೋಗುವುದು?

ಈಗ ಅವನಿಗೆ ಎಲ್ಲಾ ಮರೆಯಲು ಸಾಧ್ಯವಾಗಿತ್ತು. ಅವನ ಕಣ್ಣ ಮುಂದಿದ್ದ ಎಲ್ಲ ವಸ್ತುಗಳೂ, ಮನುಷ್ಯರೂ, ಮಾಯವಾಗಿದ್ದರು. ಆದರೆ ಕಾಗದದ ದೋಣಿಗಳು? ಅವು ಮಾತ್ರ ಹಾಗೇ ಇದ್ದವು.

ಬಹು ಹೊತ್ತಿನ ನಂತರ ಅವನು ಒಂದು ದೃಢವಾದ ತೀರ್ಮಾನವನ್ನು ತೆಗೆದುಕೊಂಡನು. ಅನಂತರ ನೆಟ್ಟಗೆ ಮಹಡಿ ಹತ್ತಿ ಮೇಲಕ್ಕೆ ಬಂದನು.

ಆರಾಮಸೋಪಾನದ ಮೇಲೆ ಹರಡಿದ್ದ ಬಿಳಿಯ ಕಾಗದದ ಮೇಲೆ ಕೆಳಗೆ ಹೀಗೆ ಬರೆದನು.

'ನಾನು ಆತ್ಮಹತ್ಯೆಯನ್ನು ಮುಂದೂಡಿದ್ದೇನೆ. ಒಂದು ಅನಿಶ್ಚಿತ ದಿವಸಕ್ಕೆ ಮುಂದೂಡಿದ್ದೇನೆ.'

ಹಾಗೆ ಬರೆದಿಟ್ಟ ನಂತರ ಅವನು ವರಾಂಡದಲ್ಲಿ ಅತ್ತಿಂದಿತ್ತ ನಡೆದಾಡಿದನು.

"ನಾಟಕದಲ್ಲಿ ನಟಿಸಲು ಬರುವ ನಟಿಯರೆ
ನಾಳೆಯೂ ನೀವೇ ವೇದಿಕೆಗೆ ಬರಲೇಬೇಕು"

ಅವನು ಮೆಲ್ಲನೆ ಅಸ್ಪಷ್ಟವಾಗಿ ಹಾಡಿದನು.

ಈಗ ಟ್ರೈನ್‌ನ ಎಂಜಿನ್‌ಗಳ ಗಲಾಟೆ ಇಲ್ಲ. ವಾತಾವರಣವು ತಿಳಿಯಾಗಿದೆ, ಶಾಂತವಾಗಿದೆ. ಅವನಿಗೆ ಮುಗುಳ್ನಗೆ ಬೀರಬೇಕೆನ್ನಿಸಿತು.

ಮನುಷ್ಯನ ಜೀವಿತಕ್ಕೂ ರಾಷ್ಟ್ರದ ಜೀವಿತಕ್ಕೂ ಸ್ವಾಮ್ಯವಿದೆ. ಮನುಷ್ಯನು ತನ್ನ ಆತ್ಮರಕ್ಷಣೆಗೆ ಇತರರ ಪ್ರಾಣ ತೆಗೆಯುವಂತೆಯೇ ರಾಷ್ಟ್ರಗಳು ತಮ್ಮ ಉಳುವಿಗಾಗಿ ಇತರ ದೇಶಗಳೊಂದಿಗೆ ಯುದ್ಧ ಮಾಡುತ್ತವೆ.

—ಮಾಂಟೆಸ್ಕ್ಯೂ

'ಚಿತ್ರಕಲಾ ಪ್ರವೀಣ' ಡಾ|| ವೈ. ಸುಬ್ರಮಣ್ಯರಾಜು

ಮಾ. ವೆಂಕಟೇಶ್

ಆ ಕಾಲದಲ್ಲಿ ತಪಸ್ಸಿಗೆ ಉನ್ನತ ಸ್ಥಾನವಿತ್ತು. ಅದು ಯಾವುದೇ ಪ್ರವೃತ್ತಿ ಇರಬಹುದು ಅದರಲ್ಲಿ ತಪಸ್ಸಿನ ಸಿದ್ಧಿಯನ್ನು ಗುರುತಿಸಬಹುದಿತ್ತು. ಅದು ರಾಜರಿಗೆ ಎಷ್ಟೋ, ಕಲಾವಿದರಿಗೂ ಅಷ್ಟೇ ಸಮಂಜಸ. ಎಂತಲೇ ನಮ್ಮ ಪ್ರಾಚೀನ ಪರಂಪರೆಗಳ ಬಗ್ಗೆ ಗೌರವವಿಟ್ಟಿದ್ದ ಜನತೆ, ಇವರುಗಳನ್ನು ಗೌರವಿಸುವಂತಾಯಿತು. ಇಂತಹ ಮಹನೀಯರು ಬಿಟ್ಟು ಹೋಗಿರುವ ಸಂಪತ್ತು ಇಂದಿಗೂ ದೇಶ ವಿದೇಶಗಳಲ್ಲಿ ಸ್ಮಾರಕಗಳಾಗಿವೆ.

ಕಲಾ ತಪಸ್ವಿ ಡಾ|| ವೈ. ಸುಬ್ರಮಣ್ಯ ರಾಜು ಅವರೂ ಸಹ ಅಂತಹ ಮಹನೀಯರ ಸಾಲಿಗೆ ಸೇರಿದವರಾಗಿದ್ದಾರೆ. ತಮ್ಮ ಸಿದ್ಧಿ ಸಾಧನೆಯಿಂದ ಚಿತ್ರಕಲಾಕ್ಷೇತ್ರಕ್ಕೆ ನೀಡಿರುವ ಅವರ ಕೊಡುಗೆ ಮರೆಯಲಾಗದು.

ವಿಶ್ವವಿಖ್ಯಾತ ಮೈಸೂರು ಅರಮನೆಯ ಪ್ರಾಂಗಣದ ಅಲಂಕಾರಿಕ ಪ್ಯಾನಲ್ ನಿರ್ಮಾಣದಲ್ಲಿ ಬಿಡಿಸಿರುವ ಚಿತ್ರಗಳಲ್ಲಿ, ನೇಪತ್ ಆನೆ, ಮೈಸೂರಿನ ಮೂರನೇ ಪಡೆ, ಪಟ್ಟದ ಆನೆ, ಕುದುರೆ ಮತ್ತು ಪಲ್ಲಕ್ಕಿ, ಶ್ರೀರಾಮ ಚಾಮುಂಡೇಶ್ವರಿಯ ಮುಂದೆ ಆಯುಧ ಪೂಜೆ ಮಾಡುತ್ತಿರುವುದು, ಹಿಂಬದಿಯ ಪಹರೆಯ ಕುದುರೆ, ಆನೆಗಾಡಿ, ಒಂಬತ್ತು ಆಸನದ ವಾಹನ ಮತ್ತು ತುತುರ್ ವಾಹನ ಈ ಅಪೂರ್ವ ಕಲಾಕೃತಿಗಳು ಸುಬ್ರಮಣ್ಯರಾಜುರವರ ರಚನಾ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಅರಮನೆಯಲ್ಲಿ ಅಲ್ಲದೆ ದೇಶವಿದೇಶ ಹಾಗೂ ರಾಷ್ಟ್ರಪತಿ ಭವನದಲ್ಲಿ ಅವರು ಬಿಡಿಸಿರುವ ವರ್ಣಚಿತ್ರಗಳು ಕಂಗೊಳಿಸುತ್ತಿರುವುದು ಅವರ ಕಲಾವಂತಿಕೆಗೆ ಜೀವಂತ ಸಾಕ್ಷಿಯಾಗಿದೆ.

ಚಿತ್ರಕಲಾಗಾರಿಕೆಯ ನೈಪುಣ್ಯತೆಯನ್ನು ಗಳಿಸುವುದು ಅಷ್ಟು ಸುಲಭದ ಮಾತೇನಲ್ಲ. ಶ್ರದ್ಧೆ ಬೇಕು, ಪರಿಶ್ರಮಬೇಕು ಹಾಗೂ ಅರ್ಪಣಮನೋಭಾವ ಇರಲೇ ಬೇಕು. ಆಗ ಅದರ ಸಿದ್ಧಿ ಫಲಿಸುತ್ತದೆ.

೧೯೦೭ರಲ್ಲಿ ಸುಬ್ರಮಣ್ಯರಾಜು ಮೈಸೂರಿನಲ್ಲಿ ಜನಿಸಿದರು. ಇವರ ತಾತ ಸುಂದರಯ್ಯನವರು ಅರಮನೆಯಲ್ಲಿ ಕಲಾವಿದರಾಗಿದ್ದರು. ತಂದೆ ಯಲ್ಲಪ್ಪನವರು ಅರಮನೆಯ ಡ್ರಾಫ್ಟ್ಸ್‌ಮನ್ ಆಗಿದ್ದರು. ತಾಯಿ ಕೃಷ್ಣಮ್ಮನವರು ಸಹ ಮೂರ್ತಿ ನಿರ್ಮಾಣದ ಕಲೆಯಲ್ಲಿ ನಿಷ್ಣಾತೆ. ಇಂತಹ ಕಲಾಭಿರುಚಿಯ ಕುಟುಂಬದಲ್ಲಿ ಜನಿಸಿದ ಸುಬ್ರಮಣ್ಯನಿಗೆ ಬಾಲ್ಯದಲ್ಲಿಯೇ ಕಲಾಸಕ್ತಿ ಮೂಡಿದ್ದು ಸಹಜವಾಗಿತ್ತು.

ಲೋಯರ್ ಸೆಕೆಂಡರಿವರೆಗೆ ಮಾತ್ರ ವಿದ್ಯಾಭ್ಯಾಸ ಮಾಡಿದ ಸುಬ್ರಹ್ಮಣ್ಯ ಶಾಲೆಗೆ ಶರಣು ಹೊಡೆದು ಕಲಾಭ್ಯಾಸದ ಸಲುವಾಗಿ ಚಾಮರಾಜೇಂದ್ರ ಕಲಾಶಾಲೆಗೆ ಅಲ್ಪ ಅವಧಿಯ ವಿದ್ಯಾರ್ಥಿಯಾಗಿ ಸೇರಿದನು. ಅರಮನೆಯಿಂದ ಪಡೆದ ವಿದ್ಯಾರ್ಥಿವೇತನ ಚಾಮರಾಜೇಂದ್ರ ಕಲಾಶಾಲೆಯ ಉತ್ತೇಜನದಿಂದ ಮದರಾಸು ಸರ್ಕಾರಿ ಕಲಾಶಾಲೆ ಸೇರಿ ಸತತ ಪರಿಶ್ರಮದಿಂದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಡಿಪ್ಲೋಮಾ ಪಡೆದು ಬಂದರು.

ಇವರ ಕಲಾ ಚಾತುರ್ಯಕ್ಕೆ ಮೆಚ್ಚಿದ ಚಾಮರಾಜೇಂದ್ರ ಕಲಾಶಾಲೆಯ ಮುಖ್ಯಾಧಿಕಾರಿಯಾಗಿದ್ದ ಎಚ್. ಜಿ. ಆಲ್ಡರಟನ್ ಡೆಕೋರೇಟಿವ್ ಆರ್ಟ್ ಉಪಾಧ್ಯಾಯರಾಗಿ ಅವರನ್ನು ತಮ್ಮ ಶಾಲೆಗೆ ತೆಗೆದುಕೊಂಡರು. ಒಂದೆರೆಡು ವರ್ಷಗಳ ನಂತರ ಕೆಲಸ ಮಾಡಿದ ಮೇಲೆ ಹೆಚ್ಚಿನ ಪರಿಣತಿಗಾಗಿ ಸುಬ್ರಹ್ಮಣ್ಯರು ಮುಂಬಯಿನ ಸರ್. ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಕಲಾಶಾಲೆಗೆ ತೆರಳಿದರು.

ಮುಂಬಯಿನಲ್ಲಿ ಚಿತ್ರಕಲೆ ಮತ್ತು ಡ್ರಾಯಿಂಗ್‌ನಲ್ಲಿ ಉತ್ತಮ ಮಟ್ಟದಲ್ಲಿ ತೇರ್ಗಡೆಯಾಗಿ ೧೯೩೦ರಲ್ಲಿ ಡಿಪ್ಲೋಮಾ ಪಡೆದರು. ಅದೇ ಸುಮಾರಿಗೆ ಬರೋಡಾ ಅರಮನೆಯ ಮೇಲ್ಛಾವಣಿಯ ಅಲಂಕರಣ ಜವಾಬುದಾರಿಯನ್ನು ನಿರ್ವಹಿಸಿದ ಜೆ. ಜೆ. ಸ್ಕೂಲ್‌ನ ವಿದ್ಯಾರ್ಥಿಗಳ ಸಮೂಹದಲ್ಲಿ ಸುಬ್ರಹ್ಮಣ್ಯರು ಸೇರಿದ್ದರು. ಅದರ ನಮೂನೆ ಗಳನ್ನು ತಯಾರಿಸಿ, ಅವುಗಳಂತೆ ಚಿತ್ರ ಬಿಡಿಸಿ ಅದಕ್ಕೆ ಮೆರುಗು ಕೊಟ್ಟವರಲ್ಲಿ ಇವರೂ ಇದ್ದರು. ಮುಂದೆ ಆ ಮಾದರಿಗಳು 'ಭಾರತೀಯ ಕಲೆಗಳ ಪ್ರತೀಕ' ಎಂಬ ಶೀರ್ಷಿಕೆಯಲ್ಲಿ ಲಂಡನ್‌ನಲ್ಲಿ ಪ್ರದರ್ಶಿಸಲ್ಪಟ್ಟು ಬಹು ಜನರ ಮೆಚ್ಚುಗೆಯನ್ನು ಗಳಿಸಿದವು.

ವ್ಯಾಸಂಗ ಮುಗಿಸಿ ನುರಿತ ಕಲಾವಿದರಾಗಿ ಸುಬ್ರಹ್ಮಣ್ಯರಾಜು ಅವರು ಹಿಂದುರುಗಿದ ನಂತರವೇ ವಿವಾಹವಾಯಿತು. ಇವರ ಕೈ ಹಿಡಿದ ಸತಿ ಶಾರದ ಅವರು, ತಮ್ಮ ಪತಿಯ ಕಲಾಜೀವನದ ಶಕ್ತಿಯಾಗಿದ್ದು ಸಹಕರಿಸಿದರು. ಇದು ಸಹ ಅವರ ಕಲಾ ಬದುಕಿನ ಶ್ರೇಯಸ್ಸಿಗೆ ಕಾರಣವಾಗಿದೆ.

ಈ ಕಲೆಯು ಗೀಳು ಸುಬ್ರಹ್ಮಣ್ಯರಾಜು ಅವರ ವಂಶದ ಪರಂಪರೆ. ಸೋಮವಂಶ ಆರ್ಯಕ್ಷತ್ರಿಯ ವಂಶಕ್ಕೆ ಸೇರಿದ ಇವರ ಮನೆತನದ ಹೆಸರು 'ರಾಜು' ಎಂದು. ತಲೆಮಾರುಗಳಿಂದ ಚಿತ್ರಗಾರಿಕೆಯ ಜೀವನ ಸಾಗಿಸಿದ ಇವರ ಹಿರಿಯರು ಮೈಸೂರಿಗೆ ಬಂದು ನೆಲಸಿ ತಮ್ಮ ಪಳಗಿದ ಕೈಯನ್ನು ಚಿತ್ರಕಲೆಗೆ ಮುಡಿಸಿಕೊಂಡರು. ಇತರರು ಚಿನ್ನ, ಬೆಳ್ಳಿ ಕೆಲಸದಲ್ಲಿ ಮುಂದುವರೆದರು. ಮೈಸೂರು ಅರಮನೆಯಲ್ಲಿ ಮತ್ತು ಮಹಾರಾಜರ ಕೃಪೆಯಿಂದ ಸ್ಥಾಪಿತವಾದ ಚಾಮರಾಜ ಕಲಾಶಾಲೆಯಲ್ಲಿ ಕೆಲಸ ಮಾಡಿ ಕೀರ್ತಿ ಗಳಿಸಿದ ಕೇಶವಯ್ಯ, ಗೋಪಾಲಯ್ಯ, ಕೊಂಡಯ್ಯ ಮತ್ತು ಪ್ರಖ್ಯಾತ ಕಲಾವಿದ ಕೆ. ವೆಂಕಟಪ್ಪ ಇವರುಗಳು ಸಹ ಇದೇ ಪಂಗಡಕ್ಕೆ ಸೇರಿದವರು.

ತಾತ ಮತ್ತು ತಂದೆಯ ಅರಮನೆ ನಂಟು ಸುಬ್ರಹ್ಮಣ್ಯರ ಪಾಲಿಗೆ ವರದಾನವಾಗಿ, ಕೃಷ್ಣರಾಜ ಒಡೆಯರು ಮತ್ತು ಚಾಮರಾಜ ಒಡೆಯರ ಆಳ್ವಿಕೆಯ ಕಾಲದಲ್ಲಿ ರಾಜರ ಸಂಪರ್ಕ ಮುಂದುವರೆದು

ತಮ್ಮ ಮತ್ತು ಅರಮನೆಯ ಕಲಾಕೀರ್ತಿ ಬೆಳಗುವಂತೆ ಮಾಡಿತು.

ಚಿತ್ರ ಬರೆಯಲು ತೆಗೆದುಕೊಳ್ಳುವ ವಸ್ತು ವಿಷಯಗಳಲ್ಲಿ ಸುಬ್ರಮಣ್ಯರಾಜು ಅವರು ತುಂಬ ಜಾಣಾಕ್ಷರು. ಭಾರತ ಮತ್ತು ಪಾಶ್ಚಿಮಾತ್ಯ ಕಲೆಗಳೆರಡನ್ನು ಆಳವಾಗಿ ಅಭ್ಯಾಸ ಮಾಡಿದ್ದಾರೆ. ಅವೆರಡರ ಸಮ್ಮಿಳನದಿಂದ ತಮ್ಮದೇ ಆದ ನವೀನ ಮಾರ್ಗದಲ್ಲಿ ಕಲಾಕೃತಿಗಳನ್ನು ರಚಿಸಿದ್ದಾರೆ.

ರಾಜ್ಯ ಹಾಗೂ ರಾಷ್ಟ್ರದ ಅನೇಕ ಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿರುವ ಅವರು, ತಮ್ಮ ಚಿತ್ರಗಳಿಗೆ ಅಪಾರ ಜನ ಮನ್ನಣೆಯನ್ನು ಗಳಿಸಿರುವುದಲ್ಲದೆ, ಅಪಾರ ಸಂಖ್ಯೆಯ ಕಲಾಕೃತಿಗಳನ್ನು ಮಾರಾಟ ಮಾಡಿರುವುದು ದಾಖಲೆಯಾಗಿದೆ.

೧೯೮೩ ರಲ್ಲಿ ದೆಹಲಿಯ ಕುಶಲಕಲಾ ಸಂಗ್ರಹಾಲಯದವರು ಏರ್ಪಡಿಸಿದ್ದ ಶಿಬಿರದಲ್ಲಿ ಕರ್ನಾಟಕದ ಭವ್ಯ ಸಾಂಪ್ರದಾಯಿಕ ಶೈಲಿಯಲ್ಲಿ ಅವರು ರಚಿಸಿದ ಜೆಸ್ಸೊ ಮತ್ತು ಚಿನ್ನದ ರೇಖುಗಳ ಚಿತ್ರಣ ಹಾಗೂ ಜಲವರ್ಣ ಚಿತ್ರಗಳನ್ನು ಅಂದಿನ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ವೀಕ್ಷಿಸಿ ಮೆಚ್ಚುಗೆಯನ್ನು ಸೂಚಿಸಿರುವುದುಂಟು. ೧೯೮೬ರಲ್ಲಿ ಜರುಗಿದ 'ಸಾರ್ಕ್' ಸಮ್ಮೇಳನದ ಸ್ವಾಗತ ಸಮಿತಿಯು ಬೃಹತ್ ಭಿತ್ತಿ ಚಿತ್ರ ಸಹ ಮನ್ನಣೆ ಗಳಿಸಿತು.

ಸುಬ್ರಮಣ್ಯರಾಜುರವರಿಗೆ ಸಂದ ಗೌರವಗಳು, ಸನ್ಮಾನಗಳು ಅಪಾರ. ಇವರಿಗೆ ಮೊದಲು ಸಂದ ಬಹುಮಾನ ವ್ಯಕ್ತಿ ಚಿತ್ರಣಕ್ಕೆ ಯುವರಾಜರ ಬಹುಮಾನ. ೧೯೫೧ ರಲ್ಲಿ ಮೈಸೂರಿನ ದಸರಾ ಮತ್ತು ತಿರುವಾಂಕೂರಿನ ಚಿತ್ರ ತಿರುನಾಳ್ ಪ್ರದರ್ಶನಗಳಲ್ಲಿ ಹಾಗೂ ಬೆಂಗಳೂರಿನ ಕಲಾಮಂದಿರದ ಪ್ರದರ್ಶನದಲ್ಲಿ ಚಿನ್ನದ ಪದಕ. ಹೀಗೆ ಶಿವಪ್ಲಾದ, ಮುಂಬಯಿನ ಮತ್ತು ಮೈಸೂರಿನ ಲಲಿತಕಲಾ ಸಂಘಗಳಲ್ಲಿ ಬಹುಮಾನ. ದಸರಾ ವಸ್ತು ಪ್ರದರ್ಶನದಲ್ಲಂತೂ ಮೇಲಿಂದ ಮೇಲೆ ರಜತ ಮತ್ತು ಚಿನ್ನದ ಪದಕಗಳು ಬರುತ್ತಲೇ ಇದ್ದವು.

ಇವರಿಗೆ ಸಂದಿರುವ ಪ್ರಶಸ್ತಿಗಳೂ ಅಷ್ಟೆ. ೧೯೭೦ ರಲ್ಲಿ ವಿಧಾನಸೌಧದಲ್ಲಿ ಚಿತ್ರಕಲಾ ಪರಿಷತ್ತಿನ ಸನ್ಮಾನದಿಂದ ತೊಡಗಿ, ೧೯೭೩ ರಲ್ಲಿ ರಾಜ್ಯೋತ್ಸವ ಪ್ರಶಸ್ತಿ, ೧೯೭೫ ರಲ್ಲಿ ಸೋಮವಂಶ ಆರ್ಯ ಕ್ಷತ್ರಿಯ ಸಮಾಜದಿಂದ ಸನ್ಮಾನ ಮತ್ತು 'ಚಿತ್ರಕಲಾ ಪ್ರವೀಣ' ಬಿರುದು. ೧೯೭೭ ರಲ್ಲಿ ರಾಜ್ಯ ಲಲಿತಕಲಾ ಅಕಾಡೆಮಿ ಸನ್ಮಾನ. ೧೯೮೪ರಲ್ಲಿ ದೆಹಲಿಯ ಅಯಿಫಾಕ್ಸ್‌ನಿಂದ ಸನ್ಮಾನ, ರಾಜ್ಯ ಲಲಿತಕಲಾ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸರ್ಕಾರದ ಫೆಲೋಷಿಪ್, ೧೯೭೦ ಮತ್ತು ೧೯೮೯ ರಲ್ಲಿ ಚಿತ್ರಕಲಾ ಪ್ರಶಸ್ತಿ, ರಾಷ್ಟ್ರ ಪ್ರಶಸ್ತಿ ಹಾಗೂ ರೋರಿಕ್ ಪ್ರಶಸ್ತಿ ಪಡೆದಿದ್ದಾರೆ.

ಹೆಸರಾಂತ ಕಲಾವಿದರಾದ ಪಿ. ಆರ್. ತಿಪ್ಪೇಸ್ವಾಮಿ, ಮಧುಗಿರಿ ರಾಮು, ಎಂ. ಎಸ್. ಚಂದ್ರಶೇಖರ್, ಎಂ. ಎನ್. ನಂಜುಂಡರಾವ್, ಕಮಲೇಶ್, ರಾಮಚಂದ್ರಪ್ಪ, ಎಂ. ಟಿ. ವಿ. ಆಚಾರ್ಯ ಮುಂತಾದವರು ಇವರ ಶಿಷ್ಯರಾಗಿದ್ದವರು.


ಸುಬ್ರಮಣ್ಯರು ತಮ್ಮ ಇಪ್ಪತ್ತಾರು ವರ್ಷಗಳ ಸರ್ಕಾರಿ ಸೇವೆಯಿಂದ ನಿವೃತ್ತರಾದರೂ ಸಹ ಕಲಾ ಸೇವೆಯಿಂದ ನಿವೃತ್ತರಾಗಲಿಲ್ಲ. ಹಲವು ಕಲಾಶಾಲೆಗಳಲ್ಲಿ ಗೌರವ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಬೋಧನೆ ಮತ್ತು ಚಿತ್ರ ರಚನೆಯಲ್ಲಿ ಸಾಗಿದ ಅವರ ನಿರಂತರ ಬದುಕು ಕಲಾ ಕ್ಷೇತ್ರಕ್ಕೆ ಅಭಿವ್ಯಕ್ತವಾಗಿತ್ತು.

ಅವರದು ದೊಡ್ಡ ಸಂಸಾರ. ಹಾಗೆಯೇ ಸುಖ ಸಂಸಾರವು ಆಗಿತ್ತು. ಸುಗಮ ಜೀವನ ನಡೆಸಿದ ಸುಬ್ರಮಣ್ಯರಾಜುರವರ ಪತ್ನಿ ಶಾರದಮ್ಮ ೧೯೮೯ರಲ್ಲಿ ನಿಧನರಾದರು. ಆ ಅಗಲಿಕೆಯ ನೋವು ತುಂಬಿರುವಾಗಲೇ ೧೯೯೧ರಲ್ಲಿ ಅವರ ಎರಡನೇ ಮಗ ನಾಗೇಂದ್ರರಾಜು ತೀರಿಕೊಂಡರು. ಮಗ ಮತ್ತು ಹೆಂಡತಿಯ ಮರಣ ಸುಬ್ರಮಣ್ಯರ ಮನಸ್ಥೈರ್ಯವನ್ನು ಅಲುಗಾಡಿಸಿತು.

ತಮ್ಮ ನೋವನ್ನು ನುಂಗಿಕೊಂಡು, ವೈರಾಗ್ಯ ಭಾವದಿಂದ ವ್ಯಥೆಯನ್ನು ನೀಗಿಕೊಂಡ ಸುಬ್ರಹ್ಮಣ್ಯರಾಜುರವರ ಮನಸ್ಸಿನ ಸಮಾಧಾನಕ್ಕೆ ಮುಖ್ಯ ಸಾಧನವಾದದ್ದು, ಸಂಗಾತಿಯಾದದ್ದು ಚಿತ್ರಕಲೆಯ ರಚನೆ. ಆ ತಲ್ಲೀನತೆಯು ನೋವನ್ನು ನಿಧಾನವಾಗಿ ನಿವಾರಿಸತೊಡಗಿತು.

'ಚಿತ್ರಕಲಾ ಪ್ರವೀಣ' ವೈ. ಸುಬ್ರಮಣ್ಯರಾಜುರವರು ೧೯೯೫ರ ಸೆಪ್ಟೆಂಬರ್ ೨೪ರಂದು ಬೆಂಗಳೂರಿನಲ್ಲಿ ನಿಧನರಾದರು. ಚಿತ್ರಕಲಾಗಾರಿಕೆಗಾಗಿ ಜೀವನವನ್ನು ಮುಡುಪಾಗಿಟ್ಟು ಬದುಕಿನ ಅಂತ್ಯದವರೆಗೂ ಮುಪ್ಪರಿಯದ ದುಡಿಮೆಯಲ್ಲಿ ಕಲಾಕ್ಷೇತ್ರವನ್ನು ಶ್ರೀಮಂತಗೊಳಿಸಿದ ಅವರ ಸೇವೆ ಅವಿಸ್ಮರಣೀಯ.

ದೇಹ ನಶ್ವರವಾದರೂ, ಸುಬ್ರಮಣ್ಯರಾಜುರವರ ಸಾಧನೆಗಳು ಸೇವೆಗಳು ನಮ್ಮ ಸಮಾಜದ ನಡುವೆ ಜೀವಂತವಾಗಿವೆ.



ದುರ್ಜನರ ಮುಂದೆ ತಲೆಬಾಗಿಸದಿರು. ಕೆಚ್ಚಿನಿಂದ ತಲೆ ಎತ್ತಿ ನಿಲ್ಲು. ಸಜ್ಜನರಿಗೆ ತಲೆಬಾಗಬೇಕು. ಇದೇ ಧೀರತೆ.

—ಪ್ಲೇಟೋ

ಮಿತಸಂತಾನ—ದೇಶದ ಪ್ರಗತಿಗೆ ಸೋಪಾನ

ಜುಲೈ ೧೧—ವಿಶ್ವ ಜನಸಂಖ್ಯಾ ದಿನ.

ಎಸ್. ಆರ್. ಪಾಟೀಲ

ಸೀತಾ ಗಂಡನ ಮನೆಗೆ ಬರುವಾಗ ಅವಳ ಹೆತ್ತವರು ಒಂದು ಮಂಚವನ್ನು ಕೊಟ್ಟು ಕಳಿಸಿದರು. ಸೀತಾ ತನ್ನ ಗಂಡನೊಂದಿಗೆ ಆ ಮಂಚದ ಮೇಲೆ ಹಾಯಾಗಿ ಮಲಗಿಕೊಳ್ಳುತ್ತಿದ್ದಳು. ಮುಂದೆ ಅವರಿಗೊಂದು ಮಗುವಾಯಿತು. ಮಂಚದ ಮೇಲೆ ಅವರ ಮಧ್ಯ ಮಗು ಹಾಯಾಗಿ ಮಲಗುತ್ತಿತ್ತು. ಮುಂದೆ ಇನ್ನೂ ನಾಲ್ಕು ಮಕ್ಕಳಿಗೆ ಸೀತಾ ಜನ್ಮ ನೀಡಿದಳು. ಇವರೆಲ್ಲರೂ ಮಂಚದ ಮೇಲೆ ಮಲಗುವುದಿರಲಿ ಕುಳಿತರೆ ಸಾಕು, ಮಂಚವು ಕಿರ್ರ್‌ಗುಟ್ಟುತ್ತಿತ್ತು. ಮುಂದೆ ಸೀತಾಳ ನಾಲ್ಕೂ ಜನ ಮಕ್ಕಳಿಗೆ ಮದುವೆಯಾಯಿತು. ಅವರೆಲ್ಲರೂ ಮಿತಿಯಿಲ್ಲದೇ ಮಕ್ಕಳನ್ನು ಹೆತ್ತರು. ಅಜ್ಜ-ಅಜ್ಜಿ, ಗಂಡ-ಹೆಂಡತಿ, ಮಕ್ಕಳು-ಮೊಮ್ಮಕ್ಕಳಿಂದ ಮನೆಯಲ್ಲಿ ಗದ್ದಲವೋ ಗದ್ದಲ. ಒಂದು ದಿನ ಎಲ್ಲರೂ ಮಂಚಕ್ಕಾಗಿ ಜಗಳವಾಡಿ ಎಲ್ಲರೂ ಮಂಚದ ಮೇಲೇರಿ ಕುಳಿತರು. ಮಂಚವು ಅವರ ಭಾರ ತಾಳಲಾರದೇ ಮುರಿದು ಬಿತ್ತು. ಬಿದ್ದ ರಭಸದಲ್ಲಿ ಕೆಲವರಿಗೆ ಗಾಯಗಳೂ ಆದವು....

ಇಂದು ನಮ್ಮನ್ನು ಪೊರೆಯುವ ಭೂಮಿಯ ಅವಸ್ಥೆಯೂ ಇದೇ ಆಗಿದೆ. ಮಿತಿಯಿಲ್ಲದೇ ಹೆಚ್ಚುತ್ತಿರುವ ಜನಸಂಖ್ಯಾ ಭಾರವನ್ನು ನಮ್ಮ ಭೂಮಿ ಹೊರಲಾಗದೇ ತತ್ತರಿಸುತ್ತಲಿದೆ. ಜನಸಂಖ್ಯೆ ಬೇಕಾಬಿಟ್ಟಿಯಾಗಿ ಹೆಚ್ಚುತ್ತಿರುವ ಹಾಗೂ ಆಹಾರೋತ್ಪಾದನೆ ಗಣನೀಯವಾಗಿ ಇಳಿಮುಖವಾಗುತ್ತಿರುವ ಬಗೆಗೆ ೨೦೦ ವರ್ಷಗಳ ಹಿಂದೆಯೇ ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದರು. ಆದರೆ ಆಧುನಿಕ ನಾಗರೀಕತೆಯ ನಾಗಾಲೋಟಕ್ಕಿಳಿದಿದ್ದ ಮಾನವ ಅತ್ತ ಕಡೆ ಗಮನ ಹರಿಸಲಿಲ್ಲ. ೧೯೭೧ ರಲ್ಲಿ ಮೆಕ್ಸಿಕೋ ನಗರದಲ್ಲಿ ಪ್ರಪಂಚದ ಗಣ್ಯ ವಿಜ್ಞಾನಿಗಳ ತಂಡ ಸಭೆ ಸೇರಿ, ಸಮಾಲೋಚನೆ ನಡೆಸಿ, ಜಗತ್ತಿನ ಜನನ ಮರಣಗಳ ಸಮೀಕ್ಷೆ ಮತ್ತು ಪ್ರಸಕ್ತ ಆಹಾರ ಉತ್ಪಾದನೆ ಇವುಗಳನ್ನು ತಾಳೆ ಮಾಡಿ ಹೀಗೆ ಹೇಳಿತು—"ಇನ್ನು ಕೇವಲ ಮೂರು-ನಾಲ್ಕು ದಶಕಗಳಲ್ಲಿ ಮನುಕುಲ ಭಯಾನಕ ವಿಪತ್ತಿನಲ್ಲಿ ಸಿಲುಕುತ್ತದೆ. ಪ್ರಪಂಚದಲ್ಲಿ ಮಾನವನ ಸಂಖ್ಯೆ ಹಿಡಿತವಿಲ್ಲದಷ್ಟು ಹೆಚ್ಚಿ ಇದ್ದಕ್ಕಿದ್ದ ಹಾಗೆ ಮಾನವ ನಾಶವಾಗಲಿದ್ದಾನೆ...."

ಇಂದು ಜನಸಂಖ್ಯಾ ಸ್ಫೋಟವು ಜಗತ್ತಿನ ಒಂದು ಬೃಹತ್ ಸಮಸ್ಯೆಯಾಗಿದೆ. ಇಂದು ಜಗತ್ತು ಎದುರಿಸುತ್ತಿರುವ ಅನೇಕ ದೊಡ್ಡ ಸಮಸ್ಯೆಗಳಿಗೆ ಜನಸಂಖ್ಯಾ

ಹೆಚ್ಚಳವೇ ಕಾರಣವಾಗಿದೆ. ಜನಸಂಖ್ಯೆ ಹೆಚ್ಚುತ್ತ ಹೋದಂತೆ ಪರಿಸರದ ಮೇಲಿನ ಜನರ ಅವಲಂಬನವೂ ಹೆಚ್ಚುತ್ತ ಹೋಗುತ್ತದೆ. ಸ್ವಾರ್ಥಿ ಮಾನವ ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ಹೆಚ್ಚು ಹೆಚ್ಚಾಗಿ ಬಳಸಿಕೊಳ್ಳುತ್ತ ಬರುತ್ತಾನೆ. ಹೀಗಾಗಿ ವಿಶ್ವಪರಿಸರವ್ಯೂಹದ ಕ್ರಿಯಾ ಚಟುವಟಿಕೆಗಳು ತೊಂದರೆಗೊಳಗಾಗುತ್ತವೆ. ಪೂರ್ಣವಾಗಿ ಪ್ರಕೃತಿದತ್ತವಾಗಿಯೇ ಸಿಗುವ ನೀರು, ವಾಯು ಮಲಿನಗೊಳ್ಳುತ್ತವೆ. ಅರಣ್ಯನಾಶ ಮಳೆ ತರಿಸದೇ ಬರಗಾಲವನ್ನುಂಟುಮಾಡುತ್ತದೆ. ಮಾನವ ಅವಲಂಬಿಸಿರುವ ಸೃಷ್ಟಿಯ ಜೀವಿಗಳು ನಾಶವಾಗುತ್ತವೆ. ಈಗಾಗಲೇ ಪರಿಸರ ವಿನಾಶದ ಈ ಗಂಭೀರ ಸಮಸ್ಯೆ ದುರಂತಗಳ ಸರಮಾಲೆಯನ್ನೇ ತರುತ್ತಲಿದೆ. ಭೂಕಂಪ, ಬಿರುಗಾಳಿ, ಪ್ರವಾಹಗಳ ಹಾವಳಿ ಇವೆಲ್ಲವೂ ಹೆಚ್ಚಾದ ಜನಸಂಖ್ಯೆ ಪರಿಸರವನ್ನು ಮಲಿನಗೊಳಿಸಿದುದರ ಪರಿಣಾಮಗಳೇ ಆಗಿವೆ. ಇದಕ್ಕೆ ಬಹು ಬೇಗ ಪರಿಹಾರ ಕಂಡುಕೊಳ್ಳದಿದ್ದರೆ ಇಡೀ ಮನುಕುಲವೇ ನಿರ್ನಾಮವಾಗುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಇದಕ್ಕಿರುವ ಏಕೈಕ ಪರಿಹಾರ ಮಿತಸಂತಾನ—ಜನ ಸಂಖ್ಯಾ ನಿಯಂತ್ರಣ.

ಜನಸಂಖ್ಯಾ ಸ್ಫೋಟ

'ಜನಸಂಖ್ಯಾ ಸ್ಫೋಟ' ಎಂಬ ಮಾತು ಕೇಳಿ ಬಂದದ್ದು ಒಂದು ಶತಮಾನದಿಂದೀಚೆಗೆ. ಜನಸಂಖ್ಯಾ ಹೆಚ್ಚಳದ ದುರಂತಗಳನ್ನು ತರ್ಕಿಸಿದ ಕೆಲವರು ಇದನ್ನು "ಜನಸಂಖ್ಯಾ ಬಾಂಬ್" ಎಂತಲೂ ಕರೆಹರು. ಅಂದರೆ ಹಿಂದೆ ಜನಸಂಖ್ಯಾ ಹೆಚ್ಚಳವಿರಲಿಲ್ಲವೆಂದಲ್ಲ. ಆಗಲೂ ಜನನ ಪ್ರಮಾಣ ಹೆಚ್ಚಾಗಿಯೇ ಇತ್ತು. ಆದರೆ ಅಂದು ಮರಣ ಪ್ರಮಾಣ ಹೆಚ್ಚಿಗೆ ಇತ್ತು. ನಿಸರ್ಗವೇ ಜನಸಂಖ್ಯಾ ನಿಯಂತ್ರಣ ಮಾಡುತ್ತಿತ್ತು. ಪ್ಲೇಗ್, ಸಿಡುಬುಗಳಂಥಹ ರೋಗಗಳು ಅಸಂಖ್ಯ ಜನರ ಸಾವಿಗೆ ಕಾರಣವಾದರೆ ಎಷ್ಟೋ ಪ್ರಾಕೃತಿಕ ವಿಕೋಪಗಳಿಂದಲೂ ಜನಸಂಖ್ಯೆ ಕಡಿಮೆಯಾಗುತ್ತಿತ್ತು. ಕಾಡಿನಿಂದ ನಾಡಿಗೆ ಬಂದ ಮಾನವನಿಗೆ ಮೊದಲು ರೋಗಗಳಿಂದ ಮುಕ್ತನಾಗಲು, ಕ್ರೂರ ಪ್ರಾಣಿಗಳಿಂದ ಪಾರಾಗಲು ಸಾಧನೋಪಾಯಗಳ ಪರಿಚಯವಿರಲಿಲ್ಲ. ಕಾಲದ ಗತಿಯಲ್ಲಿ ಮಾನವನ ಬುದ್ಧಿಶಕ್ತಿ ಗಣನೀಯವಾದ ಕೆಲಸ ಮಾಡಿತು. ಅನೇಕ ಭಯಾನಕ ರೋಗಗಳ ವಿರುದ್ಧ ಔಷಧಿಗಳನ್ನು ವಿವಿಧ ಚಿಕಿತ್ಸೆಗಳನ್ನೂ ಕಂಡು ಹಿಡಿಯಲಾಯಿತು. ಕೈಗಾರಿಕಾ ಕ್ರಾಂತಿ ಅವರ ಜೀವನ ಮಟ್ಟವನ್ನೂ ಎತ್ತರಿಸಿತು. ಎರಡನೇ ಮಹಾಯುದ್ಧದ ನಂತರ ಸಾಮೂಹಿಕ ಚುಚ್ಚುಮದ್ದು, ಕ್ಷಯರೋಗ ನಿವಾರಣೆಗೆ ಬಿ.ಸಿ.ಜಿ ಮುಂತಾದ ಕ್ರಮಗಳಿಂದ ಮರಣ ಪ್ರಮಾಣ ಗಣನೀಯವಾಗಿ ಇಳಿಮುಖಗೊಂಡಿತು. ೧೯೩೫ ರಲ್ಲಿ ವಿಶ್ವದಲ್ಲಿ ೧೦೦೦ ಜನರಿಗೆ ೨೫ ಜನ ಸಾಯುತ್ತಿದ್ದರು. ಆದರೆ ಈ ಪ್ರಮಾಣ ಆಧುನಿಕ ವೈದ್ಯಕೀಯ ಆವಿಷ್ಕಾರಗಳಿಂದ ೧೯೫೦ ರಲ್ಲಿ ೧೯ಕ್ಕೆ ಇಳಿಯಿತು. ಮುಂದೆ ೧೯೬೫ ರಲ್ಲಿ ೧೬ಕ್ಕೆ ಇಳಿದರೆ ೧೯೭೦ ರಲ್ಲಿ ೧೩.೭ಕ್ಕೆ ಇಳಿಯಿತು. ಇದು ಇಂದು ಜನಸಂಖ್ಯಾ ಬಾಂಬ್ ಆಗಿ ಪರಿಣಮಿಸಿ ಅನೇಕ ಸಮಸ್ಯೆಗಳಿಗೆ ಹುಟ್ಟುಹಾಕಿದೆ. ಜನಸಂಖ್ಯಾ ಸಮಸ್ಯೆ

ಇಂದು ವಿಶ್ವದ ಅತ್ಯಂತ ದೊಡ್ಡ ಸಮಸ್ಯೆಯಾಗಿದೆ.

ಜನಸಂಖ್ಯಾ ಹೆಚ್ಚಳದ ಗತಿಯನ್ನೂ ಹಾಗೂ ಅದರಿಂದಾಗುವ ಅನಾಹುತಗಳನ್ನೂ ೧೮೦೯ ರಲ್ಲೇ ಇಂಗ್ಲೀಷ್ ಅರ್ಥಶಾಸ್ತ್ರಜ್ಞ ತರ್ಕಿಸಿದ್ದನು. ಜನಸಂಖ್ಯೆ ಏರುತ್ತಿರುವ ಗತಿ ಹಾಗೂ ಆಹಾರದ ಉತ್ಪಾದನೆಯ ಗತಿಯನ್ನು ಅಭ್ಯಸಿಸಿದ ಮಾಲ್ಥಸ್ ಹೇಳಿದ—"ಜನಸಂಖ್ಯೆ ೧,೨,೪,೮,೧೬,೩೨ ರಂತೆ ದ್ವಿಗುಣಗೊಳ್ಳುತ್ತಲಿದೆ. ಆಹಾರೋತ್ಪಾದನೆ ಮಾತ್ರ ೧,೨,೩,೪,೫,೬,೭ ರಂತೆ ಸಾಗುತ್ತಿದೆ." ಇದನ್ನು ಅಂದು ಯಾರೂ ಅಷ್ಟಾಗಿ ಗಮನಿಸಲಿಲ್ಲ. ಆದರ ಕಹಿ ಫಲಗಳನ್ನು ನಾವಿಂದು ಅನುಭವಿಸುತ್ತಿದ್ದೇವೆ. ವಿಶ್ವದಲ್ಲಿ ಇಂದು ಜನಸಂಖ್ಯೆ ಯಾವ ರೀತಿಯಾಗಿ ಹೆಚ್ಚುತ್ತಲಿದೆ ಎಂಬುದಕ್ಕೆ ಈ ಕೆಳಗಿನ ಅಂಕಿ-ಅಂಶಗಳನ್ನು ಗಮನಿಸಿರಿ.

೧೮೩೦ ನೇ	ಇಸ್ವಿಯಲ್ಲಿ	೧೦೦ ಕೋಟಿ
೧೯೩೦ ನೇ	"	೨೦೦ "
೧೯೬೦ ನೇ	"	೩೦೦ "
೧೯೭೫ ನೇ	"	೪೦೦ "
೧೯೮೭ ನೇ	"	೫೦೦ "

ಈ ಮೇಲಿನ ಅಂಕಿ-ಅಂಶಗಳನ್ನು ಗಮನಿಸಿದಾಗ ೧೮೩೦ ರಲ್ಲಿ ೧೦೦ ಕೋಟಿ ಇದ್ದ ಜಗತ್ತಿನ ಜನಸಂಖ್ಯೆ ೨೦೦ ಕೋಟಿ ಆಗಲು ಅಂದರೆ ೧೦೦ ಕೋಟಿ ಹೆಚ್ಚಾಗಲು ೧೦೦ ವರ್ಷಗಳ ದೀರ್ಘಾವಧಿಯನ್ನು ತೆಗೆದುಕೊಂಡಿತು. ಆದರೆ ಅದೇ ೧೯೭೫ರಲ್ಲಿ ೪೦೦ ಕೋಟಿ ಇದ್ದ ಜನಸಂಖ್ಯೆ ೫೦೦ ಕೋಟಿ ಆಗಲು ಅಂದರೆ ೧೦೦ ಕೋಟಿ ಹೆಚ್ಚಾಗಲು ೧೨ ವರ್ಷಗಳ ಅವಧಿ ತೆಗೆದುಕೊಂಡಿತು. ಇದು ವಿಶ್ವ ಜನಸಂಖ್ಯಾ ಹೆಚ್ಚಳದ ಭಯಾನಕ ಸೂಚನೆ ಎಂಬುದರಲ್ಲಿ ಸಂದೇಹವಿಲ್ಲ.

ಭಾರತ

ಜನಸಂಖ್ಯಾ ಹೆಚ್ಚಳದಲ್ಲಿ ಭಾರತಕ್ಕೆ ಇಷ್ಟರಲ್ಲೇ ವಿಶ್ವದಲ್ಲೇ ಪ್ರಥಮಸ್ಥಾನ ದೊರೆಯಲಿದೆ. ಇಂದು ನಮ್ಮ ದೇಶ ಎದುರಿಸುತ್ತಿರುವ ಎಲ್ಲ ಸಮಸ್ಯೆಗಳಿಗೂ ಮೂಲ ಕಾರಣ ಜನಸಂಖ್ಯಾ ಹೆಚ್ಚಳ. ನಮ್ಮ ದೇಶದ ಸರ್ವ ಕ್ಷೇತ್ರಗಳ ಪ್ರಗತಿಯನ್ನು ಜನಸಂಖ್ಯಾ ಹೆಚ್ಚಳ ತಿಂದು ಹಾಕುತ್ತಲಿದೆ. ಇಂದು ವಿಶ್ವದಲ್ಲಿ ಜನಿಸುವ ಪ್ರತಿ ಆರು ಜನರಲ್ಲಿ ಒಬ್ಬ ಭಾರತೀಯ ಎನ್ನಲಾಗಿದೆ. ಜಗತ್ತಿನಲ್ಲಿ ಪ್ರತಿ ನಿಮಿಷಕ್ಕೆ ೧೫೮ ಮಕ್ಕಳು ಜನಿಸುತ್ತಿದ್ದು ಅವುಗಳಲ್ಲಿ ೨೬ ಮಕ್ಕಳು ಭಾರತೀಯರು ಎಂದು ಹೇಳಲಾಗಿದೆ. ನಮ್ಮ ದೇಶದ ಜನಗಣತಿಯನ್ನು ನೋಡಿದರೆ ದೇಶದಲ್ಲಿ ಹೆಚ್ಚುತ್ತಿರುವ ಜನಸಂಖ್ಯಾ ಪ್ರಮಾಣದ ಗತಿಯು ಅರಿವಾದೀತು. ೧೮೮೧ ರಿಂದಲೂ ಪ್ರತಿ ೧೦ ವರ್ಷಗಳಿಗೊಮ್ಮೆ ಜನಗಣತಿ ಮಾಡುತ್ತ ಬರಲಾಗಿದೆ. ಪ್ರತಿ ಜನಗಣತಿಯಲ್ಲೂ ಹೆಚ್ಚುತ್ತಿರುವ ದೇಶದ ಜನಸಂಖ್ಯೆಯ ಬಗೆಗೆ ಕಳವಳ ವ್ಯಕ್ತಪಡಿಸಲಾಗಿದೆ. ೧೯೪೭ ರಲ್ಲಿ ಭಾರತದ ಜನಸಂಖ್ಯೆ ೩೪ ಕೋಟಿ ಇತ್ತು. ಅದು ೧೯೮೧ ರಲ್ಲಿ ೬೮ ಕೋಟಿಗೆ ಏರಿತು.

೧೯೯೧ ರ ಜನಗಣತಿಯ ಅಂಕಿ-ಅಂಶ ನೋಡಿದರೆ ನಿಜಕ್ಕೂ ಭಯವಾಗುತ್ತದೆ.

ಇದರ ಪ್ರಕಾರ ಭಾರತದ ಜನಸಂಖ್ಯೆಗೆ ಈಗ ೮೪೩.೯ ಮಿಲಿಯ. ೧೯೮೧-೧೯೯೧ರ ಈ ಹತ್ತು ವರ್ಷಗಳಲ್ಲಿ ಭಾರತದಲ್ಲಿ ಏರಿದ ಜನ ಸಂಖ್ಯೆ ೧೬೦.೬ ಮಿಲಿಯ. ಇಡೀ ರಾಷ್ಟ್ರದ ಜನಸಂಖ್ಯೆ ಏರಿದ ಪ್ರಮಾಣ ಶೇ|| ೨೩.೫ ಆದರೆ ಭಾರತಕ್ಕೆ ಶೇಕಡಾ ೨ ರಷ್ಟು ಜನ ಸಂಖ್ಯಾ ಹೆಚ್ಚಳವನ್ನು ತಡೆದುಕೊಳ್ಳುವ ಶಕ್ತಿಯಿಲ್ಲ. ಜಗತ್ತಿನಲ್ಲಿ ಭಾರತದ ಭೂಮಿಯ ಪ್ರಮಾಣ ಕೇವಲ ಶೇಕಡಾ ೨.೪. ಆದರೆ ಜಗತ್ತಿನ ಜನಸಂಖ್ಯೆಯು ಶೇಕಡಾ ೧೫ ಭಾರತದಲ್ಲಿದೆ. ನಿಜಕ್ಕೂ ಭಯಾನಕ ಅಲ್ಲವೇ ?

ದೇಶದ ಎಲ್ಲ ಸಮಸ್ಯೆಗಳಿಗೆ ಹೆಚ್ಚುತ್ತಿರುವ ಜನಸಂಖ್ಯೆಯೇ ಕಾರಣವಾಗಿದ್ದು, ಇದು ದೇಶದ ಅಭಿವೃದ್ಧಿಗೆ ತುಂಬ ತೊಡಕಾಗಿದೆ. ಕುಟುಂಬ ಯೋಜನೆಗಾಗಿ ಸರಕಾರ ೧೯೫೨ ರಿಂದ ಇದುವರೆಗೆ ೩೫೦೦ ಕೋಟಿ ಹಣ ಖರ್ಚುಮಾಡಿದೆ. ಈಗ ವರ್ಷಕ್ಕೆ ೬೦೦ ಕೋಟಿ ಖರ್ಚು ಮಾಡಲು ಉದ್ದೇಶಿಸಿದೆ. ಪಂಚವಾರ್ಷಿಕ ಯೋಜನೆಗಳೂ ಜನಸಂಖ್ಯಾ ನಿಯಂತ್ರಣಕ್ಕಾಗಿ ಶ್ರಮಿಸುತ್ತಿವೆ. ಆದರೆ ಕುಟುಂಬ ಯೋಜನೆಯಲ್ಲಿ ನಾವು ಇನ್ನೂ ನಿರೀಕ್ಷಿತ ಗುರಿ ತಲುಪಿಲ್ಲ. ನಮ್ಮ ಎಲ್ಲಾ ಯೋಜನೆಗಳನ್ನು ಏರುತ್ತಿರುವ ಜನಸಂಖ್ಯೆ ಬುಡಮೇಲು ಮಾಡುತ್ತಿದೆ. ಆದರೂ ನಮ್ಮ ತಜ್ಞರು, ವಿಜ್ಞಾನಿಗಳು, ಯೋಜನಾಧಿಕಾರಿಗಳು ಇದರ ಬಗೆಗೆ ತೀವ್ರವಾಗಿ ಗಮನ ಹರಿಸಬೇಕಾಗಿದೆ. ಇಂದು ನಮ್ಮ ದೇಶದ ಅವಶ್ಯಕತೆಗಳೆಂದರೆ ಜನಸಂಖ್ಯಾ ನಿಯಂತ್ರಣ, ಇರುವ ಕೈಗಳಿಗೆ-ತಲೆಗಳಿಗೆ ಸರಿಯಾದ ಕೆಲಸ. ಇದು ತುಂಬ ತೀವ್ರವಾಗಿ ಆಗಬೇಕು.

ಜನಸಂಖ್ಯಾ ಹೆಚ್ಚಳದ ಅನಾಹುತಗಳು

೧) ಪರಿಸರ ಮಾಲಿನ್ಯ

ಭೂಗ್ರಹದ ಎಲ್ಲ ಪ್ರಾಣಿಗಳ ಪೈಕಿ ಮಾನವ ಒಬ್ಬ ಪ್ರಬಲ, ಸಬಲ, ಬುದ್ಧಿವಂತಪ್ರಾಣಿ. ಆದರೆ ಅವನು ತಾನು ನಡೆದು ಬರುತ್ತಿರುವ ದಾರಿಯುದ್ದಕ್ಕೂ ತಪ್ಪು ಹೆಜ್ಜೆಗಳನ್ನೇ ಇಡುತ್ತ ಬಂದವನು. ತನ್ನ ಸಂತಾನವನ್ನು ಎಡೆಬಿಡದೇ ಹೆಚ್ಚಿಸಿಕೊಂಡು ಭೂಮಿಯನ್ನೆಲ್ಲ ಆಕ್ರಮಿಸಿಕೊಂಡ. ತನ್ನ ಆಹಾರ ವಸತಿಗಳಿಗಾಗಿ ನಿಸರ್ಗದ ಬಹು ಭಾಗವನ್ನು ಕೃಷಿ ಭೂಮಿಯನ್ನಾಗಿಸಿಕೊಂಡ. ಹರಿಯುತ್ತಿದ್ದ ನದಿಗಳಿಗೆ ಅಡ್ಡಗಟ್ಟಿ ಜಲಾಶಯಗಳನ್ನು ಮಾಡಿಕೊಂಡ. ಖನಿಜಗಳ ಅನ್ವೇಷಣೆಗಾಗಿ ಪರ್ವತ, ಬೆಟ್ಟ-ಗುಡ್ಡಗಳನ್ನು ಬೋಳಾಗಿಸಿದ. ಸುಧಾರಣೆಯ ನೆಪದಲ್ಲಿ ಅವನು ಹಮ್ಮಿಕೊಂಡ ಅನೇಕ ಕೃತಿಗಳಿಂದಾಗಿ ಭೂಮಿ ತನ್ನ ಮೂಲಾವಸ್ಥೆಯನ್ನೇ ಕಳೆದುಕೊಂಡಿತು. ಫಲವತ್ತತೆ ಮಾಯವಾಗಿ ಮರುಭೂಮಿಗಳುಂಟಾದವು. ಇಂದು ಅತ್ಯಂತ ಭಯಾನಕವಾಗಿರುವ ಥಾರ್, ಸಹರಾಮರುಭೂಮಿಗಳು ಒಂದು ಕಾಲಕ್ಕೆ ಹಸಿರು ಸಂಪತ್ತಿನಿಂದ ಕಂಗೊಳಿಸುತ್ತಿದ್ದವು. ಆದರೆ ಮಾನವನ ಹಿಡಿತವಿಲ್ಲದ ಸ್ವಾರ್ಥ ಈ ಹಸುರಿಗೆ ಕುತ್ತು ತಂದಾಗ ಮರುಭೂಮಿಗಳಾದವು. ಈಗಲೂ ಪ್ರಪಂಚದ ಅನೇಕ ಮರುಭೂಮಿಗಳು ಮಾನವನ ತಪ್ಪು ಹೆಜ್ಜೆಯಿಂದಾಗಿ ವಿಸ್ತಾರಗೊಳ್ಳುತ್ತ ನಡೆದಿವೆ.

ಹೆಚ್ಚುತ್ತಿರುವ ಜನಸಂಖ್ಯೆಯು ಹೊಟ್ಟೆ ತುಂಬಿಸಲು 'ಕೈಗಾರಿಕಾಕ್ರಾಂತಿ'ಯು

ಹೆಸರಿನಲ್ಲಿ ಬೃಹತ್ ಕಾರ್ಖಾನೆಗಳನ್ನು ನಿರ್ಮಿಸಿದ. ಈ ಕಾರ್ಖಾನೆಗಳು ಅಧಿಕ ಪ್ರಮಾಣದ ಮಲಿನವಸ್ತುಗಳನ್ನು ಅನಾವಶ್ಯಕವಾಗಿ ಪರಿಸರಕ್ಕೆ ಸೇರಿಸಿ ಪರಿಸರ ಚಕ್ರವನ್ನೇ ಭೇದಿಸಿಬಿಟ್ಟು. ಇದರಿಂದ ಗಾಳಿ, ನೀರು, ನೆಲ ಎಲ್ಲವೂ ಮಲಿನಗೊಂಡವು. ಅಪಾಯಕಾರಿ ವಸ್ತುಗಳಾದ ಸೀಸ, ಪಾದರಸ, ಕ್ಲೋರಿನೇಟೆಡ್ ಹೈಡ್ರೋಕಾರ್ಬನ್‌ಗಳು ಆಹಾರ ಸರಪಳಿ ಮೂಲಕ ನಮ್ಮ ದೇಹವನ್ನು ಸೇರಿಕೊಳ್ಳ ತೊಡಗಿದವು. ಈ ತೆರನಾಗಿ ಇಂದು ಹೆಚ್ಚುತ್ತಿರುವ ಜನಸಂಖ್ಯೆಯಿಂದಾಗಿ ಭೂ ಪರಿಸರ ತೀವ್ರವಾಗಿ ಜರ್ಜರಿತಗೊಂಡಿದೆ.

೨) ನಾಗರಿಕತೆಯ ನಿರ್ನಾಮ

ಹೆಚ್ಚುತ್ತಿರುವ ಜನಸಂಖ್ಯಾ ಪ್ರಮಾಣವನ್ನು ಗಮನಿಸಿದ ವಿಜ್ಞಾನಿಯೊಬ್ಬ ಭಯಪಟ್ಟು ಹೀಗೆ ಹೇಳಿದ—"ಮುಂದೊಂದು ದಿನ ಮಾನವ ಮಾನವನನ್ನೇ ತಿಂದು ಬದುಕುವ ಕಾಲ ಬರಬಹುದು". ಇದು ಇಂದು ಸತ್ಯವಾಗುತ್ತಲೂ ಇದೆ. ಪ್ರಪಂಚದ ಮುಂದುವರೆದ ದೇಶಗಳಾದ ಅಮೆರಿಕಾ, ಕೆನಡಾ, ಯುರೋಪ್, ರಷ್ಯಾ ನ್ಯೂಜಿಲ್ಯಾಂಡ್, ಆಸ್ಟ್ರೇಲಿಯಾ, ಜಪಾನ್ ಮೊದಲಾದ ದೇಶಗಳಲ್ಲಿ ಜನನ ಪ್ರಮಾಣ ಕಡಿಮೆ. ವರಮಾನ ಹೆಚ್ಚು. ಕಾರಣ ಅಲ್ಲಿಯ ಜನರಿಗೆ ಬದುಕಿನ ಹೆಚ್ಚಿನ ಸೌಲಭ್ಯಗಳು ಸರಳವಾಗಿ ದೊರೆಯುತ್ತವೆ. ಆದರೆ ಜನಸಂಖ್ಯೆ ವಿಪರೀತ ಬೆಳೆಯುತ್ತಿರುವ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಜನನ ಪ್ರಮಾಣ ಹೆಚ್ಚು, ವರಮಾನ ಕಡಿಮೆ. ಈ ಪರಿಸ್ಥಿತಿ ನಿರಂತರವಾಗಿ ಮುಂದುವರೆದರೆ ಮುಂದೊಂದು ದಿನ ನಾಗರಿಕತೆಯೇ ನಿರ್ನಾಮವಾಗುವ ಸಾಧ್ಯತೆಗಳಿವೆ. ಅಂಥಹ ಜ್ವಲಂತ ನಿದರ್ಶನಗಳು ನಮ್ಮ ಕಣ್ಮುಂದೆ ಇವೆ. ಹೆಚ್ಚಾದ ಜನಸಂಖ್ಯೆ ತನ್ನ ಬದುಕಿಗಾಗಿ ಪ್ರಕೃತಿ ನಿಯಮಗಳನ್ನು ಉಲ್ಲಂಘಿಸಿ ನಡೆದ ಕಾರಣ ಪರಿಸರ ಸಮತೋಲ ತಪ್ಪಿ ಪ್ರಾಚೀನ ಕಾಲದ ಲೆಬನಾನ್, ಪ್ಯಾಲೆಸ್ಟೈನ್, ಟ್ಯುನಿಷಿಯಾ, ಗ್ರೀಸ್, ತುರ್ಕಿ ದೇಶಗಳ ನಾಗರಿಕತೆಗಳೇ ಅಳಿಸಿ ಹೋಗಿದ್ದು ಈಗ ಇತಿಹಾಸವಾಗಿದೆ. ಈಗ ಇಥಿಯೋಪಿಯಾ ಇಂಥಹದೇ ಪರಿಸರ ವಿನಾಶದ ಅಂಚಿನತ್ತ ಸರಿಯುತ್ತಲಿದೆ. ನಮ್ಮ ದೇಶದಲ್ಲೂ ಇದ್ದೇ ಪರಿಸ್ಥಿತಿ ಮುಂದುವರೆದರೆ ಇನ್ನು ಕೆಲವೇ ವರ್ಷಗಳಲ್ಲಿ ಇಂಥಹದೇ ವಿಷಮ ಪರಿಸ್ಥಿತಿಯನ್ನು ನಾವು ಎದುರಿಸಬೇಕಾಗುತ್ತದೆ.

೩) ಅನಾರೋಗ್ಯ

ಹೆಚ್ಚುತ್ತಿರುವ ಜನಸಂಖ್ಯೆ ಮಾನವ ಸಂಪನ್ಮೂಲದ ಆರೋಗ್ಯಾಭಿವೃದ್ಧಿಯ ಮೇಲೂ ಪರಿಣಾಮ ಬೀರುತ್ತದೆ. ಪ್ರಪಂಚದಲ್ಲಿಂದು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಮೂರನೇ ಎರಡರಷ್ಟು ಜನರಿಗೆ ಸಾಕಷ್ಟು ಪ್ರಮಾಣದ ಪೌಷ್ಟಿಕ ಆಹಾರವಾಗಲಿ, ಶುದ್ಧ ನೀರಾಗಲಿ ಸಿಗುತ್ತಿಲ್ಲ. ಪೋಷಕಾಂಶದ ಕೊರತೆಯುಳ್ಳ ಆಹಾರ ಸೇವನೆಯಿಂದ ಹುಟ್ಟುವ ಹಾಗೂ ಬೆಳೆಯುವ ಮಕ್ಕಳು ಬಲಹೀನತೆ, ಅಂಗ ವಿಕಲತೆ, ಮನೋದೌರ್ಬಲ್ಯಕ್ಕೆ ಬಲಿಯಾಗುತ್ತಿದ್ದಾರೆ. ಅವರ ಬುದ್ಧಿಮಾಂದ್ಯತೆಯೂ ಹೆಚ್ಚುತ್ತಲಿದೆ. ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಪ್ರತಿದಿನ ೨೧,೦೦೦ ಮಕ್ಕಳು

ಸಾವನ್ನಪ್ಪುತ್ತಿವೆ. ಭಾರತದಲ್ಲಿ ೧೯೮೭ರಲ್ಲಿ ೧೦೦೦ಕ್ಕೆ ೯೫ ಮಕ್ಕಳು ಸಾವನ್ನಪ್ಪಿವೆ. ಜನಸಂಖ್ಯೆ ಹೆಚ್ಚಿದಂತೆ ಆಹಾರದ ಕೊರತೆ ಉಂಟಾಗುತ್ತದೆ. ಒಂದು ಹೊತ್ತಿನ ಊಟಕ್ಕೂ ಗತಿಯಿಲ್ಲದ ಮಕ್ಕಳು ನಮ್ಮಲ್ಲಿ ಸಾಕಷ್ಟು ಇದ್ದಾರೆ.

೪) ರಾಷ್ಟ್ರದ ಪ್ರಗತಿಯ ಹಿಂಜರಿತ ಮತ್ತು ಪತನ

ಒಂದು ರಾಷ್ಟ್ರದ ಪ್ರಗತಿ ಆ ದೇಶದ ಮಾನವ ಸಂಪನ್ಮೂಲವನ್ನೇ ಅವಲಂಬಿಸಿರುತ್ತದೆ. ರಾಷ್ಟ್ರದ ಅಭಿವೃದ್ಧಿಯು ಆ ದೇಶದ ಪ್ರಜೆಗಳ ಸಬಲ, ಸದೃಢ, ಬುದ್ಧಿವಂತ ಪ್ರಜೆಗಳನ್ನೇ ಅವಲಂಬಿಸಿರುತ್ತದೆ. ಆರೋಗ್ಯ ಪ್ರಜೆಗಳು ಆರೋಗ್ಯ ರಾಷ್ಟ್ರವನ್ನು ಕಟ್ಟಬಲ್ಲರು. ಪ್ರಜೆಗಳ ಆರೋಗ್ಯ ಅವರಿಗೆ ಸಮೃದ್ಧವಾಗಿ ದೊರೆಯುವ ಜೀವನಾವಶ್ಯಕ ವಸ್ತುಗಳನ್ನೇ ಅವಲಂಬಿಸಿರುತ್ತದೆ. ಶುಚಿಯಾದ ನೀರು, ಶುಚಿಯಾದ ಪರಿಸರ ಮಾನವ ಸಂಪನ್ಮೂಲದ ಆರೋಗ್ಯಯುತ ಬೆಳವಣಿಗೆಗೆ ಅತ್ಯಂತ ಅವಶ್ಯಕ. ಆದರೆ ಇಂದು ಹೆಚ್ಚುತ್ತಿರುವ ಜನಸಂಖ್ಯೆ ಇವನ್ನೆಲ್ಲ ಕಬಳಿಸಿಬಿಟ್ಟಿದೆ. ಇಂದು ನಮ್ಮ ದೇಶದಲ್ಲಿ ಹೆಚ್ಚುತ್ತಿರುವ ಹೊಟ್ಟೆಗಳಿಗೆ ಬೇಕಾದ ಆಹಾರವನ್ನು ಅಂತರ್‍ರಾಷ್ಟ್ರೀಯ ಮೂಲಗಳಿಂದ ಎರವಲಾಗಿ, ದಾನವಾಗಿ ಪಡೆಯಲಾಗುತ್ತಿದೆ. ಆದರೆ ಇದು ಎಷ್ಟು ದಿನ ನಡೆದೀತು? ಜಗತ್ತಿನಲ್ಲಿ ಅನೇಕ ದೇಶಗಳ ಹಣೆಬರಹ ಇದೇ ಆಗಿದೆ. ದಿನದಿನಕ್ಕೆ ಹೆಚ್ಚುತ್ತಿರುವ ಮಕ್ಕಳ ಸಂಖ್ಯೆಯ ಪ್ರಮಾಣಕ್ಕೆ ಉತ್ಪಾದಿಸುತ್ತಿರುವ ಆಹಾರದ ಗುಣಪ್ರಮಾಣ ಏನೇನೂ ಸಾಲದಾಗಿದೆ. ಬಾಲಕಾರ್ಮಿಕರ ಸಂಖ್ಯೆ ಮಿತಿ ಮೀರಿ ಬೆಳೆಯುತ್ತಿದ್ದು, ಇದೂ ಒಂದು ಸಮಸ್ಯೆಯಾಗಿ ಪರಿಣಮಿಸಿದೆ. ಈ ಹಿನ್ನೆಲೆಯಲ್ಲೇ ಭಿಕ್ಷಾವೃತ್ತಿಯೂ ಹೆಚ್ಚಾಗಿದೆ, ಅನಕ್ಷರತೆ ಹೆಚ್ಚಾಗಿದೆ. ಇದರ ಜೊತೆಗೆ ರಾಷ್ಟ್ರದ ಸಮಸ್ಯೆಗಳೂ ಹೆಚ್ಚಿ ರಾಷ್ಟ್ರ ಪ್ರಗತಿಯು ಪತನದತ್ತ ಮುಂದುವರೆಯುತ್ತದೆ.

೫) ಬಡತನ–ಅಶಾಂತಿ–ಅರಾಜಕತೆ

ಜನಸಂಖ್ಯಾ ಹೆಚ್ಚಳ ತಲಾ ವರಮಾನವನ್ನು ಕಡಿಮೆ ಮಾಡುತ್ತದೆ. ಇಂದು ವಿಶ್ವದಲ್ಲಿ ಪ್ರತಿ ೫ ಜನರಲ್ಲಿ ಒಬ್ಬ ಬಡವನಿದ್ದಾನೆ. ಇದು ಅತ್ಯಂತ ಕೆಟ್ಟ ಆರ್ಥಿಕ ಸ್ಥಿತಿಯಾಗಿದೆ. ಜನರಿಗೆ ವಸತಿ ಸೌಕರ್ಯಗಳೂ ಸಾಲದಾಗಿವೆ. ಸೀಮಿತ ಸ್ಥಳದಲ್ಲೇ ಹೆಚ್ಚು ಜನ ವಾಸಿಸುವಂತಾಗಿದೆ. ಜನರಿಗೆ ಸಂಪನ್ಮೂಲಗಳು ಸಾಲದಾಗಿವೆ. ವಿದ್ಯೆ, ಆರೋಗ್ಯ ರಕ್ಷಣೆಯಂಥತಹ ಕನಿಷ್ಠ ಸೌಲಭ್ಯಗಳೂ ದೊರೆಯದಾಗಿದೆ. ಇದರ ಫಲಸ್ವರೂಪಿಯಾಗಿ ರಾಷ್ಟ್ರಗಳಲ್ಲಿ ಕ್ಷೋಭೆಯುಂಟಾಗಿದೆ. ಗಲಬೆ, ಕ್ರಾಂತಿ, ಅಶಾಂತಿಗಳು ಹೆಚ್ಚಾಗಿವೆ, ಅರಾಜಕತೆ, ಹಿಂಸೆ ತಾಂಡವವಾಡುತ್ತಲಿದೆ. ಬಡತನದ ಬೇಗೆಯಲ್ಲಿ ಬೇಯುವ ಜನ ರಾಜಕೀಯ ಕಾಯ್ದೆ, ಕಾನೂನುಗಳನ್ನು ಮೀರಿ ನಡೆಯುತ್ತಿದ್ದಾರೆ. ಆಹಾರಕ್ಕಾಗಿ ಹಾಹಾಕಾರವೆದ್ದಿದೆ. ಜನಸಂಖ್ಯಾ ಸ್ಫೋಟ ಹುಟ್ಟು ಹಾಕಿರುವ ಇನ್ನೊಂದು ಸಮಸ್ಯೆ ನಿರುದ್ಯೋಗ ಸಮಸ್ಯೆ. ದುಡಿಯುವ ಕೈಗಳಿಗೆ ಸರಿಯಾದ ಕೆಲಸವಿಲ್ಲದಾಗಿದೆ. ಹೊಟ್ಟೆಯ ಹಸಿವು ಹಿಂಗದಾಗಿದೆ. ಅದಕ್ಕಾಗಿ

ಯುವಶಕ್ತಿ ಅಡ್ಡದಾರಿ ಹಿಡಿದು ಬದುಕುತ್ತಿರುವುದರಿಂದ ರಾಷ್ಟ್ರಗಳಲ್ಲಿ ಅಶಾಂತಿ, ಅರಾಜಕತೆಗಳು ಹೆಚ್ಚಾಗಿವೆ.

೬) ಬಂಜರಾಗುತ್ತಿರುವ ಕೃಷಿಭೂಮಿ

ಕೃಷಿ ಉತ್ಪಾದನೆ ನಿರಂತರವಾಗಿರಲು ಸಾಧ್ಯವಿಲ್ಲ. ಕೃಷಿಭೂಮಿ ಚೇತರಿಸಿಕೊಳ್ಳಲು ಅದಕ್ಕೂ ವಿಶ್ರಾಂತಿಬೇಕು. ಆದರೆ ಹೆಚ್ಚುತ್ತಿರುವ ಜನಸಂಖ್ಯೆ ಭೂಮಿಗೆ ವಿಶ್ರಾಂತಿಯನ್ನೇ ನೀಡುತ್ತಿಲ್ಲ. ನಿರಂತರವಾಗಿ ಬೆಳೆ ಬೆಳೆಯಲಾಗುತ್ತಿದೆ. ಇದರಿಂದ ಕೃಷಿಭೂಮಿ ತನ್ನ ಫಲವತ್ತತೆಯನ್ನು ಕಳೆದುಕೊಳ್ಳುತ್ತಲಿದೆ. ಮೊದಲು ಮಾನವ ಬಹುವಿಧಾನ ಕೃಷಿಗೆ ಅಂಟಿಕೊಂಡಿದ್ದ. ಕೈಗಾರಿಕಾ ಕ್ರಾಂತಿಯ ನಂತರ ಏಕವಿಧಾನ ಕೃಷಿ ಜಾರಿಗೆ ಬಂತು. ಕೃಷಿಯಲ್ಲೂ ಯಂತ್ರೋಪಕರಣಗಳು ಬಳಕೆಯಾಗತೊಡಗಿದವು. ಭೂಮಿಗೆ ವಿಜ್ಞಾನ ಸಂಶೋಧಿಸಿದ ಅನೇಕ ರಾಸಾಯನಿಕಗಳನ್ನು ಸುರಿದ. ಇದರಿಂದ ಆರಂಭದಲ್ಲಿ ಹೆಚ್ಚು ಇಳುವರಿ ದೊರೆಯಿತು. ಇದನ್ನೇ 'ಹಸಿರುಕ್ರಾಂತಿ' ಎಂದು ನಮ್ಮವರು ಬೀಗಿದರು. ಆದರೆ ಆದದ್ದೇ ಬೇರೆ. ಇಂದು ಈ ರಾಸಾಯನಿಕಗಳು ಭೂಮಿಯನ್ನು ಬಂಜರಾಗಿಸುತ್ತಲಿವೆ. ಅನೇಕ ವಿಷಕಾರಕಗಳನ್ನು ಆಹಾರ ಸರಪಳಿಯ ಮೂಲಕ ನಮ್ಮ ದೇಹ ಸೇರಿಸುತ್ತಲಿವೆ.

೭) ಅರಣ್ಯನಾಶ

ಹೆಚ್ಚುತ್ತಿರುವ ಜನಸಂಖ್ಯೆಗೆ ವಸತಿಗಾಗಿ ನೆಲಬೇಕು. ಕೃಷಿಗಾಗಿ ಭೂಮಿಬೇಕು. ಇದು ದೊರೆಯುವುದಾದರೂ ಎಲ್ಲಿ? ಆಗ ಆಧುನಿಕ ಮಾನವನಿಗೆ ಕಂಡದ್ದು ನಿಸರ್ಗ ನಿರ್ಮಿತ ಅರಣ್ಯ. ೧೯೫೧ ರಿಂದ ೧೯೭೬ರ ಈ ೨೫ ವರ್ಷಗಳಲ್ಲಿ ಕೃಷಿ ವಿಸ್ತರಣೆಗಾಗಿ ೨೫ ಲಕ್ಷ ಹೆಕ್ಟೇರುಗಳಷ್ಟು ಅರಣ್ಯ ನಾಶವಾಗಿದೆ. ಪ್ರಪಂಚದಲ್ಲಿ ಶೇ. ೩೩ ಜನರಿಗೆ ಇಂಧನವನ್ನೊದಗಿಸುವ ಏಕೈಕ ಆಸರೆಯೆಂದರೆ ಅರಣ್ಯಗಳು. ದಿನವೂ ಲಕ್ಷಾಂತರ ಎಕರೆ ಅರಣ್ಯ ಕೇವಲ ಅಡುಗೆ ಸೌದೆಗಾಗಿಯೇ ಹಾಳಾಗುತ್ತಲಿದೆ. ಇದು ಹೆಚ್ಚಾದ ಜನಸಂಖ್ಯೆಯ ಫಲಶ್ರುತಿ. ಅರಣ್ಯನಾಶ–ಮಳೆಕಡಿಮೆ–ಬೆಳೆಕಡಿಮೆ, ಆಹಾರದ ಕೊರತೆ—ಹೀಗೆ ಒಂದರ ಹಿಂದೆ ಒಂದು ಸಮಸ್ಯೆಗಳು ಉದ್ಭವಿಸುತ್ತವೆ. "ನಾಗರಿಕತೆ ಪ್ರಪ್ರಥಮ ಮರ ಕಡಿಯುವುದರೊಂದಿಗೆ ಆರಂಭವಾಯಿತು. ಕೊನೆಯ ಮರಕಡಿಯುವುದರೊಂದಿಗೆ ನಿರ್ನಾಮವಾಗುತ್ತದೆ" ಎಂಬ ಮಾತು ಅರಣ್ಯನಾಶದ ಭಯಾನಕತೆಯನ್ನು ಸೂಚಿಸುತ್ತದೆ.

ಪರಿಹಾರ

ನಮ್ಮ ಸರ್ವಸಮಸ್ಯೆಗಳಿಗೂ ಒಂದೇ ಒಂದು ಪರಿಹಾರವೆಂದರೆ ಜನಸಂಖ್ಯಾ ನಿಯಂತ್ರಣ. ಇದಕ್ಕೊಂದು ಉತ್ತಮ ಮಾದರಿ ಜಪಾನ್. ತನ್ನ ಸಂತಾನವನ್ನು ನಿಯಂತ್ರಿಸಿ ಜಪಾನ್‌ದೇಶ ಸಂಪನ್ಮೂಲಗಳನ್ನು ವೃದ್ಧಿಸಿಕೊಂಡು ಈಗ ಪ್ರಪಂಚದ ಮುಂದುವರೆದ ದೇಶಗಳ ಪಂಕ್ತಿಯಲ್ಲಿ ಅಗ್ರಸ್ಥಾನವನ್ನು ಪಡೆದಿದೆ. ಜಪಾನ್ ಕೈಗಾರಿಕಾ ದೇಶವಾದರೂ ಇನ್ನೂ ಶೇಕಡಾ ೬೩ ರಷ್ಟು ಅರಣ್ಯ ಪ್ರದೇಶವನ್ನು ಉಳಿಸಿಕೊಂಡಿದೆ. ಜಪಾನಿನ ಪರಿಸರ ಪ್ರಜ್ಞೆಯನ್ನು ನಮ್ಮದಾಗಿಸಿಕೊಳ್ಳಬೇಕು. ಪರಿಸರ ಪ್ರಜ್ಞೆ

ನಮ್ಮ ನೆಲದ ಮೂಲಾಧಾರವಾಗಿದೆ. ಆದರೆ ಅದನ್ನು ನಾವಿಂದು ಮರೆತಿದ್ದೇವೆ. ಅದು ಇಂದು ಜಾಗೃತಗೊಳ್ಳುವ ಅವಶ್ಯಕತೆ ಹೆಚ್ಚಿದೆ.

ಸಂತಾನ ನಿಯಂತ್ರಣ ಬಗೆಗೆ ಪ್ರಾಮಾಣಿಕ ಪ್ರಚಾರ ಕಾರ್ಯಕ್ರಮ ನಡೆಯಬೇಕು. "ಎಲ್ಲಿಯವರೆಗೆ ಜಗತ್ತಿನ ಎಲ್ಲ ತಂದೆ–ತಾಯಿಗಳು ಸಂತಾನ ನಿಯಂತ್ರಣ ಅವಶ್ಯಕತೆಯನ್ನು ಮನಗಾಣುವುದಿಲ್ಲವೋ ಅಲ್ಲಿಯವರೆಗೆ ಜಗತ್ತಿನ ಸಮಸ್ಯೆಗಳು ಬಗೆ ಹರಿಯಲಾರವು" ಎಂಬುದು ಸತ್ಯಸ್ಯಸತ್ಯ ಸಂಗತಿಯಾಗಿದೆ. ಇಂದು ಎಲ್ಲ ತಂದೆ–ತಾಯಿಯರು ಮಿತ ಸಂತಾನಕ್ಕಾಗಿ ಮುಂದೆ ಬರಬೇಕು. ನಮ್ಮ ಮುಂದಿನ ಪೀಳಿಗೆಯ ಉತ್ತಮ ಭವಿಷ್ಯಕ್ಕಾಗಿ ಮಿತಸಂತಾನದ ಅವಶ್ಯಕತೆಯನ್ನು ಎಲ್ಲರೂ ಮನಗಾಣಬೇಕು. ಮಿತಸಂತಾನದ ಪ್ರಾಮುಖ್ಯತೆ ಹಾಗೂ ಅದರಿಂದ ಕುಟುಂಬ, ಸಮಾಜ, ದೇಶಕ್ಕಾಗುವ ಪ್ರಯೋಜನವನ್ನು ಸಾರ್ವಜನಿಕರಿಗೆ ಮನಮುಟ್ಟುವಂತೆ ತಿಳಿಸಬೇಕು. ಶಾಲಾ ಕಾಲೇಜುಗಳಲ್ಲಿ ಈ ಬಗ್ಗೆ ಪಾಠ ಪ್ರವಚನಗಳು ನಡೆಯಬೇಕು. ವಿವಾಹದ ವಯಸ್ಸನ್ನು ಏರಿಸಬೇಕು. ದಂಪತಿಗಳಿಗೆ ಒಂದು ಇಲ್ಲವೆ ಎರಡೇ ಮಕ್ಕಳಿರಬೇಕೆಂದು ಕಡ್ಡಾಯವಾದ ಕಾಯ್ದೆ ಮಾಡಬೇಕು. ಈ ಕಾಯ್ದೆ ಸರ್ವಧರ್ಮಿಯರಿಗೂ ಅನ್ವಯಿಸಬೇಕು. ಇಲ್ಲಿ ಧರ್ಮ, ನಂಬಿಕೆಗಳಿಗಿಂತ ದೇಶದ ಹಿತ ಮುಖ್ಯವಾಗಬೇಕು. "ಮಿತ ಸಂತಾನ ದೇಶದ ಅಭಿವೃದ್ಧಿಗೆ ಸೋಪಾನ" ಎಂಬ ಅರಿವು ಸರ್ವರಲ್ಲೂ ಮೂಡಬೇಕು. ಸಂತಾನ ನಿರೋಧಕಗಳ ಬಳಕೆಯ ಪರಿಜ್ಞಾನ ಎಲ್ಲರಿಗೂ ದೊರೆಯುವುದರೊಂದಿಗೆ ಅವು ಸುಲಭವಾಗಿ ಸಿಗುವಂತಾಗಬೇಕು.

ನಮ್ಮ ಬದುಕಿನ ಎಲ್ಲ ಸಮಸ್ಯೆಗಳ ಬಗೆ ಹರಿಯಲು, ಮನುಕುಲದ ಅಸ್ತಿತ್ವ ಉಳಿಯಲು ನಮಗಿರುವ ಏಕೈಕ ಮಾರ್ಗ ಮಿತಸಂತಾನ. ಅದರೊಂದಿಗೆ ಮಿತಬಯಕೆ, ಮಿತಬಳಕೆ, ಪರಿಸರ ಹೊಂದಾಣಿಕೆಯ ನಿಯಮಗಳ ಪಾಲನೆ ಆಗಬೇಕು. ಆಗ ಮಾತ್ರ ಭವಿಷ್ಯದ ಬಗ್ಗೆ ಭರವಸೆ ಇಟ್ಟುಕೊಳ್ಳಬಹುದು.

---

* ಪ್ರಪಂಚದ ಪ್ರತಿ ಏಳು ಜನರಲ್ಲಿ ಒಬ್ಬ ಭಾರತೀಯ.

* ಪ್ರತಿ ಒಂದೂವರೆ ಸೆಕೆಂಡಿಗೆ ಒಂದು ಮಗು ಜನಿಸಿದರೆ, ಪ್ರತಿನಿತ್ಯ ೫೫,೦೦೦ಕ್ಕೂ ಹೆಚ್ಚು ಮಕ್ಕಳು ಬದುಕಿ ಹೊಸದಾಗಿ ಸೇರ್ಪಡೆಯಾಗುತ್ತಿವೆ.

ಲಿಯೋ ಟಾಲ್‌ಸ್ಟಾಯ್‌ಯವರ ಯುದ್ಧಗಳು ಮತ್ತು ಶಾಂತಿ

ಸರಸ್ವತಿ ಬಡೆಕ್ಕಿಲ

ಲಿಯೋ ಟಾಲ್‌ಸ್ಟಾಯ್‌ಯವರ ಕೃತಿಗಳಲ್ಲಿ ಜೀವ ಚೈತನ್ಯ ಉಕ್ಕಿ ಹರಿದಂತೆ ಜಗತ್ತಿನ ಇತರ ಯಾವುದೇ ಸಾಹಿತ್ಯ ಕೃತಿಗಳಲ್ಲಿ ಕಾಣಲಾರೆವು. ಅದರಲ್ಲೂ ಅವರ 'ಯುದ್ಧ ಮತ್ತು ಶಾಂತಿ', ಪ್ರೇಮ ಮತ್ತು ಪರಾಕ್ರಮ, ಜನನ-ಮರಣ, ಇವುಗಳು ಚಿರಸ್ಮರಣೀಯ ಕಾದಂಬರಿಗಳು! ಅತಿ ಸುಂದರ ಬಹುಮುಖ ಜೀವನ ದರ್ಶಕಗಳು! ಇವುಗಳಲ್ಲಿ ಕಣ್ಮರೆಯಾಗಿ ಹೋದ ರಷ್ಯಾ ದೇಶದ ವಾಸ್ತವ ಪ್ರತಿ ಬಿಂಬವಿದೆ. ಅಂದಿನ ಝಗಝಗಿಸುವ ಪ್ರಕಾಶಮಾನ ಸಾರ್ವಭೌಮ ನ್ಯಾಯಾಲಯ, ನೃತ್ಯ ಶಾಲೆಗಳು, ಮಲ್ಲಯುದ್ಧಗಳು, ಚುರುಕಿನಿಂದ ಮುನ್ನುಗ್ಗುವ ಸ್ವಾಭಿಮಾನಿ, ಸಾಹಸಿ, ಅಧಿಕಾರಿಗಳು, ಜನಮನದಲ್ಲಿ ತಲೆತಲಾಂತರದಿಂದಲೂ ಆಳವಾಗಿ ಬೇರೂರಿ ಬೆಳೆದ ಘನ ಔದಾರ್ಯ, ಅತಿ ವೇಗವಾಗಿ ಕುದುರೆಗಳನ್ನು ದೌಡಾಯಿಸಬಲ್ಲ ಜಗತ್ಪ್ರಸಿದ್ಧ ರಾಹುತರು, ತಲೆಯೊಳಗೆ ಮಣ್ಣ ಹೆಂಟೆ ತುಂಬಿದೆಯೋ ಎಂಬಂತಿರುವ, ಯಾವುದನ್ನೂ ಪ್ರಶ್ನಿಸದ ಅತಿ ವಿಧೇಯ ದಡ್ಡ ಜೀತದಾಳುಗಳು, ವಿಸ್ತಾರವಾದ ಹಿಮಾಚ್ಛಾದಿತ ಕಾಳಗದ ಮೈದಾನಗಳು ಲಂಗುಲಗಾಮಿಲ್ಲದೆ ರಾತ್ರಿಯೆಲ್ಲ ನಡೆವ ಜೂಜಾಟಗಳು, ಜಿಪ್ಸಿಗಳ ಜತೆ ಕುಡಿತ, ಕುಣಿತಗಳು, ಇವೆಲ್ಲವುಗಳ ಚಿತ್ರೀಕರಣ ಎಷ್ಟು ಜೀವಂತವಾಗಿವೆಯೆಂದರೆ, ನಮ್ಮನ್ನು ಗತಕಾಲದ ಆ ಪ್ರಪಂಚಕ್ಕೇ ಕರೆದೊಯ್ಯುತ್ತವೆ. ಇಂದು ಲೆನಿನ್‌ಗ್ರಾಡ್, ಮಾಸ್ಕೋಗಳ ಬೀದಿಗಳಲ್ಲಿ ತಿರುಗಾಡುವ ಜನರಿಗಿಂತಲೂ, ಟಾಲ್‌ಸ್ಟಾಯ್‌ಯವರ ರಚನೆಗಳಲ್ಲಿರುವ ಪಾತ್ರಗಳು, ನಮ್ಮ ಹೃದಯಕ್ಕೆ ಸಮೀಪವಾಗಿ, ಬುದ್ಧಿಗೆ ಸುಲಭಗ್ರಾಹ್ಯವಾಗಿ, ಸಜೀವವ್ಯಕ್ತಿಗಳಂತೆ ನೈಜವಾಗಿ ತೋರುತ್ತವೆ. ಏಕೆಂದರೆ ಟಾಲ್‌ಸ್ಟಾಯ್‌ಯವರೇ ಸ್ವತಃ ಬದುಕಿದ, ಕಣ್ಣಾರೆ ಕಂಡ ಪರಿಸ್ಥಿತಿ, ಸನ್ನಿವೇಶಗಳವು. ತಮ್ಮ ಅನುಭವವನ್ನೇ ಅವರು ಬರಹದಲ್ಲಿ ಇಳಿಸಿದ್ದಾರೆ. ತಮ್ಮ ಅನನ್ಯ ಕ್ರಿಸ್ತಪ್ರೇಮದ ಬೆಳಕಿನಲ್ಲಿ ಮಾನವ ವ್ಯಕ್ತಿತ್ವಗಳನ್ನು ಅರಿತುಕೊಂಡ ವಿಶಿಷ್ಟ ಅನುಭವಗಳ ಪರಿಪಾಕವನ್ನು ಎರಕ ಹೊಯ್ದ ರಚನೆಗಳವು! ಅನ್ಯಥಾ ಇಂಥ ಮಹಾನ್ ಕೃತಿಗಳ ರಚನೆ ಅಸಾಧ್ಯ!

ಟಾಲ್‌ಸ್ಟಾಯ್‌ಯವರ ಜೀವನದ ಪ್ರಾರಂಭದ ವರ್ಷಗಳಲ್ಲಿ ಹೇಳತಕ್ಕಂಥ

ಪ್ರತಿಭೆ ಅಥವಾ ಮಹಾನ್ ಸಾಹಿತಿಯಾಗುವ ಪೂರ್ವಲಕ್ಷಣ, ಏನೇನೂ ಇರಲಿಲ್ಲ. ೧೮೨೮ರಲ್ಲಿ ರಷ್ಯಾದ 'ಯೇಸ್ನಾಯಾ ಪೋಲ್ಯೇನಾ' ಎಂಬಲ್ಲಿ ಅವರು ಹುಟ್ಟಿದರು. ಮಾಸ್ಕೋವಿನಿಂದ ೨೦೦ ಕಿಲೋಮೀಟರ್ ದಕ್ಷಿಣದಲ್ಲಿರುವ ವಿಶಾಲ ಭೂ ಪ್ರದೇಶದ ಒಡೆಯ–ತಂದೆ ಕೌಂಟ್ ಟಾಲ್‌ಸ್ಟಾಯ್. ತಾಯಿ-ನೇಯಿ ಮಾರಿಯಾ ಪೋಲಾನ್‌ಸ್ಕೀ ರಾಜಕುಮಾರಿ. ಗಂಡಸಿಗೆ ಅತುಲ ಐಶ್ವರ್ಯ, ಮಕ್ಕಳಿಗೆ ರಷ್ಯಾದಲ್ಲೇ ಸರ್ವ ಶ್ರೇಷ್ಠ, ಅಗರ್ಭ ಶ್ರೀಮಂತ ವೈಭವಶಾಲಿ ವಂಶ ರಕ್ತದ ಅಭಿಮಾನವನ್ನು ಬಳುವಳಿಯಾಗಿ ತಂದಿತ್ತವಳು.

ಟಾಲ್‌ಸ್ಟಾಯ್‌ಯವರ 'ಡೈರಿ' ಅರ್ಥಾತ್ ದಿನಚರಿಯನ್ನು ಗಮನಿಸಿದರೆ, ಆತ ತಾರುಣ್ಯದಲ್ಲಿ ಸೋಮಾರಿಯಾಗಿ ಅಂಡಲೆಯುತ್ತಿದ್ದ, ಸ್ತ್ರೀ ಲಂಪಟ, ಜೂಜುಕೋರನಾಗಿದ್ದ" ಎಂದು ....ತಿಳಿದು ಬರುತ್ತದೆ. ಇಂಥ ದುರ್ವ್ಯಸನಿಯ ಚಾರಿತ್ರ್ಯ –ವಿಚಿತ್ರ ರೀತಿಯಲ್ಲಿ ಕವಲೊಡೆದು ಹೆಮ್ಮರವಾದಂತೆ–ಆತ ವಿಲಕ್ಷಣ ಪರಿಶ್ರಮಿಯಾಗಿ, ಶ್ರೇಷ್ಠ ಸಾಹಿತಿಯಾಗಿ ರೂಪತಳೆದು, ಕಟ್ಟಕಡೆಗೆ ಒಬ್ಬ ಮಹಾನ್ ಚೇತನನಾಗಿ, ಸಂತನಾಗಿ, ಅರಳಿಯಾನೆಂದು ಆ ಕಾಲದಲ್ಲಿ ಯಾರೊಬ್ಬರ ಊಹೆಗೂ ನಿಲುಕಿರಲಾರದು, ಕ್ರಿಶ್ಚಿಯನ್ನರಿಗೆ ಮಾತ್ರವಲ್ಲ, ಅನ್ಯಮತೀಯರಿಗೂ, ದೈವತ್ವದಲ್ಲಿ ನಂಬಿಕೆ ಇರದ ನಾಸ್ತಿಕರು ಕೂಡ, ರಷ್ಯಾದ ಹೊರಗೆ ಯೂರೋಪು, ಅಮೇರಿಕಾ, ಏಷ್ಯಾ ಖಂಡಗಳಲ್ಲೆಲ್ಲಾ, ಆತ ಮಹಾ ಸಾತ್ವಿಕ ಪುರುಷನೆಂದು ಪ್ರಸಿದ್ಧನಾದ. ದೇವನಿರುವನೋ ಇಲ್ಲವೋ ಎಂಬ ಸಂದಿಗ್ಧತೆಯಲ್ಲಿ ತೊಳಲುವವರಿಗೆ ಆತ ಆಶಾಕಿರಣದಂತೆ ರೂಪುಗೊಂಡ. ದುರ್ವ್ಯಸನದಿಂದ ಸಂತನಾಗುವವರೆಗಿನ ಮಧ್ಯಂತರ ಅವಧಿಯಲ್ಲಿ ಇಂದ್ರಿಯಗಳ ದಾಸ್ಯ, ಸುಖಲೋಲುಪತೆಯ ಚಾಪಲ್ಯಗಳನ್ನು ಗೆಲ್ಲುವ, ತನ್ನೊಳಗೆ ತಾನೇ ಸೆಣಸುವ,–ಮನದೊಳಗಿನ ಈ ಕೊನೆಗಾಣದ ದ್ವಂದ್ವಯುದ್ಧದಿಂದ – ಮನಸ್ಸು ಕದಡಿಹೋಯಿತು. ಶಾಂತಿ ತೊಲಗಿಹೋಯಿತು. ಆದಕ್ಕಾಗಿ ಬಿಡುವಿಲ್ಲದಂತಾಗಲು, ಏನಾದರೂ ಕಾರ್ಯಗಳಲ್ಲಿ ತನ್ನನ್ನು ತೊಡಗಿಸಿಕೊಳ್ಳಲು, ಕುಶಲ ರಾಯಭಾರಿಯಾಗಬೇಕೆಂದು ಯೋಚಿಸಿದ. ಪೌರ್ವಾತ್ಯ ಭಾಷೆಗಳನ್ನು ಕಲಿಯಲೋಸುಗ 'ಕಾಜಾನ್ ವಿಶ್ವವಿದ್ಯಾಲಯಕ್ಕೆ ಸೇರಿದ.

ಆದರೆ ತನ್ನ ಮಾತೃ ಭಾಷೆ, ರಷ್ಯನ್ನಷ್ಟೇ ನಿರರ್ಗಳವಾಗಿ, ಫ್ರೆಂಚ್ ಭಾಷೆಯಲ್ಲೂ ಮಾತಾಡಬಲ್ಲ, ಬರೆಯಬಲ್ಲ, ಮೂರೇ ತಿಂಗಳಲ್ಲಿ ಗ್ರೀಕ್ ಭಾಷೆಯನ್ನು ಲೀಲಾಜಾಲವಾಗಿ ವಶಪಡಿಸಿಕೊಂಡ. ಜರ್ಮನ್, ಇಂಗ್ಲಿಷ್, ಇಟಲಿಯನ್ ಭಾಷೆಗಳನ್ನು ಅತಿ ಸುಲಭವಾಗಿ ಕರತಲಾಮಲಕ ಮಾಡಿಕೊಂಡ, ಮಹಾಮೇಧಾವಿ ಟಾಲ್‌ಸ್ಟಾಯ್‌ಗೆ ಯುನಿವರ್ಸಿಟಿಯ ವಿಧಿವತ್ತಾದ ಪಾಠಗಳು ಅತಿ ಮಂದಗತಿಯವೆಂದು, ವ್ಯರ್ಥಕಾಲಯಾಪನೆಯೆಂದು ಬೇಸರ ತಳೆದಿದ್ದರಲ್ಲಿ ಆಶ್ಚರ್ಯವಿಲ್ಲ. ತೂಕಡಿಕೆ ತರುವ ಈ ಅಧ್ಯಯನವೇ ಬೇಡವೆಂದು ನ್ಯಾಯಶಾಸ್ತ್ರದಲ್ಲಿ ಕೌಶಲ್ಯ ಪಡೆಯುವ ಕಡೆಗೆ ಗಮನ ಹರಿಸಿದ. ಆದರೆ ಇಲ್ಲಿಯೂ ಅವನಿಗೆ ಸೋಲಾಯಿತು. ಕಾನೂನು ನೀರಸವಾಯಿತು. ಕಾನೂನಿನ ನಿಬಂಧನೆಗಳಿಗೆ ಮತ್ತು ನೀತಿ, ನ್ಯಾಯ

ಮಾನವೀಯತೆಗಳಿಗೆ, ಪರಸ್ಪರ ಯಾವ ಸಂಬಂಧವೂ ಇಲ್ಲವೆಂದು ಅರ್ಥವಾಯಿತು.

೧೮೫೧ರಲ್ಲಿ ಜೂಜಾಟದಿಂದಾದ ಸಾಲಗಳಿಗಾಗಿ ಆತನನ್ನು ಮಾಸ್ಕೋವಿನಿಂದ ಸರಕಾರ ಹೊರದೂಡಿತು. ಆಗ ಇನ್ನೂ ತರುಣನೇ ಇದ್ದ ಟಾಲ್‌ಸ್ಟಾಯ್ ಸೈನ್ಯಕ್ಕೆ ಸೇರಿದ 'ಕಾಕಸಸ್' ಪರ್ವತಾವಳಿಯ ಸೀಮಾ ಪ್ರದೇಶದಲ್ಲಿ ಟಾರ್ಟರ್ ಗೆರಿಲ್ಲಾಗಳೊಡನೆ ಯುದ್ಧ ಮಾಡುತ್ತಾ ಇದ್ದಂತೆ, ಆ ವನ ಪ್ರಾಂತದ ನಿಸರ್ಗ, ಹಿಮಾವೃತ ಶಿಖರಗಳು, ಉನ್ನತ ಪ್ರದೇಶಗಳಲ್ಲಿ ಬೀಸುವ ಗಾಳಿ, ಒಣಹವೆ, ಆತನ ಹೃದಯದಲ್ಲಿ ಹರ್ಷೋಲ್ಲಾಸಗಳನ್ನು ತುಂಬಿದುವು. ಈ ಭಾವೋತ್ಕರ್ಷದ ಪ್ರತಿಧ್ವನಿ 'ದಿಕಾಸಾಕ್ಸ್' 'ಹಾಜೀಮ್ಯೂರಟ್', ಕಥೆಗಳಲ್ಲಿ ಮೂಡಿ ಅತ್ಯಂತ ಹೃದಯಸ್ಪರ್ಶಿಯಾಗಿ ಓದುಗರ ಹೃದಯದಲ್ಲೂ ಆನಂದಲಹರಿಗಳು ಏಳುವಂತೆ ಸವಿಯುಣಿಸುತ್ತವೆ. ಆದರೆ ಇವು ಆಗಲೇ ಬರೆದವುಗಳಲ್ಲ! ಮತ್ತೆ ಐವತ್ತು ವರ್ಷಗಳ ಬಳಿಕ ಬರೆದವುಗಳು! – ಎಂದರೆ ಅಷ್ಟು ವರ್ಷಗಳೂ, ಆ ನಿಸರ್ಗಸೌಂದರ್ಯವನ್ನು ಜೀವಂತವಾಗಿ, ಪ್ರಕಾಶಮಾನವಾಗಿ, ತಮ್ಮ ಉಸಿರಿರುವವರೆಗೂ ತಮ್ಮ ನರನಾಡಿಗಳಲ್ಲಿ ತುಂಬಿಕೊಂಡಿದ್ದರೆಂಬುದು ವ್ಯಕ್ತವಾಗುತ್ತದೆ.

೧೮೫೪ರಲ್ಲಿ ಕ್ರಿಮಿಯನ್ ಯುದ್ಧ ಸಿಡಿದೆದ್ದಾಗ ಅಪಾಯವನ್ನು ಪ್ರೀತಿಸುವ ತರುಣ ಸೈನ್ಯಾಧಿಕಾರಿ ಲಿಯೋ ಆ ಯುದ್ಧ ಭೂಮಿಗೇ ತನ್ನನ್ನು ವರ್ಗಾಯಿಸಿಕೊಂಡ. 'ಸೆಬಾಸ್ಟೊಪೋಲ್' ಕಥೆಗಳಲ್ಲಿ ಅಂದಿನ ರಷ್ಯನ್ ಸೈನಿಕರ ದುರಂತಮಯ ಶೌರ್ಯ ಸಾಹಸಗಳನ್ನು, ಜತೆಯಲ್ಲೇ ಹೃದಯಹೀನ ಮಹಾದಂಡನಾಯಕರ ಮೂರ್ಖತೆಯನ್ನು ಓದುಗರ ಕಣ್ಮುಂದೆ ಸಾಕ್ಷಾತ್ಕರಿಸಲಾಗಿದೆ. ನಾಲ್ಕೂವರೆ ವರ್ಷಗಳ ಸೈನಿಕ ಕಾರ್ಯಾಚರಣೆಯ ಕಠೋರ ಜೀವನದ ಬಳಿಕ ಮನೆಗೆ ಹಿಂದಿರುಗಿದಾಗ ಲಿಯೋ ೨೭ ವರ್ಷದ ಯುವಕನಾಗಿದ್ದ. ಕಣ್ಣು ಕುಕ್ಕಿಸುವ ಯವ್ವನದ ಮಾಯೆಯಲ್ಲಿ ಭೋಗವಿಲಾಸದ ಜಗತ್ತಿಗೆ ಪಾದಾರ್ಪಣೆ ಮಾಡಿದ. ಆದರೆ ಈ ವ್ಯರ್ಥ ಜೀವನವೂ ವ್ಯರ್ಥವಾಗಲಿಲ್ಲ. ಮುಂದೆ ಆತ ಬರೆದ 'ಯುದ್ಧ ಮತ್ತು ಶಾಂತಿ'ಯಲ್ಲಿ ಯೋಧನೊಬ್ಬನ ಅನುಭವ ಅನಿಸಿಕೆಗಳಲ್ಲಿ ಆತನ ಈ ವ್ಯರ್ಥವೆನಿಸಿದ ಜೀವನವೂ ತೆರೆದುಕೊಂಡಿದೆ.

ಎಂಥೆಂಥ ಮೇಧಾವಿಗಳ ಜತೆ ಅವನ ಒಡನಾಟವಿದ್ದರೂ ಅಂತರ್ಯದಲ್ಲಿ ಆತ ಏಕಾಂಗಿಯಾಗಿಯೇ ಇರುತ್ತಿದ್ದ. ಆತನ ಜ್ಞಾನ, ಅರ್ಥವತ್ತಾದ ಮಾತುಗಾರಿಕೆ, ಹದ್ದಿನಂಥ ಸೂಕ್ಷ್ಮ ಅವಲೋಕನೆ, ಇವುಗಳಿಗೆ ವಿದ್ವಾಂಸರೂ ಅವನೆಡೆಗೆ ಆಕರ್ಷಿತರಾಗುತ್ತಿದ್ದರೂ, ಯಾರೂ ಆತನ ಮನಮೆಚ್ಚುವ ಗೆಳೆಯರಾಗಲಿಲ್ಲ. ನಿಸರ್ಗ ಸೌಂದರ್ಯಾನ್ವೇಷಣೆ ಮಾಡುತ್ತಾ ಫ್ರಾನ್ಸ್, ಜರ್ಮನಿ, ಸ್ವಿಟ್ಜರ್‌ಲೆಂಡ್‌ಗಳಲ್ಲೆಲ್ಲಾ ಸುತ್ತಾಡಿದ. ಆದರೆ ಸದಾಕಾಲ ಮತ್ತು ಕೊನೆತನಕವೂ ಆತ ಮನಸಾರೆ ಮೆಚ್ಚಿದ ನಾಡು, ಅವನ ತಾಯಿನಾಡು; ರಷ್ಯಾ! ಆಲ್ಪ್ಸ್ ಪರ್ವತಾವಳಿಗಳ ಉನ್ನತ ಶಿಖರಗಳಿಂದಲೂ ಹೆಚ್ಚಾಗಿ ರಷ್ಯಾದ ಸ್ಟೆಪ್ಸ್ ಹುಲ್ಲುಗಾವಲು ಆತನ ಚೈತ್ಯವನ್ನು ಉಕ್ಕಿಸುತ್ತಿತ್ತು. ಉತ್ತುಂಗಕ್ಕೆ ಏರಿಸುತ್ತಿತ್ತು!

ಎಲ್ಲಕ್ಕಿಂತಲೂ ಅವನದೇ ಸ್ವಂತ ಆಸ್ತಿ 'ಯೇಸ್ನಾಯೊ ಪೋಲ್ಯೇನಾ' ಅವನ

ಅತ್ಯಂತ ಪ್ರಿಯ ಭೂಮಿಯಾಗಿತ್ತು. ಆದರೆ ಈ ತರುಣ ಕೌಂಟ್ ಹೊಸ ಬಗೆಯ ಜಮೀನುದಾರನಾಗಿದ್ದ. ತನ್ನ ಅಜ್ಞಾನಿ, ಅವಿದ್ಯಾವಂತ, ಆದರೆ ಶ್ರದ್ಧಾಭಕ್ತಿಗಳಿಂದ ತುಂಬಿರುತ್ತಿದ್ದ ಒಕ್ಕಲು ರೈತರ ಮುಂದೆ ಆತ ಅತ್ಯಂತ ವಿನೀತನಾಗಿ ತಗ್ಗಿ ಕುಗ್ಗಿದವನಾಗಿರುತ್ತಿದ್ದ. ಅವರ ಮಕ್ಕಳಿಗಾಗಿ ಶಾಲೆಯೊಂದನ್ನು ತೆರೆದ, ತನ್ನ ಮನೆಯ ಜೀತದಾಳುಗಳನ್ನು, ಗುಲಾಮರನ್ನು ಸ್ವತಂತ್ರಗೊಳಿಸಿದ. ಆತನ ಇಂಥ ಭೂತದಯೆ, ಪರೋಪಕಾರೀ ಗುಣಗಳನ್ನು ಅವಿಶ್ವಾಸದಿಂದ, ಶಂಕೆಯಿಂದ ನೋಡತೊಡಗಿದರು. ಅದುವರೆಗೆ ಯಾವ ಜಮೀನುದಾರರಲ್ಲೂ ಇಂಥ ನಿಸ್ವಾರ್ಥವನ್ನು ಅವರು ಕಂಡಿರಲಿಲ್ಲ. ಆತನ ಆದರ್ಶವಾದ, ಮಹತ್ವಾಕಾಂಕ್ಷೆ, ಏಕಾಂಗಿತನ, ಪಾದರಸದಂತಹ ಚುರುಕುತನ, ಅಪ್ರತಿಮ ಬುದ್ಧಿ ಚಾತುರ್ಯ, ಎಲ್ಲವೂ ಸೇರಿ ಒಂದು ಮಹಾ ಸಂಸ್ಥೆಯಂತೆ ಕೆಲಸ ಮಾಡತೊಡಗಿದ್ದುವು.

ವಿಷಮ ವಿವಾಹ

ನ್ಯಾಯಾಸ್ಥಾನದ ವೈದ್ಯ—ಬೆಹರ್ ಎಂಬುವರಲ್ಲಿಗೆ ಟಾಲ್‌ಸ್ಟಾಯ್ ಆಗಾಗ ಹೋಗಿಬರುತ್ತಿದ್ದ. ವೈದ್ಯರ ಮೂವರು ಹೆಣ್ಣು ಮಕ್ಕಳಿಂದ ಟಾಲ್‌ಸ್ಟಾಯ್ ಆಕರ್ಷಿತನಾದ. 'ಯುದ್ಧ ಮತ್ತು ಶಾಂತಿ' ಕಾದಂಬರಿಯಲ್ಲಿ ಟಾಲ್‌ಸ್ಟಾಯ್‌ಯವರು ಈ ಸುಂದರ ಸಂಸಾರವನ್ನು 'ರೊಸ್ಟೊವ್ ಕುಟುಂಬ'ವೆಂದು ಹೆಸರಿಟ್ಟು ತಮ್ಮದಾಗಿಸಿಕೊಂಡು ಅಮರಗೊಳಿಸಿದ್ದಾರೆ. ಒಂದು ದಿನ ತರುಣ ಲಿಯೋ ವೈದ್ಯರ ಪುತ್ರಿಯರಲ್ಲಿ ಅತ್ಯಂತ ಸುಂದರಿಯಾಗಿದ್ದ ಎರಡನೆಯವಳ ಕೈಗೆ ತನ್ನೊಡನೆ ವಿವಾಹದ ಪ್ರಸ್ತಾಪವನ್ನು ವಿವರಿಸುವ ಪತ್ರವೊಂದನ್ನಿರಿಸಿದ. ಪತ್ರವನ್ನೋದಿ 'ಸೋನ್ಯಾ' ತತ್‌ಕ್ಷಣ ಒಪ್ಪಿಕೊಂಡಳು. ಟಾಲ್‌ಸ್ಟಾಯ್ ಮೂವತ್ತನಾಲ್ಕರ ನಡುಹರೆಯದವ, ಜತೆಗೆ ಹಲವಾರು ಸ್ತ್ರೀಯರಿಂದ ಸುತ್ತುವರಿದಿರುತ್ತಿದ್ದ. ಹಿಂದಿನ ಜೀವನ ಚರಿತ್ರೆಯುಳ್ಳವ. ಆದರೆ ಅವನಿಗೊಲಿದ ಎಳೆಯ ತರುಣಿ ಸೋನ್ಯಾ ಹದಿನೆಂಟರ ಅನಾಘ್ರಾಣಿತ ಕುಸುಮ; ಮುಗ್ಧ ಕನ್ಯೆ. ಇಂಥ ಅಸಮಾನತೆಯಿಂದಾಗಿ ಲಿಯೋ, ತನ್ನ ಎಂದಿನ ಆತ್ಮ ನಿರೀಕ್ಷಣೆಯ ಸ್ವಭಾವದಂತೆ, ಚಿಂತೆಗೀಡಾದ. ಆ ಹುಡುಗಿಯನ್ನು ಮದುವೆಯಾಗುವ ಹಕ್ಕು ಯೋಗ್ಯತೆ, ತನಗಿಲ್ಲವೆಂಬ ಸ್ವೈಚ್ಛಾನುಸಂಧಾನದಲ್ಲಿ ವಿಚ್ಛಿದ್ರಮನಸ್ಕನಾದ, ತನ್ನ ಹಿಂದಿನ ಇತಿಹಾಸವನ್ನು, ತನ್ನ ಅಪರಾಧಗಳನ್ನು ಆಕೆಗೆ ತಿಳಿಯಪಡಿಸುವುದೊಂದೇ ಇದಕ್ಕೆ ಪರಿಹಾರವೆಂದುಕೊಂಡ. ಕಳೆದ ವರ್ಷಗಳಲ್ಲಿ ತಾನು ಬರೆದಿಟ್ಟ ದಿನಚರಿ ಪುಸ್ತಕಗಳನ್ನು ಆಕೆಯ ಕೈಗಿತ್ತು ತನ್ನ ವ್ಯಕ್ತಿತ್ವವನ್ನು ಯಾವ ಮುಚ್ಚುಮರೆ ಇಲ್ಲದೆ ತೆರೆದಿರಿಸಿದ. ಆಕೆಗೆ ಒಮ್ಮೆಗೆ ವಜ್ರಾಘಾತವಾದಂತೆನಿಸಿತಾದರೂ, ವಿಚಲಿತಳಾಗಲಿಲ್ಲ. ಧೀರತೆಯಿಂದ ಆತನನ್ನೇ ವರಿಸುವೆನೆಂದು ಎರಡನೇ ಬಾರಿ ಪ್ರಮಾಣಮಾಡಿದಳು. ಅವರಿಬ್ಬರೂ ವಿವಾಹ ಬಂಧನದಿಂದ ಬಂಧಿತರಾಗಿ ಹೊಸಬಾಳ್ವೆ ಪ್ರಾರಂಭಿಸಿದರು. ಆದರ್ಶ ಅನ್ಯೋನ್ಯತೆಯ ಪರಸ್ಪರ ಭಕ್ತಿ ಆರಾಧನೆಗಳಿಂದ, ಶ್ರದ್ಧಾಪ್ರೇಮಗಳಿಂದ ಸುಖ, ದುಃಖ, ಯಾತನೆಗಳಲ್ಲಿ, ಸಹಭಾಗಿಗಳಾಗಿ ಮುಂದಿನ ನಲವತ್ತೆಂಟು ವರ್ಷಗಳ

ದೀರ್ಘಕಾಲ ದಾಂಪತ್ಯಜೀವನ ನಡೆಸಿದರು. ಅವಳೋ ಕಾರ್ಯಶೀಲೆ; ಆತನೋ ಮಹೋಜ್ವಲ ಸೌಂದರ್ಯದ ಕನಸುಗಾರ! ಪಟ್ಟಣ ಜೀವನದ ಆಡಂಬರೋಲ್ಲಾಸ ಆಕೆಗೆ ಮೆಚ್ಚಿಗೆ. ಹಳ್ಳಿಗಾಡಿನ ನಯ, ನಾಜೂಕಿಲ್ಲದ, ಒರಟು, ಹಳೆಯ ಬಂಗಲೆ ಅವನಿಗೆ ಅಸಹ್ಯ ಹುಟ್ಟಿಸುತ್ತಿತ್ತು. ಟಾಲ್‌ಸ್ಟಾಯ್‌ಗೆ ಅದೇ ಮನೆ ಅತ್ಯಂತ ಪ್ರಿಯ, ಆತ ತನ್ನ ಆಸ್ತಿಕ ಬದುಕನ್ನು ತೆರೆದಿಟ್ಟು, ತೋರಿಸಿದ ರೀತಿ ಅವನ ಎದೆಯಲ್ಲಿ ವಾತ್ಸಲ್ಯದ ಜ್ಯೋತಿಯನ್ನು ಪ್ರಜ್ವಲಗೊಳಿಸುತ್ತಿತ್ತು! ಇಂಥ ವೈರುಧ್ಯಗಳಿದ್ದರೂ, ಆಕೆ ಅವನಿಗಾಗಿ ಹದಿಮೂರು ಮಕ್ಕಳನ್ನು ಹೆತ್ತಳು! ಅವನ ಜಮೀನುದಾರಿಯ ಎಲ್ಲ ಕೆಲಸಕಾರ್ಯಗಳಲ್ಲಿ ಹೆಗಲು ಕೊಟ್ಟು, ಸಮರ್ಥರೀತಿಯಲ್ಲಿ ಆಡಳಿತ ನಡೆಸಿದಳು! ಅಷ್ಟೇ ಅಲ್ಲ, ಮನಃಪೂರ್ವಕವಾಗಿ ನಿಜವಾದ ಅರ್ಧಾಂಗಿನಿಯಂತೆ 'ಯುದ್ಧ ಮತ್ತು ಶಾಂತಿ' ಮಹಾಗ್ರಂಥದ ತಿದ್ದಿ ತೀಡಿದ ಕರಡು ಪ್ರತಿಯ ಸಾವಿರಾರು ಪುಟಗಳನ್ನು ಸ್ವಹಸ್ತದಿಂದಲೇ ಏಳು ಬಾರಿ ಬರೆದು ಪ್ರತಿಮಾಡಿಕೊಟ್ಟಳು.

'ಯುದ್ಧ ಮತ್ತು ಶಾಂತಿ' ಅರ್ಥಾತ್ 'ವಾರ್ ಅಂಡ್ ಪೀಸ್' ಒಂದು ವೀರಕಾವ್ಯ. ೧೮೧೨ರಲ್ಲಿ ರಷ್ಯಾದ ಮೇಲೆ ನೆಪೋಲಿಯನ್ ನಡೆಸಿದ ದಂಡಯಾತ್ರೆಯ ಕಥೆ. ಕಥೆಯಲ್ಲಿ ಚಿತ್ರಿಸಲಾದ ಸುಮಾರು ಎಲ್ಲ ಐನೂರು ಪಾತ್ರಗಳ ಮೇಲೆ ಈ ಮಹಾಚಕ್ರವಾತ ಎಂಥ ಘೋರ ಪರಿಣಾಮ ಬೀರಿತು, ವ್ಯಕ್ತಿಗಳು ಯುದ್ಧದ ಪ್ರವಾಹದಲ್ಲಿ ಹೇಗೆ ಕೊಚ್ಚಿಹೋದರು ಎಂಬೆಲ್ಲ ವಿಚಾರಗಳನ್ನು ಕಣ್ಣೆದುರು ಬಂದು ನಿಲ್ಲುವಂತೆ ಹೃದಯಂಗಮವಾಗಿ ಈ ಗ್ರಂಥದಲ್ಲಿ ವಿವರಿಸಲಾಗಿದೆ. ಯುದ್ಧದ ದೃಶ್ಯಾವಳಿಗಳು, ಚಕ್ರಾಕಾರವಾಗಿ ಪ್ರಚಂಡ ತೂಫಾನಿನಂತೆ ನುಗ್ಗಿ ಬರುವ ಅಶ್ವಪಡೆಗಳು ನಡೆಸುವ ಉತ್ಪಾತಗಳು, ನರಹತ್ಯೆಗಳು, ಶೌರ್ಯಸಾಹಸಗಳು, ಮಾಸ್ಕೋನಗರವು ಉರಿದು ಭಸ್ಮೀಭೂತವಾದದ್ದು, ಕರುಣಾಹೀನ ಕ್ರೂರ ಹಿಮಪಾತವಾಗುತ್ತಿದ್ದಂತೆ, ಫ್ರೆಂಚ್ ಸೇನೆಯ ವಾಪಸಾತಿ, ಎಲ್ಲವೂ ಈ ಹಿಂದೆ ಎಲ್ಲೂ ಹೇಳಿರದಂತಹ, "ಇದಕ್ಕೆ ಸಮನಾದ ಚರಿತ್ರೆ ಹಿಂದೆಯೂ ಇರಲಿಲ್ಲ, ಮುಂದೆಯೂ ಇಲ್ಲ"ವೆಂಬ ರೀತಿಯಲ್ಲಿ ಹೊರಗನ್ನೆಲ್ಲಗುಡಿಸಿ ಬಳಿದು, ಒಳಗಣ ಬಣ್ಣವನ್ನು ತೆರೆದು ತೋರಿಸಿದಂತೆ, ಬರೆಯಲಾಗಿದೆ—ಈ ಕಥಾನಕ! ಈ ರಾಷ್ಟ್ರೀಯ ದುರಂತ ನಾಟಕದೊಳಗೆ ಹೊಸೆದು ನೇಯಲಾದ ಪಾತ್ರಗಳ ವೈಯಕ್ತಿಕ ಗಾಥೆಗಳು ಓದುಗರನ್ನು ಸಮವೇದನೆಯ ಆಳಕ್ಕೆ, ಸಹಾನುಭೂತಿಯ ಪರಾಕಾಷ್ಠೆಗೆ, ಸೆಳೆದೊಯ್ಯುತ್ತವೆ. ಏಕೆಂದರೆ ಟಾಲ್‌ಸ್ಟಾಯ್‌ಯವರ ಸಾಮರ್ಥ್ಯ ಅಂತಹದು. ಇತರರ ಅಂತರಾತ್ಮದೊಳಕ್ಕೆ ಪ್ರವೇಶಿಸಬಲ್ಲ—ಗಾಜಿನ ಗೋಲಕದೊಳಗನ್ನು ಸುಸ್ಪಷ್ಟವಾಗಿ ಹೊರಗಿಂದಲೇ ತಿಳಿಯಲಾಗುವಂತೆ ವ್ಯಕ್ತಿಗಳ ಹೃದಯದೊಳಗನ್ನು, ಅಂತರ್ಯದ ಅತಿಸೂಕ್ಷ್ಮ ಎಳೆಗಳನ್ನೂ ಕಾಣಬಲ್ಲ—ಮಹಾಮೇಧಾವಿ! ಟಾಲ್‌ಸ್ಟಾಯ್‌ಯವರ ನಾದಿನಿ ಎಳೆ ತರುಣಿ ತಾನ್ಯಾ—ಕಾದಂಬರಿಯ ನಾಯಕಿ ಮನೋಹಾರಿಣಿ ಸುರಸುಂದರಿ ನಟಾಶಾಳ ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸಿದ್ದನ್ನು ಓದಿ ಆಶ್ಚರ್ಯಚಕಿತಳಾದಳು, "ನೀವು ಜಮೀನ್ದಾರರ, ಸೈನಿಕರ, ದಂಡ

ನಾಯಕರ, ತಂದೆಯರ, ಭಾವನೆ, ಸ್ವಭಾವ ಗಳನ್ನು ವಿವರಿಸುವುದೇನೋ ಸಹಜವಾಗಿದೆ. ಆದರೆ, ಪ್ರೇಮಪಾಶಕ್ಕೊಳಗಾದ ತರುಣಿ ಯೊಬ್ಬಳ ಅರ್ಥಾತ್ 'ನಟಾಶಾ'ಳ ಹೃದಯ ದಾಳಕ್ಕೆ ಹೇಗೆ ಇಳಿದಿರೋ, ಅವಳ ಭಾವ ತರಂಗಗಳನ್ನು ಹೇಗೆ ಅರ್ಥಮಾಡಿ ಕೊಂಡಿರೋ, ನನಗೆ ಅರ್ಥವಾಗುತ್ತಿಲ್ಲ." ಎಂದು ತನ್ನ ವಿಸ್ಮಯವನ್ನು ವ್ಯಕ್ತಪಡಿಸಿ ದಳು.

ನೈತಿಕಬಲ

ಈ ಬೃಹತ್ ಕಾದಂಬರಿ ಪೂರ್ಣ ಗೊಳ್ಳಲು ಪೂರ್ತಿ ಏಳು ವರ್ಷಗಳು ಬೇಕಾದುವು. ಇದೊಂದು ಟಾಲ್‌ಸ್ಟಾಯ್ ಯವರ ಸಾಹಿತ್ಯಾತ್ಮಕ ಮಹಾವಿಜಯ ವೆನ್ನಿಸಿತು ಇದು ಮುದ್ರಿತವಾದ ತಕ್ಷಣವೇ ಅತ್ಯಂತ ಜನಪ್ರಿಯವಾಯಿತು. ಹಲವಾರು ಭಾಷೆಗಳಲ್ಲಿ ಇದು ತರ್ಜುಮೆಗೊಂಡಿತು. ಇಂದು ಸುಸಂಸ್ಕೃತ ಜಗತ್ತಿನ ಎಲ್ಲ ಭಾಷೆಗಳಲ್ಲೂ ಭಾಷಾಂತರಗೊಂಡಿದೆ. ಟಾಲ್‌ಸ್ಟಾಯ್‌ಯವರ ಅಭಿಪ್ರಾಯದಲ್ಲಿ ಜನರ ಹೊಗಳಿಕೆಗೆ ಸಂತೋಷಪಡುವುದೂ ಒಂದು ಪಾಪವಾಗಿದಂತೆ! ಅವರ ಸಂತಸವು —'ಯೇಸ್ನಾಯಾ ಪೋಲ್ಯೇನಾದಲ್ಲಿ ವೈಭವ ರಹಿತ ಸರಳಜೀವನದಲ್ಲಿತ್ತು; ಬಯಲಲ್ಲಿ ಮಕ್ಕಳ ಜತೆ ಆಟವಾಡುವುದು, ಕುದುರೆ ಸವಾರಿ, ಬೇಟೆಯಾಡುವುದು, ತನ್ನ ತುಂಬಿದ ಸಂಸಾರದ ಜತೆ ಚಳಿಗಾಲದ ಮುಸ್ಸಂಜೆ ಸಾಮೋವಾರ್ ಚಹಾಕೂಟ, ವಸಂತದಲ್ಲಿ ಹಸುರೊಡೆಯುವ ಬರ್ಚ್‌ಮರಗಳ ಚಿಗುರೆಲೆ ಗಳಲ್ಲಿ, ಹೊಂಬಣ್ಣದ ಶಾಂತಿಯ ತೆನೆ ತುಂಬಿದ ಹೊಲಗದ್ದೆಗಳ ಕೊಯಿಲಿನ ಉಲ್ಲಾಸದಲ್ಲಿ ಇಂಥ ಮುಂತಾದ ಸರಳ ಸುಂದರ ಸಮಯಗಳಲ್ಲಿ—ಅರಳಿ ವೈತುಂಬು ತ್ತಿತ್ತು, ಇಲ್ಲಿಯೇ ಅವರ ಕಥಾಕಲ್ಪನೆಯು ಮೊಳಕೆಯೊಡೆದು ಬೇರುಗಳನ್ನು ನೆಲ ಕ್ಕೂರುತ್ತಿತ್ತು. ಅವರ ಇನ್ನೊಂದು ಕಥಾ ಪುಷ್ಪ ಇಲ್ಲಿಂದಲೇ ಚಿಮ್ಮಿ ಅರಳಿತು— ಇನ್ನೊಂದು ಬೃಹತ್ ಕಾದಂಬರಿ— 'ಅನ್ನಾಕರೇನಿನಾ!' ವೈವಾಹಿಕ ಪ್ರೇಮ ಬಂಧನ, ಒಂದೆಡೆ ಹಳ್ಳಿಯ ಜೀವನ, ಇನ್ನೊಂದೆಡೆ ಸಭ್ಯರೆಂದು ಹೇಳಿಕೊಳ್ಳುವ ಸೊಗಸುಗಾರ ನಗರವಾಸಿಗಳ ವ್ಯಭಿಚಾರದ ಮೋಹ, ಮನೋವಿಕಾರಗಳು! ನೀತಿ, ಅನೀತಿಗಳ ಪರಸ್ಪರ ಸಂಘರ್ಷಗಳು, ಇವನ್ನೆಲ್ಲ ಕ್ರೋಡೀಕರಿಸಿ, ಓದುಗರನ್ನು ತನ್ಮಯಗೊಳಿಸುವಂಥ, ಪುಸ್ತಕ.

ಕಥಾಕಲ್ಪನೆ ಟಾಲ್‌ಸ್ಟಾಯ್‌ರಲ್ಲಿ ದೈವದತ್ತವಾಗಿದ್ದರೂ, ನೈತಿಕಬಲ ಅದ ಕ್ಕಿಂತಲೂ ಉನ್ನತವಾಗಿತ್ತು. ಅವರ ಹಿಂದುಳಿಯುವ, ಸೋಲಬೇಕಾಗಿ ಬರುವ ಪ್ರತಿಘಟನೆಯ ಹಿನ್ನೆಲೆಯಲ್ಲಿ ಅವರ ಹೃದಯ ಆತ್ಮಗ್ಲಾನಿಯಿಂದ ಜರ್ಜರಿತ ವಾಗಿರುತ್ತಿತ್ತು, ಇತರರ ದುಃಖ, ಸಂಕಟ ಗಳಲ್ಲಿ ಇನ್ನೂ ಹೆಚ್ಚು ಯಾತನೆಯನ್ನು ಅನುಭವಿಸುತ್ತಿದ್ದರು. ಇಂದಿನಂತೆಯೇ ಆಗಲೂಕೂಡ, ರಷ್ಯಾದ ಅರಸರ ಅರ್ಥಾತ್ 'ಝಾರ್'ರ ರಾಜ್ಯಾಡಳಿತದಲ್ಲಿಯೂ ಯೂರೋಪ್ ಖಂಡದ ಇತರ ದೇಶಗಳಿಂದ ಎಷ್ಟೋ ಹೆಚ್ಚಿನ ಅನ್ಯಾಯ ನಡೆಯು ತ್ತಿತ್ತು. ಪ್ರಜಾಪೀಡನೆ ಕಲ್ಪನೆಗೂ ಮೀರಿ ಘೋರವಾಗಿತ್ತು. ಜನರ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಆಗಷ್ಟೆ ಪ್ರಸಿದ್ಧನಾಗಿದ್ದ ಲೇಖಕ ಟಾಲ್‌ಸ್ಟಾಯ್ ಹಲವುಜಾ

ಗೊಳಗಾದ. "ಆಳುವವರನ್ನು ಅಥವಾ ಅಧಿಕಾರಿ ವರ್ಗಗಳನ್ನು ಟೀಕಿಸುವುದು, ಆಳುವವರ ದೃಷ್ಟಿಯಿಂದ ರಾಜಕೀಯ ಅಪರಾಧವೆನಿಸಿದರೆ, ಅದು ಜನತೆಯ ತಪ್ಪಲ್ಲ! ಜನ ಎಚ್ಚರದಿಂದಿದ್ದಾರೆ, ಬುದ್ಧಿವಂತರಿದ್ದಾರೆ, ಸ್ವಸ್ಥ ನಾಗರೀಕರಿದ್ದಾರೆ, ಎಂಬುದರ ನಿದರ್ಶನ! ಅನ್ಯಾಯಗಾರರನ್ನು ಟೀಕಿಸುವುದು ಜನತೆಯ ನ್ಯಾಯಬದ್ಧ ಹಕ್ಕು" ಎಂಬುದಾಗಿ ಟಾಲ್‌ಸ್ಟಾಯ್ ಅಂದಿನ ಆ ಕಾಲದಲ್ಲೇ ಸಾರಿದರು. ಜನತೆಯ ವಾಕ್ ಸ್ವಾತಂತ್ರ್ಯಕ್ಕಾಗಿ ಸಮರೋಪಾದಿಯಲ್ಲಿ ಕಾರ್ಯಕ್ರಮ ಕೈಗೊಂಡರು. ಅವರ ಇಂಥ ಪ್ರಗತಿಪರ ಅಭಿಪ್ರಾಯಗಳನ್ನು ಪ್ರತಿಪಾದಿಸುವ ನಾಟಕ, ಕಥೆ, ಕಾದಂಬರಿಗಳನ್ನು ಸರಕಾರ ಬಹಿಷ್ಕರಿಸಿತು ಆದರೆ ಅವುಗಳೆಲ್ಲಾ ಯೂರೋಪಿನ ಇತರ ಭಾಷೆಗಳಿಗೆ ಭಾಷಾಂತರಗೊಂಡು ಮುದ್ರಿಸಲ್ಪಟ್ಟವು. ಸಾವಿರಾರು ರಷ್ಯನರು ಅವುಗಳನ್ನು ರಷ್ಯನ್ ಭಾಷೆಗೆ ಪುನಃ ಭಾಷಾಂತರಿಸಿ, ಅವುಗಳ ಹಸ್ತಪ್ರತಿಗಳನ್ನು ತಯಾರಿಸಿ ಗುಟ್ಟಾಗಿ ಜನರಿಗೆ ಹಂಚಿದರು!

ಟಾಲ್‌ಸ್ಟಾಯ್ ಜನತೆಯಮೇಲೆ ಕೇವಲ ಒಂದು ತೆರಿಗೆ ವಿಧಿಸುವುದು ಸರಿಯಾದ ಕ್ರಮವೆಂದು ವಾದಿಸಿದರು. ಅದೇ ಭೂಕಂದಾಯ. ರಷ್ಯಾದಲ್ಲೆಲ್ಲಾ ವಿಶಾಲವಾದ ಭೂಮಿಯ ಸ್ವಾಮಿತ್ವವೇ ಶ್ರೀಮಂತಿಕೆಯ ದ್ಯೋತಕವಾಗಿತ್ತು. ಈ ಏಕೈಕ ತೆರಿಗೆಯು ಭೂಮಾಲಿಕರನ್ನು ತಮ್ಮ ಭೂಮಿಯಲ್ಲಿ ದುಡಿಯುತ್ತಿರುವ ರೈತ ಸಮುದಾಯಕ್ಕೆ ಭೂಮಿಯನ್ನು ಹಂಚಿಕೊಡುವಂತೆ ಒತ್ತಡ ತರುವುದೆಂದು ಟಾಲ್‌ಸ್ಟಾಯರ ಅಭಿಪ್ರಾಯ ಮತ್ತು ವಿಶ್ವಾಸವೂ ಆಗಿತ್ತು. ಆದರೆ ಈ ಪ್ರತಿಪಾದನೆಯಿಂದಾಗಿ ರಷ್ಯಾದ ಅರಸ 'ಝಾರ್', ಆತನ ಸರಕಾರ, ಮತ್ತು ರೈತರ ಮೇಲೆ ದಬ್ಬಾಳಿಕೆ ನಡೆಸುತ್ತಿರುವ ಟಾಲ್‌ಸ್ಟಾಯ್‌ಯವರದೇ ವರ್ಗದ ಭೂಮಾಲಿಕರು, ಭಯಾಶ್ಚರ್ಯ ಮತ್ತು ಕೋಪತಾಪಗಳಿಂದ ಟಾಲ್‌ಸ್ಟಾಯ್‌ರ ಮೇಲೆ ಬೆಂಕಿಕಾರತೊಡಗಿದರು.

ಧಾರ್ಮಿಕ ಸತ್ಯಾನ್ವೇಷಣೆಯ ನಿರಂತರ ಪರಿಶ್ರಮನಡೆಸುತ್ತಿದ್ದಾಗ ಟಾಲ್‌ಸ್ಟಾಯ್ ಒಂದು ಕಾಲದಲ್ಲಿ ರಷ್ಯದ ಸಂಪ್ರದಾಯಬದ್ಧ ಚರ್ಚಿನ ಕಡೆಗೆ ಗಮನಹರಿಸಿದ್ದರು. ಪುರಾತನ ಪ್ರತಿಮೆಗಳು, ಫಳಫಳಿಸುವ ಗಾಜಿನ ಚಿತ್ರಗಳು, ನಕ್ಷೆಗಳು ಉರಿಯುವ ಮೇಣದ ಬತ್ತಿಗಳು, ಅಗರು, ಧೂಪಗಳು, ಧಾರ್ಮಿಕತೆಯಲ್ಲ! ಸತ್ಯವನ್ನು ಪ್ರಕಾಶಿಸುವುದಿಲ್ಲ. ಚರ್ಚಿನ ಈ ತೆರನಾದ ಬಾಹ್ಯಾಡಂಬರಗಳಿಂದ ಒಬ್ಬ ವ್ಯಕ್ತಿ ನಿಜವಾದ ಕ್ರಿಶ್ಚಿಯನ್ ಆಗುವುದು ಶಕ್ಯವಿಲ್ಲ!" ಎಂದು ಅವರಿಗೆ ಮನದಟ್ಟಾಯಿತು. ಸಂಪ್ರದಾಯದ ಡಂಭಾಚರಣೆಗಳ ಉನ್ನತ ಸ್ಥಾನಮಾನಗಳ ಘನಸ್ತಿಕೆಗಳ, ಮುಸುಕಿನಲ್ಲಿರುವ ಚರ್ಚಿನ ಪಾದ್ರಿಗಳು ತೀರ ಅಜ್ಞಾನದ ಕಗ್ಗತ್ತಲೆಯಲ್ಲಿ ಮುಳುಗಿದ್ದಾರೆ" ಎಂಬುದಾಗಿ ಅವರು ಜಗತ್ತಿಗೆ ಸಾರುವ ಧೀರತೆಯನ್ನು ತೋರಿದರು. "ದೇವರ ರಾಜ್ಯ" ಎಂಬುದು ಇನ್ನೆಲ್ಲೂ ಇಲ್ಲ. ನಿಮ್ಮ ಹೃದಯದೊಳಗೇ ಇದೆ" ಎಂಬುದಾಗಿ ಅವರು ಉಚ್ಚಸ್ವರದಿಂದ ಘಂಟಾಘೋಷವಂತೆ ಕೂಗಿ ಹೇಳಿದರು. ಇದರಿಂದಾಗಿ ಅವರು ಚರ್ಚಿನ ಪದಾಧಿಕಾರಿಗಳ ಕಟುಟೀಕೆಗೊಳಗಾದರು.

ಕಾಲ ಉರುಳಿದಂತೆ ಟಾಲ್‌ಸ್ಟಾಯ್‌ರಿಗೆ ಏಸುಕ್ರಿಸ್ತನ ಉಪದೇಶಗಳಲ್ಲಿ ಆಸ್ತೆ ಬೆಳೆ

ಯಿತು. ತನ್ನ ಬದುಕಿನಲ್ಲೂ ಅವುಗಳನ್ನು ಕಾರ್ಯರೂಪಕ್ಕಿಳಿಸಲು ಪ್ರಯತ್ನ ಹೆಚ್ಚಿತು. ಯೇಸು ಶಿಲುಬೆಯಿಂದೆದ್ದು ಬೆಟ್ಟದ ತುದಿಯಲ್ಲಿ ತನ್ನ ಶಿಷ್ಯರಿಗಾಗಿ ಉಪದೇಶಿಸಿದ ಮಾತುಗಳಲ್ಲಿ ವಿಶೇಷವಾದ ನಂಬುಗೆಯುಂಟಾಯಿತು. ಅವರಂತೆ 'ಹಿಂಸೆಗೆ, ದೌರ್ಜನ್ಯಕ್ಕೆ ಪ್ರತಿಯಾಗಿ ವಿರೋಧ, ಪ್ರತಿಭಟನೆ ನಡೆಸಬಾರದೆಂಬ' ನಿಲುವಿಗೆ ಟಾಲ್‌ಸ್ಟಾಯ್ ಬಂದು ಮುಟ್ಟಿದರು. ಎಲ್ಲ ರೀತಿಯ ಹಿಂಸೆ ಮತ್ತು ಪ್ರತಿರೋಧಗಳು ಕ್ರಿಸ್ತವಾಣಿಗೆ ವಿರೋಧವೆಂದು ಅವರು ಸಾರತೊಡಗಿದರು. ಒಂದು ಕಾಲದಲ್ಲಿ ವೀರಸೈನಿಕನಾಗಿ, ಸೈನ್ಯಾಧಿಕಾರಿ ಆಗಿದ್ದ ಲಿಯೋ ಸೇನೆಯಿಂದಲೂ ವಿರೋಧವನ್ನೆದುರಿಸಬೇಕಾಯಿತು. ಝಾರ್, ಚರ್ಚ್ ಮತ್ತು ಸೇನೆ ಇವರೆಲ್ಲರ ಪ್ರತಿರೋಧಗಳಿದ್ದಾಗಲೂ ಅವರು ಬದುಕಿ ಉಳಿದುದು ಅವರ ಬರವಣಿಗೆಯು ವಿಶ್ವದಾದ್ಯಂತ ಬೀರಿದ ಪ್ರಭಾವದಿಂದ! ರಷ್ಯಾ ದೇಶಕ್ಕೇ ಕೀರ್ತಿ ತಂದ ಯುಗಪುರುಷ ಟಾಲ್‌ಸ್ಟಾಯ್‌ರನ್ನು ಹುತಾತ್ಮರಾಗಿಸುವ ದುಷ್ಟಸಾಹಸಗೈವ ಸಾಮರ್ಥ್ಯ ಅಧಿಕಾರ ವರ್ಗಕ್ಕಿರಲಿಲ್ಲ.

ಪ್ರಗತಿಪರ ಸುಧಾರಣೆಗಳು

ಮುಂದೆ ವರ್ಷಗಳುರುಳಿದಂತೆ, ನರೆತ ಗಡ್ಡ ಮೀಸೆಗಳ, ಹಿಮದಂತೆ ಬಿಳುಪೇರಿದ ದಟ್ಟಕೂದಲ, ಆಳವಾಗಿ ಗುಳಿಬಿದ್ದ ಕಂಗಳ ತೀಕ್ಷ್ಣನೋಟದ ಈ ವೃದ್ಧ ದಾರ್ಶನಿಕನನ್ನು ಕಾಣಲು ದೂರದೂರದ ದೇಶಗಳಿಂದ ಸಂದರ್ಶಕರು ಗುಂಪುಗುಂಪಾಗಿ ಬರತೊಡಗಿದರು. ಅಸಂಖ್ಯ ಜನ ಅವರ ಜತೆ ಪತ್ರವ್ಯವಹಾರ ನಡೆಸತೊಡಗಿದರು. ಅಂಥವರಲ್ಲೊಬ್ಬರ ಹೆಸರು ಎಂ. ಕೆ. ಗಾಂಧಿ. ಭಾರತದಲ್ಲಿ ರೂಪು ಪಡೆಯುತ್ತಿದ್ದ ಭಾವೀ ಸಂತ ಮಹಾತ್ಮಾ ಟಾಲ್‌ಸ್ಟಾಯ್‌ಯವರಿಂದ ಕ್ರಿಸ್ತನ ಬಗ್ಗೆ ಹಲವಾರು ವಿಚಾರಗಳನ್ನು ತಿಳಿದುಕೊಂಡರು. ಮುಖ್ಯವಾಗಿ ಹಿಂಸೆಯ ವಿರುದ್ಧ ನಿಷ್ಕ್ರಿಯನಾಗಿದ್ದು ಸಹಿಸಿಕೊಳ್ಳುವುದರಿಂದ ಹೆಚ್ಚುವ ಅಂತರಿಕ ಶಕ್ತಿ ಸಾಮರ್ಥ್ಯದ ಬಗ್ಗೆ ಗಾಂಧೀಜಿಯವರಲ್ಲಿದ್ದ ಅಭಿಪ್ರಾಯಕ್ಕೆ ಪುಷ್ಟಿ ನೀಡಿದವರು ಟಾಲ್‌ಸ್ಟಾಯ್.

ಗಾಂಧೀಜಿಯವರಂತೆ ಟಾಲ್‌ಸ್ಟಾಯ್ ಕೂಡ ಗ್ರಾಮಮಟ್ಟದಲ್ಲಿ ಸುಧಾರಣೆಗಳನ್ನು ತರುವಂಥ–ಅಂದಿನ ರಾಜ್ಯಾಡಳಿತದಲ್ಲಿ ಅಪಾಯಕಾರೀ ಎನಿಸಬಹುದಾದಂಥ–ಕೃತ್ಯಗಳಲ್ಲಿ ಉಪಕ್ರಮಿಸಿದರು. ರೈತ ಮಕ್ಕಳಿಗಾಗಿ ನಿರ್ಮಿಸಿದ ತಮ್ಮ ಶಾಲೆಯಲ್ಲಿ ಶಿಕ್ಷಣದ ಅತ್ಯಂತ ಕ್ರಾಂತಿಕಾರಿ ಬದಲಾವಣೆಗಳನ್ನು, ತಮ್ಮ ಪ್ರಗತಿಪರ ಸಿದ್ಧಾಂತಗಳನ್ನು, ಕಾರ್ಯರೂಪಕ್ಕೆ ತಂದು ಅದರಿಂದ ಹೆಚ್ಚುವ ಪ್ರಯೋಜನಗಳನ್ನು ಪ್ರಕಾಶಪಡಿಸಿದರು. ವಿದ್ಯಾರ್ಥಿಯೊಬ್ಬ ತನ್ನದೇ ಆದ ಒಂದು ಯೋಜನೆ ಅಥವಾ ಉದ್ಯೋಗದಲ್ಲಿ ತೊಡಗುವ ಸಾಮರ್ಥ್ಯ ತೋರಿದರೆ, ಆತ ಶಾಲಾ ಪಾಠಗಳ ಕಡೆಗೆ ಗಮನ ಹರಿಸಬೇಕಾಗಿಲ್ಲ. ಯಾವನೊಬ್ಬ ಎಳೆಯ ತರುಣ 'ಹೊರವಲಯದಲ್ಲಿ ತನ್ನ ಕಾರ್ಯಕ್ಷೇತ್ರ' ಎಂದು ಭಾವಿಸುವುದಾದರೆ, ಅಂಥವನಿಗೆ ಅವನಿಚ್ಛೆಯಂತೆ ಮಾಡಲು ಅವಕಾಶ ನೀಡಬೇಕು. ಇದಕ್ಕಾಗಿ ಶಾಲೆಗಳಲ್ಲಿ ಕಲಿಯಲು ನಿಶ್ಚಯವಾಗಿದ್ದ ರಷ್ಯನ್ ಮತ್ತು ಯುರೋಪ್ಯ

ಪಠ್ಯಪುಸ್ತಕಗಳನ್ನು ಬದಲಾದ ಜಗತ್ತಿನಲ್ಲಿ ನಿರರ್ಥಕವೆಂದು, ವ್ಯರ್ಥ ಆಯಾಸ, ಬೇಸರತರುವಂಥವುಗಳೆಂದು ಹರಿದೊಗೆದು, ವರ್ತಮಾನಕಾಲಕ್ಕೆ ಉಪಯುಕ್ತವಾಗಬಲ್ಲ, ಸಂಯುಕ್ತ ಅಮೇರಿಕದಲ್ಲಿ ಹೊಸತಾಗಿ ಪ್ರಚಲಿತವಾಗಿರುವ ಪುಸ್ತಕಗಳನ್ನು ಶಿಕ್ಷಣಕ್ಕೆ ಆಯ್ದುಕೊಂಡರು. ಸಾರ್ವಜನಿಕ ಶಿಕ್ಷಣದ ಅಧಿಕಾಧಿಕಾರಿಗಳು ಈ ಬದಲಾವಣೆಯನ್ನು ಪರಿಶೋಧಿಸಿದರಷ್ಟೇ ಅಲ್ಲ, ಟಾಲ್‌ಸ್ಟಾಯ್‌ರ ಶಾಲೆಯನ್ನೇ ಮುಚ್ಚಿಸಿಬಿಟ್ಟರು. ಟಾಲ್‌ಸ್ಟಾಯ್ ಯವರು ತಾವು ಆಲಿಂಗಿಸಿದ ಕ್ರೈಸ್ತ ತತ್ವಕ್ಕನುಗುಣವಾಗಿ, ಶಾಲೆಗಾಗಿ ಹೋರಾಡದೆ ಸುಮ್ಮನೆ ಬಿಟ್ಟುಕೊಟ್ಟರು. "ತಮ್ಮ ಅಭಿಪ್ರಾಯಗಳು ಒಂದಲ್ಲ ಒಂದು ದಿನ ಸರ್ವಸಮ್ಮತವಾಗಬಲ್ಲುವು; ತನ್ನ ಜೀವಿತಕಾಲದಲ್ಲಿಲ್ಲವಾದರೆ ಹೋಗಲಿ, ಮರಣಾನಂತರವಾದರೂ ತಮ್ಮ ಪ್ರತಿಪಾದನೆಗಳಿಗೆ ಮೇಲುಗೈಯಾಗುವುದು ನಿಶ್ಚಿತ" ಎಂಬುದು ಅವರಿಗೆ ಗೊತ್ತಿತ್ತು.

'ಕ್ರಿಸ್ತನ ನೀತಿ ಸಿದ್ಧಾಂತಗಳನ್ನು ಯಥಾರ್ಥವಾಗಿಯೆ ಅನುಷ್ಠಾನಕ್ಕೆ ತರಬೇಕಿದ್ದಲ್ಲಿ, ಇಷ್ಟಭೋಗ, ಸುಖ ಸೌಭಾಗ್ಯಗಳನ್ನು, ಆರೋಗ್ಯ ಸಂಪತ್ತುಗಳನ್ನು ನಿರ್ಲಕ್ಷಿಸುವುದು ಅಗತ್ಯವಷ್ಟೆ?' ಈ ರೀತಿಯಲ್ಲಿ ಅವರಲ್ಲುಂಟಾದ ಬದಲಾವಣೆಗಳಿಂದ, ಅವರ ಸಮೀಪವರ್ತಿಗಳಿಗೆ ಅವರನ್ನು ಪ್ರೀತಿಸುವ ಮನೆಮಂದಿಗೆಲ್ಲ, ಕಠಿಣಪರಿಸ್ಥಿತಿ ಏರ್ಪಟ್ಟಿತು. ಟಾಲ್‌ಸ್ಟಾಯ್ ಆಧ್ಯಾತ್ಮದೆಡೆಗೆ ಸಾಗಿದಂತೆಲ್ಲ, ಸೋನ್ಯಾ ವ್ಯಾವಹಾರಿಕಳಾಗುತ್ತ ಬರುವುದು ಅನಿವಾರ್ಯವಾಯಿತು. ಅವಳ ಗಂಡು ಮಕ್ಕಳ ಯುಕ್ತ ವಿದ್ಯಾಭ್ಯಾಸ, ಹೆಣ್ಣು ಮಕ್ಕಳನ್ನು ಮಾಸ್ಕೋವಿನ ಪ್ರತಿಷ್ಠಿತ ಸಮಾಜಕ್ಕೆ ಸೇರಿಸುವುದು, ಗಂಡನ ವ್ಯವಹಾರಗಳನ್ನು ಸುವ್ಯವಸ್ಥಿತಗೊಳಿಸಿ ನಿರ್ವಹಿಸುವುದು, ಇತ್ಯಾದಿಗಳೆಲ್ಲ ಅವಳ ಹೊಣೆಗಾರಿಕೆಯಾಯಿತು.

ಟಾಲ್‌ಸ್ಟಾಯ್ ಒಬ್ಬ ಬಡರೈತನಂತೆ ಹಳೆಯದಾದೊಂದು ಒಳಅಂಗಿಯನ್ನು ಮಾತ್ರ ಧರಿಸಿಕೊಂಡು, ಪ್ರವಾದಿಯಂತೆ ಕಾಣುವ ಬಿಳಿಯಗಡ್ಡ ಮೀಸೆಗಳೊಂದಿಗೆ ತನ್ನ ಯೇಸ್ನಾಯಾಪೋಲ್ಯಾನಾದಲ್ಲಿ ಪಾದಚಾರಿಯಾಗಿ ಸುತ್ತಾಡುತ್ತಾ, ಪ್ರಕೃತಿಯ ಸಹಜ ಸೌಂದರ್ಯವನ್ನು ಆಸ್ವಾದಿಸುವುದರೊಂದಿಗೆ ಆಧ್ಯಾತ್ಮ ಲೋಕದಲ್ಲಿ ವಿಹರಿಸುತ್ತಾ ಇರತೊಡಗಿದರು. ಸರಳತೆಯ ಅನುಷ್ಠಾನದಲ್ಲಿ ಸಂಘರ್ಷ ಪೂರ್ಣ ಅಂತರಂಗ ಶೋಧನೆ ಮಾಡುತ್ತಿದ್ದಂತೆ, ಐಶ್ವರ್ಯ, ಆಸ್ತಿಪಾಸ್ತಿಗಳ ಅನುಭೋಗ, ಒಡೆತನಗಳು, ತಮ್ಮ ನಂಬಿಕೆ, ಧ್ಯೇಯಗಳಿಗೆ ಪೂರ್ಣ ವಿರೋಧವಾಗಿವೆಯೆಂದು, ಕಂಡುಕೊಂಡರು. ಅದಕ್ಕಾಗಿ, ತಮ್ಮ ಸ್ವಾಮಿತ್ವವಿರುವ ಎಲ್ಲ ಸ್ಥಿರಾಸ್ತಿಗಳನ್ನು ಭಾಗಮಾಡಿ ತನ್ನ ಕುಟುಂಬದ ಸದಸ್ಯರಿಗೆ ಹಂಚಿಕೊಟ್ಟರು. ಬಹಳ ಆದಾಯ ತರುತ್ತಿದ್ದ ತಮ್ಮ ಗ್ರಂಥಗಳ ಪ್ರಕಾಶನದ ಹಕ್ಕಿನ ಹೆಚ್ಚಿನಂಶವನ್ನು ಸಾರ್ವಜನಿಕ ಸಂಸ್ಥೆಗಳಿಗೆ ದಾನವಾಗಿ ಬಿಟ್ಟುಕೊಟ್ಟರು. ತಮ್ಮ ಹೊಟ್ಟೆಪಾಡಿಗಾಗಿ ಹಿಮದಂತೆ ಬಿಳುಪೇರಿದ ತಲೆಯನ್ನು ಬಗ್ಗಿಸಿ ಬಡಸಮಗಾರನಂತೆ ಪಾದರಕ್ಷೆಗಳನ್ನು ಹೊಲಿಯತೊಡಗಿದರು. ಟಾಲ್‌ಸ್ಟಾಯ್‌ಯವರ ಪತ್ನಿ ಅತ್ತುಕರೆದಳು. ಇಂಥ ಕೆಲಸ ಬೇಡ

ವೆಂದು ಬೇಡಿಕೊಂಡಳು. ಮತ್ತೆ ಗದರಿಸಿದಳು, ಸಿಟ್ಟಿನಿಂದ ಕೂಗಾಡಿದಳು. ಇಬ್ಬರ ನಡುವಿನ ಸಂಬಂಧ ಅಸಹನೀಯವಾಯಿತು. ಹೆಂಡತಿಯಿಂದ ತಪ್ಪಿಸಿಕೊಳ್ಳಲಿಕ್ಕಾಗಿ ಭೀಕರ ಚಳಿಗಾಲದ ಒಂದು ದಿನ, ಸದ್ದು ಮಾಡದೆ ತನ್ನ ಆಪ್ತ ವೈದ್ಯರ ಜತೆ ಮನೆಯಿಂದ ಹೊರಟುಹೋದರು. ವಿಷಯವರಿತ ಮಗಳು ಅಲೆಗ್ಸಾಂಡ್ರಾ ಕೂಡ ಹೊರಟು ಮಾರ್ಗ ಮಧ್ಯದಲ್ಲಿ ತಂದೆಯ ಜತೆಗೂಡಿದಳು.

ಮಯ್ ಮರಗಟ್ಟಿಸುವ ಆ ಹಿಮಾವೃತ ಪ್ರದೇಶದಲ್ಲಿ ನಿಧಾನವಾಗಿ ಸಾಗುವ ರೈಲಿನಲ್ಲಿ ಪ್ರಯಾಣಿಸುತ್ತಿದ್ದ ವೃದ್ಧ ಟಾಲ್‌ಸ್ಟಾಯ್‌ಗೆ ಬಹುಬೇಗನೆ ಹಠಾತ್ತಾಗಿ ನ್ಯೂಮೋನಿಯಾ ತಗಲಿತು. ಅವರ ವೈದ್ಯರು ಅಸ್ತಾಪೋವೋ ಎಂಬಲ್ಲಿ ಅವರನ್ನು ರೈಲಿಂದ ಇಳಿಸಿ ಸ್ಟೇಷನ್ ಮಾಸ್ಟರರ ಮನೆಯಲ್ಲಿ ಮಲಗಿಸಿದರು. ಪತ್ನಿ ಸೋನ್ಯಾ ಸುದ್ದಿ ತಿಳಿದು ಅಳುತ್ತ ಅಲ್ಲಿಗೆ ಧಾವಿಸಿದಳು. ಆದರೆ ಅವಳ ದುಃಖಗಾಬರಿಗಳಿಂದ ರೋಗಿಗೆ ಅಪಾಯ ಹೆಚ್ಚಬಹುದೆಂದು ವೈದ್ಯರು ಆಕೆಯನ್ನು ಪತಿಯ ಬಳಿಗೆ ಹೋಗದಂತೆ ಪ್ರತಿಬಂಧಿಸಿದರು. ಟಾಲ್‌ಸ್ಟಾಯ್‌ರವರ ಕೋಣೆಯ ಹೊರಗೆಯೇ ಆಕೆ ಉಳಿಯುವಂತಾಯಿತು. ಕೊನೆಗೆ ಟಾಲ್‌ಸ್ಟಾಯ್ ಪ್ರಜ್ಞಾಹೀನರಾದಾಗ ಇನ್ನು ಬದುಕಿ ಉಳಿಯುವಂತಿಲ್ಲವೆಂದು ಆಕೆಯನ್ನು ರೋಗಿಯ ಬಳಿಗೆ ಹೋಗಲು ಬಿಟ್ಟರು. ಪತಿಯ ಕೇಳಿಸದ ಕಿವಿಗಳಿಗೆ ತನ್ನ ಪ್ರೀತಿಯನ್ನೆರೆದಳು. ಜ್ಞಾನಹೀನ ಕೈಗಳನ್ನು ಚುಂಬಿಸಿದಳು. ಆದರೆ ಈಗ ತುಂಬ ತಡವಾಗಿತ್ತು. ಜೀವನದುದ್ದಕ್ಕೂ ಪರಸ್ಪರ ಭಾವೋದ್ದೀಪ್ತ ಶ್ರದ್ಧೋನ್ಮತ್ತರಾಗಿದ್ದುಕೊಂಡು ಕೂಡ ಉತ್ತರ ದಕ್ಷಿಣ ಧ್ರುವಗಳಂತೆ ಬಾಳುತ್ತಿದ್ದರು. ತಮ್ಮ ದೀರ್ಘ ಜೀವನದುದ್ದಕ್ಕೂ ಜತೆಯಾಗಿ ನಡೆಸಿದ ಸೆಣಸಾಟ ಕೊನೆಗೂ ನಿಷ್ಫಲವಾಯಿತು.

ರಕ್ತಮಾಂಸಗಳ ಭೌತಿಕ ಶರೀರದಿಂದ ಅವರ ದಿವ್ಯಾತ್ಮ ಬಂಧನ ಕಳಚಿಕೊಳ್ಳುತ್ತಿದ್ದಾಗ ಅವರ ಬಾಯಿಂದ ಹೊರಟ ಕೊನೆಯ ನುಡಿಮುತ್ತು–'ದಿ ಟ್ರುತ್ ಐ ಲವ್ ಮೆನಿ'–ಬೈಬಲ್‌ನಲ್ಲಿ ಎಲ್ಲರ ಮೃತ್ಯುಶಯ್ಯೆಯ ಬಳಿ ಧರ್ಮಗುರುಗಳು ಹೇಳಬೇಕೆಂದಿರುವ ದೇವವಾಣಿಯದು. ೧೯೧೦ರ ನವೆಂಬರ್ ೭ರಂದು ಈ ಕೊನೆಯುಸಿರ ಅಕ್ಷರಗಳು ತ್ರಿಭುವನದಲ್ಲೆಲ್ಲಾ ಪ್ರತಿಧ್ವನಿಸಿ ಮೊಳಗಿದುವು. ಇಂಥ ಪ್ರತಿಭಾನ್ವಿತ, ಸದಾ ಉಕ್ಕಿಹರಿವ ದಿವ್ಯ ಚೈತನ್ಯವು, ತಾನು ಅನವರತ ಹೋರಾಟ ನಡೆಸಿದ ಶರೀರದಿಂದ ಮುಕ್ತಿ ಪಡೆಯಿತು. ಟಾಲ್‌ಸ್ಟಾಯ್‌ಯವರ ಇಚ್ಛೆಯಂತೆ, ಅವರ ಪ್ರಿಯ ಭೂಮಿ 'ಯೇಸ್ನಾಯಾಪೋಲ್ಯೇನಾ'ದ ವನಪ್ರದೇಶದಲ್ಲಿ ಯಾವುದೇ ಧಾರ್ಮಿಕ ಕ್ರಿಯೆಗಳಿಲ್ಲದೇನೇ, ಅವರ ಪಾರ್ಥಿವ ಶರೀರವನ್ನು ದಫನ ಮಾಡಲಾಯಿತು. ಏಸು ಕ್ರಿಸ್ತನ (–ಸಮರ್ಪಕವಲ್ಲದೇ ಹೋದರೂ) –ಅನುಕರಣೆ ಮಾಡಲು ಸಾಹಸಪಟ್ಟ ಟಾಲ್‌ಸ್ಟಾಯ್‌ಯವರ ಕೊನೆಯ ಯಾತ್ರೆ ಈ ರೀತಿ ಬಡಭಿಕಾರಿಯ ಅಂತ್ಯಕ್ರಿಯೆಯಂತೆ ಅತಿ ಸಾಮಾನ್ಯವಾಗಿ, ನಿಶ್ಶಬ್ದವಾಗಿ ನಡೆಯಿತು.

ಟಾಲ್‌ಸ್ಟಾಯ್‌ರು ಜೀವಂತವಾಗಿಲ್ಲವಾದರೂ, ಮುಂದೆ ಕೆಲವರ್ಷಗಳ

ಮೇಲೆ, ಅವರನ್ನು ಒಬ್ಬ ಮಹಾಕ್ರಾಂತಿ ವೀರನೆಂದು, ಕಮ್ಯೂನಿಸ್ಟ್ ತತ್ವಗಳ ಪ್ರತಿಪಾದಕನೆಂದು ಕಮ್ಯೂನಿಸ್ಟ್ ವಿಪ್ಲವಕಾರಿಗಳು ತಮ್ಮ ಪ್ರಚಾರ ಕಾರ್ಯಗಳಲ್ಲಿ ಘೋಷಿಸಿದರು. ಆದರೆ ಅಹಿಂಸೆಯನ್ನು ಬೋಧಿಸಿದ, ಹಿಂಸೆಯನ್ನು ವಿರೋಧಿಸಿದ ಟಾಲ್‌ಸ್ಟಾಯ್ ಬದುಕಿರುತ್ತಿದ್ದರೆ ಕ್ರೆಮ್ಲಿನ್‌ನ ಹಿಂಸಾವಾದಿ ಪುಂಡರ ಗುಂಪನ್ನು ಖಂಡಿತವಾಗಿ, ಪ್ರಬಲವಾಗಿ, ವಿರೋಧಿಸುತ್ತಿದ್ದರು ಮತ್ತು ಪ್ರೀತಿಯ ಕಾಯಿದೆ ಕಾನೂನುಗಳಿಗನುಗುಣವಾಗಿ ಬದುಕುವವರ, ಮಾನವಕುಲವನ್ನು ಪ್ರೀತಿಸುವ ಮಾನವೀಯ ಗುಣವುಳ್ಳವರ ಪಕ್ಷದವನು ತಾನೆಂದು ಸಾರುತ್ತಿದ್ದರು. ಅವರ ಅಗಣಿತ ಸಾಹಿತ್ಯ ಕೃತಿರತ್ನಗಳು ಅವರ ಕರುಣಾಪೂರಿತ, ಪ್ರೇಮಾರ್ದ್ರ ಹೃದಯದ ಪ್ರತಿಬಿಂಬಗಳಾಗಿವೆ. ಇಂಥ ದೈವೀಗುಣಗಳ ಮಹಾಸಂತ ಕಮ್ಯೂನಿಸ್ಟ್ ರಾಕ್ಷಸರ ಬೆಂಬಲಿಗನೆಂದರೆ ಯಾರು ನಂಬಲು ಸಾಧ್ಯ?



ಬರೀ ನಮ್ಮ ಪೂರ್ವದ ಸಂಸ್ಕೃತಿ ಉಜ್ವಲವಾದುದೆಂದು ಹೆಮ್ಮೆ ಪಡುತ್ತಾ ಇದ್ದರೆ ಆಗಲಿಲ್ಲ. ಸದ್ಯದ ಸಮಾಜದಲ್ಲಿ ಒಂದೇ ಸಮನೆ ನಡೆದಿರುವ ನೈತಿಕ ಪತನವನ್ನು ತಡೆಯುವ ಬಗ್ಗೆ ನಾವೇನು ಮಾಡುತ್ತಿದ್ದೇವೆಂಬುದನ್ನು ಸ್ವಲ್ಪ ಯೋಚಿಸಬೇಕು.

—ಡಾ॥ ರಾಧಾಕೃಷ್ಣನ್

ಆರೋಗ್ಯದಿಂದಲೇ ನಾವು ಎಲ್ಲ ಸಾಮಾಜಿಕ ಸದ್ಗುಣಗಳನ್ನು ಸಾಧಿಸಬಲ್ಲೆವು. ಆದ್ದರಿಂದ ಆರೋಗ್ಯವನ್ನು ಕಾಪಾಡಿಕೊಳ್ಳುವುದು ನಮ್ಮ ನೈತಿಕ ಮತ್ತು ಧಾರ್ಮಿಕ ಕರ್ತವ್ಯವೆನಿಸಿದೆ.

—ಜಾನ್ಸನ್

ಅಳಗಪ್ಪ ಚೆಟ್ಟಿಯಾರ್ ; ಅಸದೃಶ ಶ್ರೀಮಂತ

ಹೆಚ್. ಆರ್. ಚಂದ್ರವದನರಾವ್

ಬದುಕಿದ್ದು ಕೇವಲ ನಲವತ್ತೆಂಟು ವರ್ಷ; ಆದರೆ ಗಳಿಸಿದ್ದು ಕೋಟ್ಯಂತರ. ಗಳಿಸಿದ ಹಣವನ್ನೆಲ್ಲಾ ವಿದ್ಯಾ ಸಂಸ್ಥೆಗಳನ್ನು ಕಟ್ಟಲು, ಬೆಳೆಸಲು ಖರ್ಚುಮಾಡಿದ ವಿದ್ಯಾ ಪಕ್ಷಪಾತಿ ಅಳಗಪ್ಪ ಚೆಟ್ಟಿಯಾರರು. ಅವರ ಕೊಡುಗೆ ಒಂದು ರೀತಿಯಲ್ಲಿ ಅಪವಾದ. ನಾಟ್ಟುಕೋಟೆ ಚೆಟ್ಟಿಯಾರರ ಮುಖ್ಯ ಕಸಬು ಲೇವಾದೇವಿ, ವ್ಯಾಪಾರ. ಉನ್ನತ ವಿದ್ಯಾಭ್ಯಾಸ ಮಾಡುವವರು ಬಹಳ ಕಡಿಮೆ. ಕೆಲವರು ಶತಮಾನದ ಆದಿ ಭಾಗದಲ್ಲಿ ಮಲೇಷಿಯಾ, ಸಿಂಗಪುರ, ಬರ್ಮಾಗಳಿಗೆ ಹೋಗಿ ಲೇವಾದೇವಿ ನಡೆಸಿ ಶ್ರೀಮಂತರಾಗಿ ಭಾರತಕ್ಕೆ ವಾಪಸ್ಸಾಗಿದ್ದಾರೆ.

ಕೊಟ್ಟೈಯೂರ್‌ನಲ್ಲಿ ೬-೪-೧೯೦೯ ರಲ್ಲಿ ರಾಮನಾಥನ್ ಚೆಟ್ಟಿಯಾರ್ ಮತ್ತು ಉಮಾಯಳ್ ದಂಪತಿಗಳಿಗೆ ಹುಟ್ಟಿದ ಅಳಗಪ್ಪ ತಮ್ಮ ಶಾಲಾ ಶಿಕ್ಷಣವನ್ನು ಕಾರೈಕುಡಿಯಲ್ಲಿ ಮುಗಿಸಿದರು. ನಂತರ ಮದರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯ ತೆಗೆದುಕೊಂಡು ೧೯೩೦ರಲ್ಲಿ ಎಂ.ಎ. ಮಾಡಿದರು. ಆಗ ಅವರಿಗೆ ಕೇವಲ ೨೧ ವರ್ಷ. ಅಂದಹಾಗೆ ಚೆಟ್ಟಿಯಾರ್ ಮತ್ತು ಮಾಜಿ ಕೇಂದ್ರ ಮಂತ್ರಿ ಹಾಗೂ ಮಾಜಿ ಮಹಾರಾಷ್ಟ್ರದ ರಾಜ್ಯಪಾಲ ಸಿ. ಸುಬ್ರಹ್ಮಣ್ಯಂ ಕಾಲೇಜಿನಲ್ಲಿ ಸಹಪಾಠಿಗಳು. ಆದರೆ ಸುಬ್ರಹ್ಮಣ್ಯಂ ವ್ಯಾಸಂಗಕ್ಕೆ ವಿಜ್ಞಾನ ತೆಗೆದುಕೊಂಡಿದ್ದರೆ, ಚೆಟ್ಟಿಯಾರರು ಸಾಹಿತ್ಯ ತೆಗೆದುಕೊಂಡಿದ್ದರು. ನಂತರ ಚೆಟ್ಟಿಯಾರ್ ಲಂಡನ್ನಿಗೆ ಹೋದರು; ಚಾರ್ಟರ್ಡ್ ಬ್ಯಾಂಕಿನಲ್ಲಿ ಟ್ರೇನಿಯಾಗಿ ಸೇರಿದರು. ಈ ವಿದೇಶಿ ಬ್ಯಾಂಕಿಗೆ ತರಪೇತುಗಾರನಾಗಿ ಸೇರಿದ ಮೊದಲ ಭಾರತೀಯ ಚೆಟ್ಟಿಯಾರ್. ಮುಂದೆ ಅವರು ಬ್ಯಾಂಕಿನ ನಿರ್ದೇಶಕರಲ್ಲಿ ಒಬ್ಬರಾದರು. ಲಂಡನ್ನಿನಲ್ಲಿರುವಾಗ ಬಾರ್-ಎಟ್-ಲಾ ಮುಗಿಸಿದರು. ಚೆಟ್ಟಿಯಾರರಿಗೆ ವಿಮಾನ ನಡೆಸುವುದರಲ್ಲೂ ಆಸಕ್ತಿ ಇತ್ತು. ತರಪೇತಿ ಪಡೆದು, ವಿಮಾನ ಚಾಲಕನ ಸರ್ಟಿಫಿಕೇಟನ್ನೂ ಅವರು ಲಂಡನ್ನಿನಲ್ಲಿದ್ದಾಗ ಪಡೆದಿದ್ದರು.

ಭಾರತಕ್ಕೆ ವಾಪಸ್ಸಾದ ಮೇಲೆ ಅವರು ವಕೀಲಿ ವೃತ್ತಿ ನಡೆಸಲಿಲ್ಲ. ಕುಲ ಕಸಬು ಲೇವಾದೇವಿ ಮಾಡಲಿಲ್ಲ. ಬದಲು ಕೈಗಾರಿಕೆಗಳನ್ನು ಸ್ಥಾಪಿಸಿದರು. ಮೂವತ್ತರ ದಶಕ; ಹಣದ ಮುಗ್ಗಟ್ಟು. ಸಾಮಾನು ಸರಂಜಾಮು ಹೇರಳ; ಆದರೆ ಯಾರಲ್ಲೂ ಹಣವಿಲ್ಲ. ಆಗ ಡಾ|| ಷಣ್ಮುಖಂಚೆಟ್ಟಿ ಕೊಚ್ಚಿನ್‌ನ ದಿವಾನರಾಗಿದ್ದರು. ತಮ್ಮ

ರಾಜ್ಯ ಅಭಿವೃದ್ಧಿ ಹೊಂದಲು ಕೈಗಾರಿಕೆಗಳು ಸ್ಥಾಪನೆಯಾಗಬೇಕು ಎಂದು ನಂಬಿದ್ದ ಅವರು ಅಳಗಪ್ಪ ಚೆಟ್ಟಿಯಾರರನ್ನು ತಮ್ಮ ರಾಜ್ಯದಲ್ಲಿ ಹತ್ತಿಗಿರಣಿ ಸ್ಥಾಪಿಸಲು ಆಹ್ವಾನಿಸಿದರು. ಚೆಟ್ಟಿಯಾರರ ಹತ್ತಿಗಿರಣಿ ಸ್ಥಾಪನೆಯಾಯಿತು. ನಂತರ ಇನ್ನೊಂದು ಟ್ರಾವೆಂಕೂರ್‌ನಲ್ಲಿ. ಮಲಬಾರ್ ಜಿಲ್ಲೆಯ ಕಣ್ಣಾನೂರಿನಲ್ಲಿ ಅವರು ಕೈಮಗ್ಗ, ನೇಯ್ಗೆ ಕಾರ್ಖಾನೆ ತೆರೆದರು. ನಿರುದ್ಯೋಗಿಗಳಿಗೆ ಕೆಲಸ, ಮಾಲೀಕರಿಗೂ ಲಾಭ. ಅಳಗಪ್ಪ ಚೆಟ್ಟಿಯಾರರು 'ಸ್ಟಾಕ್ ಮತ್ತು ಷೇರ್' ದಳ್ಳಾಳಿಯೂ ಆಗಿದ್ದರು, ಯುದ್ಧದ ಸಮಯ; ವಸ್ತುಗಳ ಬೇಡಿಕೆ ಜಾಸ್ತಿಯಾಯಿತು. ಚೆಟ್ಟಿಯಾರರ ಕಾರ್ಖಾನೆಗಳು ಹಗಲೂ ಇರುಳೂ ಕೆಲಸ ಮಾಡಿದವು. ಅಗಾಧ ಪ್ರಮಾಣದಲ್ಲಿ ಲಾಭವಾಯಿತು.

ಶ್ರೀ ಅಳಗಪ್ಪ ಚೆಟ್ಟಿಯಾರ್ ಲೋಭಿಯಲ್ಲ. ಸಂಪಾದಿಸಿದ ಹಣ ಸದ್ವಿನಿಯೋಗವಾಗಬೇಕು. ವಿದ್ಯಾವಂತ ಹಣ ಗಳಿಸಿ ವ್ಯಯ ಮಾಡುವುದಕ್ಕೂ, ಅವಿದ್ಯಾವಂತ ಗಳಿಸಿದ ಹಣ ವ್ಯಯ ಮಾಡುವುದಕ್ಕೂ ತುಂಬ ವ್ಯತ್ಯಾಸವಿದೆ ಎಂದು ಅವರು ತೋರಿಸಿದರು. ಅಳಗಪ್ಪ ನಗರದ ಅವರ ಮಿಲ್‌ಗೆ ಸೇರಿದ ಆಸ್ಪತ್ರೆಯ ಹೆಂಗೆ ವಾರ್ಡಿಗೆ ಒಂದು ಲಕ್ಷ ರೂಪಾಯಿ, ಎರ್ನಾಕುಲಂನ ಮಹಾರಾಜ ಕಾಲೇಜಿನಲ್ಲಿ ನಾಡು ಔಷಧಿ ಶೋಧನೆ ವಿಭಾಗಕ್ಕೆ ಎಂಬತ್ತು ಸಾವಿರ ರೂಪಾಯಿ, ಕೊಚ್ಚಿನ್ ರಾಜ್ಯದ ಶಾಲಾ ಮಕ್ಕಳ ಮಧ್ಯಾಹ್ನದ ಊಟದ ಏರ್ಪಾಡಿಗೆ ಒಂದೂವರೆ ಲಕ್ಷ, ತಿರುವಾಂಕೂರು ವಿಶ್ವವಿದ್ಯಾನಿಲಯದಲ್ಲಿ ತಮಿಳು ವಿಭಾಗ ತೆರೆಯಲು ಹತ್ತು ಸಾವಿರ ರೂಪಾಯಿ, ಮದರಾಸು ಥಕ್ಕರ್ ಬಾಪಾ ವಿದ್ಯಾನಿಲಯಕ್ಕೆ ಒಂದು ಲಕ್ಷ, ದೆಹಲಿಯ ಸೌತ್ ಇಂಡಿಯನ್ ಎಜುಕೇಶನಲ್ ಸೊಸೈಟಿಗೆ ಇಪ್ಪತ್ತೈದು ಸಾವಿರ, ಮದರಾಸು ಸೇವಾ ಸದನಕ್ಕೆ ಎಪ್ಪತ್ತೈದು ಸಾವಿರ, ಸೌತ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್, ಮದರಾಸ್ – ಇಲ್ಲಿಗೆ ಎಪ್ಪತ್ತೈದು ಸಾವಿರ ಅವರು ದಾನ ಮಾಡಿದ್ದಾರೆ. ಮದರಾಸು ಮತ್ತು ಅಣ್ಣಾಮಲೈ ವಿಶ್ವವಿದ್ಯಾನಿಲಯಗಳು ಟೆಕ್ನಾಲಜಿ ಕಾಲೇಜುಗಳನ್ನು ತೆರೆಯಲು ಒಂದೊಂದಕ್ಕೂ ಐದೈದು ಲಕ್ಷ ರೂಪಾಯಿಗಳನ್ನು ಚೆಟ್ಟಿಯಾರರು ಕೊಟ್ಟಿದ್ದಾರೆ. ಅವರು ಧನ ಸಹಾಯ ಮಾಡಿದ ಸಂಸ್ಥೆಗಳಿಗೆ ಲೆಕ್ಕವಿಲ್ಲ.

ಚೆಟ್ಟಿಯಾರರು ಸಾಹಿತ್ಯದ ವಿದ್ಯಾರ್ಥಿಯಾದರೂ ವಿಜ್ಞಾನ ಮತ್ತು ತಂತ್ರಜ್ಞಾನದ ಕಡೆಗೆ ಹೆಚ್ಚು ಒಲವು. ಕಾರೈಕುಡಿಯಲ್ಲಿ ಎಲೆಕ್ಟ್ರೋ-ಕೆಮಿಕಲ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಸ್ಥಾಪನೆಗೆ ಮುನ್ನೂರು ಎಕರೆ ಭೂಮಿ. ಹದಿನೈದು ಲಕ್ಷ ರೂಪಾಯಿ ಅವರು ಕೊಟ್ಟರು. ಸರ್ಕಾರಿ ಕಾಲೇಜುಗಳಲ್ಲಿ, ವಿದ್ಯಾರ್ಥಿಗಳಿಗೆ, ಸ್ಥಳಾಭಾವದಿಂದ ಸೀಟು ಕೊಡುವುದು ಆಗುತ್ತಿಲ್ಲ ಎಂದು ಮದರಾಸಿನಲ್ಲಿ ವಿಶ್ವವಿದ್ಯಾನಿಲಯದ ಕುಲಪತಿ ಡಾ|| ಎ. ಲಕ್ಷ್ಮಣಸ್ವಾಮಿ ಮೊದಲಿಯಾರರು ಒಂದು ಸಮಾರಂಭದಲ್ಲಿ ಹೇಳಿದಾಗ ಚೆಟ್ಟಿಯಾರರು ತಾವು ಕಾಲೇಜೊಂದನ್ನು ಸ್ಥಾಪಿಸಲು ಸಿದ್ಧ ಎಂದು ಎದ್ದು ನಿಂತು ಹೇಳಿದರು. ಕಾರೈಕುಡಿಯಲ್ಲಿ ೧೯೪೭ರಲ್ಲಿ ಕಾಲೇಜು ಪ್ರಾರಂಭವಾಯಿತು.

೧೪೯ ವಿದ್ಯಾರ್ಥಿಗಳು ಸೇರಿದರು. ಎರಡು ಚದರ ಮೈಲಿ ಜಾಗದಲ್ಲಿ ಈಗ ಹತ್ತು ವಿದ್ಯಾಸಂಸ್ಥೆಗಳಿವೆ: ಕಲಾ ಮತ್ತು ವಿಜ್ಞಾನ ಕಾಲೇಜು, ಉಪಾಧ್ಯಾಯರ ಪ್ರಶಿಕ್ಷಣ ಕಾಲೇಜು, ಇಂಜನಿಯರಿಂಗ್ ಕಾಲೇಜು, ಪಾಲಿಟೆಕ್ನಿಕ್, ಫಿಜಿಕಲ್ ಎಜುಕೇಶನ್ ಕಾಲೇಜು, ಹೈಸ್ಕೂಲ್, ಮಾಂಟೆಸ್ಸೋರಿ ಶಾಲೆ, ಶಿಶುವಿಹಾರ, ಸಂಗೀತ ವಿದ್ಯಾಲಯ. ಇವಕ್ಕೆ ಒಟ್ಟು ೧೨೫ ಲಕ್ಷ ಖರ್ಚಾಗಿದೆ, ಅದರಲ್ಲಿ ಚೆಟ್ಟಿಯಾರರ ಕೊಡುಗೆ ಎಪ್ಪತ್ತೈದು ಲಕ್ಷ.

ಚೆಟ್ಟಿಯಾರ್ ಅಪರಿಮಿತ ಜ್ಞಾನಿಯಾಗಿದ್ದರು. ಅವರ ವಿದ್ವತ್ತನ್ನು ಗಮನಿಸಿ ಅಣ್ಣಾಮಲೈ ಮತ್ತು ಮದರಾಸ್ ವಿಶ್ವವಿದ್ಯಾಲಯಗಳು ಅವರಿಗೆ ಡಿ.ಲಿಟ್. ಮತ್ತು ಎಲ್.ಎಲ್.ಡಿ. ಪದವಿಗಳನ್ನು ೧೯೪೩ ಮತ್ತು ೧೯೪೪ರಲ್ಲಿ ನೀಡಿದವು. ೧೯೪೫ರಲ್ಲಿ ಅವರಿಗೆ ನೈಟ್‌ಹುಡ್ ಪ್ರಶಸ್ತಿಯನ್ನು ಬ್ರಿಟಿಷ್ ಸರ್ಕಾರ ಕೊಟ್ಟಿತು; ಆದರೆ ಚೆಟ್ಟಿಯಾರ್ ದೇಶಕ್ಕೆ ಸ್ವತಂತ್ರ ಬಂದ ನಂತರ ಅದನ್ನು ತ್ಯಜಿಸಿದರು. ಭಾರತ ಸರ್ಕಾರ ಅವರಿಗೆ ೧೯೫೬ರಲ್ಲಿ ಪದ್ಮಭೂಷಣ ಪದವಿ ನೀಡಿತು. ೧೯೪೪ರಲ್ಲಿ ಮದರಾಸು ವಿಶ್ವವಿದ್ಯಾನಿಲಯದಿಂದ ಗೌರವ ಎಲ್.ಎಲ್.ಡಿ. ಪದವಿ ಪಡೆದ ಚೆಟ್ಟಿಯಾರ್ ೧೯೫೪ರಲ್ಲಿ ಆ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭಾಷಣ ಮಾಡಿದರು!

ದುರದೃಷ್ಟ! ಅಳಗಪ್ಪ ಚೆಟ್ಟಿಯಾರರಿಗೆ ಕುಷ್ಠರೋಗ ತಗುಲಿತು. ೧೯೩೧ರಲ್ಲಿ ಅವರು ಲಂಡನ್ನಿನಲ್ಲಿದ್ದಾಗಲೇ ರೋಗದ ಚಿಹ್ನೆಗಳು ಕಾಣಿಸಿಕೊಂಡಿದ್ದವು. ದಿನೇದಿನೇ ರೋಗ ಜಾಸ್ತಿಯಾಗಿ ಅವರು ನಿಶ್ಶಕ್ತ ಅಂಗ ಹೀನರಾದರು. ದೆಹಲಿಗೆ ಹೋದಾಗ ಬಿದ್ದು ಕಾಲುಗಳನ್ನು ಮುರಿದುಕೊಂಡರು. ಕುಷ್ಠ ಮೂಳೆಗೂ ತಗುಲಿತ್ತು. ವೈದ್ಯರ ತಂಡ ಅವರಿಗೆ ಔಷದೋಪಚಾರವನ್ನು ಮನೆಯಲ್ಲೇ ನಡೆಸಿತು. ರಾಜಾಜಿ, ಸುಬ್ರಹ್ಮಣ್ಯಂ, ಪಂಡಿತ್ ನೆಹರೂ, ಮೈಸೂರಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್, ಡಾ|| ರಾಜೇಂದ್ರ ಪ್ರಸಾದ್, ಗೌರ್ನರ್ ಸಿ. ಪ್ರಕಾಶ್ ಮುಂತಾದವರು ಅವರ ಮನೆಗೆ ಬಂದು ನೋಡಿಕೊಂಡು ಹೋದರು. ಕಾರೈಕುಡಿ ವಿದ್ಯಾಸಂಸ್ಥೆಗಳ ಒಂದು ವಿಶ್ವವಿದ್ಯಾನಿಲಯವಾಗಬೇಕು ಎಂಬ ಆಸೆಯನ್ನು ಅವರು ಪ್ರಧಾನಿ ನೆಹರೂರವರ ಬಳಿ ಆಗ ಹೇಳಿದ್ದರು. ಅವರ ಕನಸು ಅವರು ಸತ್ತ ಹತ್ತು ವರ್ಷಗಳ ಮೇಲೆ ನನಸಾಯಿತು.

ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸ ಮುಗಿಸಿ ಅವರು ಭಾರತಕ್ಕೆ ೧೯೩೩ರಲ್ಲಿ ಹಿಂತಿರುಗಿದಾಗ ಚೆಟ್ಟಿಯಾರರಿಗೆ ೨೪ ವರ್ಷ, ಅವರು ಅಪ್ರಾಪ್ತ ವಯಸ್ಸಿನಲ್ಲಿ ದಿವಂಗತರಾದಾಗ (೫–೪–೧೯೫೭) ಅವರಿಗೆ ಕೇವಲ ನಲವತ್ತೆಂಟು ವರ್ಷ, ವಿದ್ಯಾರ್ಥಿ ಜೀವನ ಬಿಟ್ಟು ಉಳಿದ ಇಪ್ಪತ್ತುನಾಲ್ಕು ವರ್ಷಗಳಲ್ಲಿ ಚೆಟ್ಟಿಯಾರರು ಗಳಿಸಿದ್ದು, ಸಮಾಜ ಸೇವೆ ಮಾಡಿದ್ದು ಅಪಾರ. ಅವರಿಗೆ ಅಂದಿನ ನಾಯಕರುಗಳೆಲ್ಲ ಚಿರಪರಿಚಿತರು. ಹೆಸರಾಂತ ರಾಜಕಾರಣಿಗಳಾದ ರಾಜೇಂದ್ರ ಪ್ರಸಾದ್, ಪಂಡಿತ್ ನೆಹರೂ, ರಾಜಗೋಪಾಲಚಾರಿ, ಸಿ. ಸುಬ್ರಹ್ಮಣ್ಯಂ, ಕಾಮರಾಜ್, ಪಟೇಲ್ ಮುಂತಾದವರೂ ತಮ್ಮ ವಿದ್ವತ್ತಿನಿಂದ ಕೀರ್ತಿಗಳಿಸಿದ್ದ

ಎಸ್. ರಾಧಾಕೃಷ್ಣನ್, ಲಕ್ಷ್ಮಣಸ್ವಾಮಿ ಮೊದಲಿಯಾರ್, ರಾಮಸ್ವಾಮಿ ಅಯ್ಯರ್, ಸರ್. ಸಿ. ವಿ. ರಾಮನ್, ಸಿ. ಡಿ. ದೇಶಮುಖ್, ಸರ್. ಎಂ. ವಿಶ್ವೇಶ್ವರಯ್ಯ ಮುಂತಾದವರೊಡನೆ ಅಳಗಪ್ಪ ಚೆಟ್ಟಿಯಾರ್ ಸಂಪರ್ಕವಿಟ್ಟುಕೊಂಡಿದ್ದರು. ಮದರಾಸಿನಲ್ಲಿರುವ ಅವರ ಗೃಹಕ್ಕೆ (ಕೃಷ್ಣವಿಲಾಸ್) ಈ ಮಹನೀಯರು ಹಲವು ವೇಳೆ ಭೇಟಿ ನೀಡಿದ್ದಾರೆ.

ಚೆಟ್ಟಿಯಾರ್ ಕೋಮಿನಲ್ಲಿ ವ್ಯಕ್ತಿ ತನ್ನ ಸ್ವಂತ ಆಸ್ತಿಯನ್ನು ಹೇಗೆ ವಿನಿಯೋಗಿಸಿದರೂ ಯಾರೂ ಏನೂ ಕೇಳುವಂತಿಲ್ಲ. ಆದರೆ ಮನೆ ಮತ್ತು ಮನೆಯಲ್ಲಿರುವ ಬೆಳ್ಳಿ, ಚಿನ್ನದ ಆಭರಣಗಳನ್ನು ಮಕ್ಕಳಿಗೇ ಕೊಡಬೇಕು. ಅಳಗಪ್ಪ ಚೆಟ್ಟಿಯಾರರಿಗೆ ಇರುವವರು ಒಬ್ಬಳೇ ಮಗಳು—ಉಮಯಾಳ್ ಅವಳ ಮದುವೆಗೆ ಅಂದಿನ ಕಾಲದಲ್ಲಿ ಚೆಟ್ಟಿಯಾರ್ ಎರಡು ಕೋಟಿ ರೂಪಾಯಿ ಖರ್ಚುಮಾಡಿದರು. ಜನ ಅಂತಹ ವೈಭವಯುಕ್ತ ವಿವಾಹ ಮಹೋತ್ಸವವನ್ನು ಹಿಂದೆ ನೋಡಿರಲಿಕ್ಕಿಲ್ಲ, ಮನೆ ಮತ್ತು ಒಡವೆಗಳನ್ನು ಮಗಳಿಗೆ ಕೊಟ್ಟು ಉಳಿದುದನ್ನು ಚಟ್ಟಿಯಾರರು ವಿದ್ಯಾಸಂಸ್ಥೆಗಳ ಸ್ಥಾಪನೆಗೆ, ಬೆಳವಣಿಗೆಗೆ ಕೊಟ್ಟಿದ್ದಾರೆ. ಅವರು ಸತ್ತಾಗ ಅವರ ಹೆಸರಿನಲ್ಲಿ ಒಂದು ಬಿಡಿಕಾಸೂ ಇರಲಿಲ್ಲ ಅಂದರೆ ನಂಬುವುದು ಕಷ್ಟ.

ಇದ್ದುದೆಲ್ಲವನ್ನು ವಿದ್ಯಾಪ್ರಸಾರಕ್ಕೆ ಖರ್ಚುಮಾಡಿದ ಆದರ್ಶ ಶ್ರೀಮಂತ ಅಳಗಪ್ಪ ಚೆಟ್ಟಿಯಾರ್.



ಅದು ಬೇಕು, ಇದು ಬೇಕು ಎಂದು ಹಲುಬಬೇಡ. ದೈವೀ ಪ್ರೇಮದಿಂದ ದೊರೆತುದನ್ನು ಮಾತ್ರ ಸ್ವೀಕರಿಸು. ಉಳಿದವುಗಳಿಗಾಗಿ ಆಶೆಪಡಬೇಡ.

ಟಾಗೋರ್

ಪುಸ್ತಕ ಪರಿಚಯ

ತೋಡ ಬಾಲಕ ಮತ್ತು ಕಾಡುಮೋಕೆ: ಲೇಖಕ: ಇ. ಆರ್. ಸಿ. ದಾವಿಡರ್, ಅನುವಾದ: ಬಿ. ಎಸ್. ಗುರುಮೂರ್ತಿ; ಪ್ರಕಾಶಕರು: ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಎ-೫, ಗ್ರೀನ್ ಪಾರ್ಕ್, ಹೊಸದೆಹಲಿ; ಮೊದಲ ಮುದ್ರಣ: ೧೯೯೫; ಪುಟ ೬೫; ಬೆಲೆ ೯ ರೂ.

ನೀಲಗಿರಿ ಪಶ್ಚಿಮ ಘಟ್ಟಗಳಲ್ಲಿ ವಾಸ
ಾಗಿರುವ ತೋಡ ಆದಿವಾಸಿಗಳ ಜೀವನ
್ರಮವನ್ನು ಸರಳ ಸುಂದರವಾಗಿ ನಿರೂಪಿ
ುತ್ತಾ, ಆಧುನಿಕತೆಯು ಪ್ರವೇಶದಿಂದಾಗಿ,
ಡು ಕಿರಿದಾದಂತೆ, ಆದಿವಾಸಿಗಳ ನಾಡು
ರಿದಾಗಿ, ಅವರ ಗತ ಜೀವನದ ವೈಭವ
ುರೆಯಾಗಿ, ಹೊಸ ಜೀವನಕ್ಕೆ ಹೊಂದಿ
ೊಳ್ಳಲಾರದ ಸ್ಥಿತಿ ಉಂಟಾಗಿ, ಅತಂತ್ರ
ೀವನದ ನೈಜ ಚಿತ್ರಣವನ್ನು ಲೇಖಕರು
ಲಾತ್ಮಕವಾಗಿಸಿದ್ದಾರೆ.

ವನ್ಯ ಜೀವಿಗಳು ದಿನನಿತ್ಯವೂ ಹೋರಾ
ಟದ ಕ್ಷಣಗಳಲ್ಲಿಯೇ ಬದುಕಬೇಕಾಗುತ್ತದೆ.
ಂತಹ ಕ್ಷಣವೊಂದರಲ್ಲಿಯೇ ಕಥಾನಾಯಕ
ಾನೊರ್ಜನು, ಈ ಕಥೆಯ ಕೇಂದ್ರ
ಿಂದುವಾದ ಕಾಡು ಮೋಕೆ ಮರಿಯನ್ನು,
ೇಟೆಗಾರರ ಉರುಳಿನ ಕುತ್ತಿನಿಂದ ಪಾರು
ಮಾಡಿ ತನ್ನ ಗುಡಿಸಿಲಿಗೆ ಕರೆತರುತ್ತಾನೆ.
ಂದು ಕ್ರಮೇಣ ಆದಿವಾಸಿಗಳ ಜೀವನ
್ರಮಕ್ಕೆ ಹೊಂದಿಕೊಂಡು, ಅವರ ವಿಶ್ವಾಸ
ವನ್ನು ಗಳಿಸಿಕೊಳ್ಳುತ್ತಾ, ಆದಿವಾಸಿಗಳ ಜೀವನ, ಆಹಾರ-ವಿಹಾರ, ಉಡುಪು, ಧರ್ಮ, ನಂಬಿಕೆಗಳು, ಭಾಷೆ ಇತ್ಯಾದಿ ಯಾಗಿ ಪರಿಚಯಿಸುತ್ತದೆ.

ಕಾನೊರ್ಜನು ಕಾಡುಮೋಕೆಗೆ ಪ್ರೀತಿ ಯಿಂದ ಇಟ್ಟ ಹೆಸರು ಮೋಜ್ (ಮಂಜು) ಒಂದು ದಿನ ಮೋಜ್ ಆದಿವಾಸಿಗಳ ಪವಿತ್ರ ಸ್ಥಾನವನ್ನು ಹೊಕ್ಕು ಅಪವಿತ್ರಗೊಳಿಸಿ ತೆಂಬ ಕಾರಣಕ್ಕೆ, ಆದಿವಾಸಿಗಳ ಕೋಪಕ್ಕೆ ತುತ್ತಾಗಿ, ಹತ್ತಿರದ ಪರ್ವತ ಪ್ರದೇಶದಲ್ಲಿ ಆಶ್ರಯಪಡೆದು ತನ್ನ ಪ್ರಾಣವನ್ನು ಉಳಿಸಿಕೊಳ್ಳುತ್ತದೆ. ಇದು ಮೊದಲನೆಯ ಹಂತ.

ಇಲ್ಲಿಂದ ಮುಂದಕ್ಕೆ ಕಾಡಿನ ಮತ್ತೊಂದು ಮುಖದ ಪರಿಚಯ ನಮಗಾಗುತ್ತಾ ಹೋಗುತ್ತದೆ. ಕಾಡಿನಲ್ಲಿದ್ದ ಚಿರತೆ ಆದಿವಾಸಿ ಗಳ ದನ-ಕರುಗಳನ್ನು ಹಿಡಿಯುವ ತಂತ್ರ, ಕಾಡು-ನಾಯಿಗಳು ಗುಂಪಾಗಿ ಸಂಚರಿ ಸುತ್ತಾ ತಮ್ಮ ಬೇಟೆಯನ್ನು ಅರಸುವುದು

ಮತ್ತು ಕಾಡುಮೇಕೆಗಳ ಗುಂಪಿನ ಮೇಲೆ ಬೀಳಲು ಹೊಂಚು ಹಾಕಿ ಹಿಡಿಯುವುದು, ಕಾಡು ಮೇಕೆಗಳು ತಮ್ಮನ್ನು ರಕ್ಷಿಸಿಕೊಳ್ಳಲು ಶ್ರಮಿಸುವುದು, ಗಂಡು ಮೇಕೆಗಳು ಪರಸ್ಪರ ಗುಂಪಿನ ಒಡೆತನಕ್ಕಾಗಿ ಕಾದಾಡುವುದು, ಈ ನಡುವೆ ಒಂಟಿ ಕಾಡು ಮೇಕೆ ಮೋಜ್ ದಷ್ಟ-ಪುಷ್ಟವಾಗಿ ಬೆಳೆದು, ಕಾಡು ಮೇಕೆ ಗುಂಪಿನ ಯಜಮಾನನಾಗಿ ವಿರಾಜಿಸುತ್ತಾ, ಬೇಟೆಗಾರರ ಕೆಂಗಣ್ಣಿಗೆ ಗುರಿಯಾಗಿ, ಅವರಿಂದ ತಪ್ಪಿಸಿಕೊಂಡು ಅಲೆಯುವಾಗ ಗಾಯಗೊಂಡು, ಮತ್ತೆ ಆದಿವಾಸಿಗಳ ಸಾನಿಧ್ಯವನ್ನು ಸೇರುವುದು, ಹೀಗೆ ಅತ್ಯಂತ ಕುತೂಹಲಕಾರಿಯಾದ ಕಥಾ ಬೆಳವಣಿಗೆ ಎರಡನೇ ಹಂತ.

ಇನ್ನು ಮುಂದಕ್ಕೆ ಆಧುನಿಕತೆ ಆದಿವಾಸಿಗಳ ಜೀವನದಲ್ಲಿ ಬಿರುಗಾಳಿಯಂತೆ ಎಗರಿ ಅವರ ಬದುಕನ್ನೆ ಅಲ್ಲೋಲಕಲ್ಲೋಲ ಮಾಡುತ್ತದೆ. ವನ್ಯ ಜೀವಿ ಸಂರಕ್ಷಣಾ ಕಾಯಿದೆ ಜಾರಿಗೆ ಬರುತ್ತದೆ. ಜಲವಿದ್ಯುತ್ ಯೋಜನೆಯನ್ನು ರೂಪಿಸಿದ ಸರ್ಕಾರ ಅಲ್ಲೊಂದು ಬೃಹತ್ ಅಣೆಕಟ್ಟೆಯ ನಿರ್ಮಾಣದಲ್ಲಿ ತೊಡಗುತ್ತದೆ. ಕೃಷಿಗೆ ಪ್ರಾಧಾನ್ಯ ಕೊಟ್ಟದ್ದರಿಂದಲೂ ಕಾಡು ಸಂಕುಚಿತಗೊಳ್ಳುತ್ತದೆ. ಇದರಿಂದ ಆದಿವಾಸಿಗಳ ಬದುಕು ಅಸಹನೀಯವಾಗುತ್ತದೆ. ಅವರು ಬೇರೊಂದು ಕಡೆ ತಮ್ಮ ವಾಸ್ತವ್ಯವನ್ನು ಕಂಡುಕೊಳ್ಳಬೇಕಾಗಿ ಬಂದಾಗ ನಿಜಕ್ಕೂ ಕಂಗಾಲಾಗುತ್ತಾರೆ. ಹೊಸ ಪರಿಸರಕ್ಕೆ ಹೊಂದಿಕೊಳ್ಳಲಾರದ ತಂಡದ ಹಿರಿಯ ಅಜ್ಜ ಕೋಡನ್ ಈ ಕೊರಗಿನಲ್ಲಿಯೇ ಅಸು ನೀಗುತ್ತಾನೆ. ಮುಂದೆ ಆತನ ಅಂತ್ಯಕ್ರಿಯಾ ವಿಧಿಗಳು ಆದಿವಾಸಿ ನಂಬಿಕೆಗಳಂತೆ ನಡೆದು, ಜೀವಂತ ಪಳಯುಳಿಕೆಗಳಂತೆ ಗೋಚರವಾಗುತ್ತವೆ.

ಅಷ್ಟೊತ್ತಿಗಾಗಲೇ ಮುದಿಯಾಗುತ್ತಿದ್ದ ಮೋಜ್‌ನನ್ನು ಪರ್ವತಾಗ್ರದ ಕಡೆಗೆ ಅಟ್ಟಲು ಆದಿವಾಸಿಗಳು ನಿರ್ಧರಿಸುತ್ತಾರೆ. ಮೇಯಲು ಹೋಗಿದ್ದ ಮೋಜ್‌ನನ್ನು ಅಲ್ಲಿಂದತ್ತಲೇ ಬೆದರಿಸಿ ಓಡಿಸಬೇಕೆಂಬ ಆಲೋಚನೆ ಮಾಡಿಕೊಳ್ಳುತ್ತಿರುವಾಗಲೇ ಮೋಜ್ ಶಿಖರದಿಂದ ಆದಿವಾಸಿಗಳ ಗುಡಿಸಿಲುಗಳ ಕಡೆಗೆ ಇಳಿದು ಬರುತ್ತಿರುವುದನ್ನು ಕಂಡ ಹೆಂಗಸರು, ಮಕ್ಕಳಾದಿಯಾಗಿ ಆದಿವಾಸಿಗಳು ಬಂದು ನಿಲ್ಲುತ್ತಾರೆ.

"ಅವರನ್ನು ಸಮೀಪಿಸಿದ ಮೋಜ್ ಕೂಡಲೆ ನಿಂತಿತು. ಅದು ನಿಂತಿದ್ದ ಜನರನ್ನು ಸ್ವಲ್ಪ ಹೊತ್ತು ದಿಟ್ಟಿಸಿ ನೋಡಿತು. ಪ್ರತಿಯೊಬ್ಬರೂ ಉಸಿರು ಬಿಗಿ ಹಿಡಿದು ನೋಡತೊಡಗಿದರು. ಒಂದು ಮಗುವೂ ಸಹ ಕಮಕ್ ಎನ್ನಲಿಲ್ಲ. ಪರ್ವತಗಳ ಚೇತನವೇ ಅವರನ್ನು ಆಶೀರ್ವದಿಸಲು ಬಂದಂತಿತ್ತು ಆ ದೃಶ್ಯ. ನಂತರ ದೂರದಲ್ಲಿದ್ದ ಪರ್ವತಗಳ ಶಿಖರಗಳ ಕಡೆ ಮುಖ ಮಾಡಿ ಮೋಜ್ ನಿಧಾನವಾಗಿ, ಆಯಾಸದಿಂದ ಹೋಗತೊಡಗಿತು. ಆ ಜನರ ಗುಂಪಿನಲ್ಲಿ ಒದ್ದೆಯಾಗದ ಕಣ್ಣುಗಳೇ ಇರಲಿಲ್ಲ. ಕೆಲವರಂತೂ ಬಿಕ್ಕಿ ಬಿಕ್ಕಿ ಅತ್ತರು. ಜೇನು ಗುರುತಿನ ಮುದಿ ಮೇಕೆಯನ್ನು ಬೀಳ್ಕೊಡುವುದರೊಂದಿಗೆ ಮುಂದೆಂದೂ ಮರಳಿ ಬಾರದ ಶಕೆಯೊಂದನ್ನು ತಾವು ಬೀಳ್ಕೊಡುತ್ತಿದ್ದೇವೆ ಎಂಬುದನ್ನು ತೋಡರು ಅರಿತಿದ್ದರು.

ಎಂತಹ ಮಾರ್ಮಿಕ ಮಾತುಗಳಿವು! ಇದು ಮೂರನೆ ಹಂತ. ಇಲ್ಲಿಗೆ ಕಥೆ ಕೊನೆಗೊಳ್ಳುತ್ತದೆ.

ಗಮನಿಸಬೇಕಾದ ಕೆಲವು ಅಂಶಗಳು

ಹನ್ನೊಂದು ವಿಭಾಗಗಳ ಕ್ರಮದಲ್ಲಿ ಲೇಖಕರು ಕಥಾ ಹಂದರವನ್ನು ಬಿಡಿಸಿಟ್ಟಿದ್ದಾರೆ.

ಆಧುನಿಕ ಸಂಸ್ಕೃತಿ ಮತ್ತು ಆದಿವಾಸಿ ಸಂಸ್ಕೃತಿ ಮುಖಾಮುಖಿಯಾದಾಗ ಸಂಭವಿಸಬಹುದಾದ ಪರಿಣಾಮಗಳು.

ಆದಿವಾಸಿಗಳ ಜೀವನಕ್ರಮ, ನಂಬಿಕೆ, ಧರ್ಮ, ಸಂಪ್ರದಾಯಗಳನ್ನು ಕಥಾ ರೂಪದಲ್ಲಿ ಹಿಡಿದಿಟ್ಟಿರುವ ತಂತ್ರ ಸ್ತುತ್ಯವಾದುದು.

ಈ ಪುಸ್ತಕದ ಒಳಪುಟಗಳಲ್ಲಿ ಗೀತಾ ಗಂಗೋಪಾಧ್ಯಾಯ ಅವರ ಇಪ್ಪತ್ತು ವಿವಿಧ ಸುಂದರವಾದ ಚಿತ್ರಗಳಿದ್ದು ಪುಸ್ತಕದ ಪ್ರತಿಯೊಂದೂ ಅಧ್ಯಾಯದ ಪ್ರಥಮ ಪುಟದಲ್ಲಿರುವ ಮೇಕೆಯ ಚಿತ್ರ ಧ್ವನಿಪೂರ್ಣವಾಗಿದೆ.

ತೋಡಬಾಲಕರಿಬ್ಬರು, ಮೇಕೆ, ನಾಯಿ ಮತ್ತು ಕಾಡಿನ ಪರಿಸರದಿಂದ, ರಕ್ಷಾಪುಟಗಳು ಅಲಂಕೃತಗೊಂಡು ಸುಂದರವಾಗಿದೆ.

ಭತ್ತದ ಕತೆ—ಲೇಖಕ: ರಮೇಶದತ್ತಶರ್ಮ; ಅನುವಾದಕ: ಜಿ. ಆರ್. ರಂಗಸ್ವಾಮಯ್ಯ; ಪ್ರಕಾಶಕರು: ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ, ಎ-೫, ಗ್ರೀನ್ ಪಾರ್ಕ್, ಹೊಸದೆಹಲಿ-೧೧೦ ೦೧೬; ಮೊದಲ ಮುದ್ರಣ ೧೯೯೫; ಪುಟ ೬೪; ಬೆಲೆ ೯ ರೂ.

ಮನುಷ್ಯನ ಜೀವನಾಧಾರಕ್ಕೆ ಅನ್ನವೇ ಪ್ರಮುಖ ಎಂಬುದು ಸರ್ವವಿದಿತ. ಸಾಹಿತ್ಯದಲ್ಲಿ ಅನ್ನ ತನ್ನದೇ ಆದ ಸ್ಥಾನಗಳಿಸಿಕೊಂಡಿದೆ. ದ. ರಾ. ಬೇಂದ್ರೆ ಅವರ 'ಅನ್ನಾವತಾರ' ಕವನ ಅನ್ನದ ಪ್ರಧಾನ್ಯತೆ ಕುರಿತದ್ದೇ ಆಗಿದೆ.

ಭತ್ತದ ಕಥೆ, ಅನ್ನವನ್ನು ಕುರಿತ ಸರ್ವಜ್ಞನ ವಚನದಿಂದಲೇ ಪ್ರಾರಂಭವಾಗುತ್ತದೆ. ಅನ್ನದ ಮಹತ್ವವನ್ನು ವಿವರಿಸುತ್ತಾ, ಅದರ ಮೂಲ ಮತ್ತು ಅದಕ್ಕಿರುವ ವಿವಿಧ ಭಾಷೆಗಳಲ್ಲಿಯ ಹೆಸರು, ಗಮನ ಸೆಳೆಯುತ್ತಿದ್ದಂತೆ, ಅನ್ನ ಭಾರತದಿಂದ ಪ್ರಪಂಚದ ಇತರೆಡೆಗೆ ರವಾನೆಯಾದುದರ ಇತಿಹಾಸವನ್ನು ಲೇಖಕರು ಉಲ್ಲೇಖಿಸಿದ್ದಾರೆ.

ಭತ್ತದ ಪೈರಿನೊಳಗೆ ವಿಭಾಗದಲ್ಲಿ, ಭತ್ತದ ಪೈರು ತನಗೆ ಅಗತ್ಯವಾದ ಆಹಾರವನ್ನು ಹಿರಿಕೊಂಡು ಹೇಗೆ ಬೆಳೆಯುತ್ತದೆ ಎಂಬ ವಿಷಯವನ್ನು ವಿವರವಾಗಿ ತಿಳಿಸುತ್ತಾ, ಪೈರಿನ ವಿವಿಧ ಭಾಗಗಳ ಪರಿಚಯವನ್ನು ಕೊಡುತ್ತಾರೆ.

ಪ್ರಪಂಚದ ಎಲ್ಲಾ ಸಮಾಜಗಳಲ್ಲಿಯೂ ಭತ್ತಕ್ಕೆ ಅತ್ಯಂತ ಗೌರವ ಸ್ಥಾನವನ್ನು ನೀಡಲಾಗಿದೆ. ಜನಪ್ರಿಯವಾದ ಈ ಧಾನ್ಯದಲ್ಲಿ ಅತಿಮಾನವಗುಣವನ್ನು ಕಂಡು, ಪೂಜ್ಯ ಭಾವನೆಯನ್ನು ಹೊಂದಿದ್ದಾರೆ.

ಪೂರಕವಾಗಿ ನಂಬಿಕೆಗನುಗುಣವಾಗಿ ಚಿಕ್ಕ ಚಿಕ್ಕ ಕಥೆಗಳನ್ನು ಉಲ್ಲೇಖಿಸಿದ್ದಾರೆ.

ಭತ್ತ ಸಂಶೋಧನಾ ಜಗತ್ತು ಈ ಪುಸ್ತಕದ ಪ್ರಧಾನವಾದ ಅಧ್ಯಾಯ ಬದಲಾದ ಪರಿಸ್ಥಿತಿಗೆ ಅನುಗುಣವಾದ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಸೂಕ್ತ ಮಾರ್ಗದರ್ಶಕ ಭತ್ತ ಸಂಶೋಧನಾ ಸಂಸ್ಥೆ ಮೊದಲು ಜಪಾನಿನಲ್ಲಿ ಪ್ರಾರಂಭವಾಯಿತು ಮತ್ತು ಭಾರತದಲ್ಲಿ ೧೯೦೦ರ ಬಳಿಕ ಪ್ರಾರಂಭವಾದುದರ ಇತಿಹಾಸವನ್ನು ಕೊಟ್ಟಿದ್ದಾರೆ.

ಪ್ರಸಿದ್ಧ ಅಂತರರಾಷ್ಟ್ರೀಯ ಭತ್ತ ಸಂಶೋಧನಾಸಂಸ್ಥೆ 'ಇರ್ರಿ' ಜನ್ಮ ತಳೆದುದನ್ನು ಮತ್ತು ಅದರ ಮಹತ್ವವನ್ನು ವಿವರಿಸುವ ಪ್ರಯತ್ನ ಇಲ್ಲಿದೆ.

ಭಾರತದಲ್ಲಿಯೂ ಪ್ರನಾಳದಲ್ಲಿ ರೂಪಿಸಿದ ಭತ್ತ ಮತ್ತು ಸಂಕರ ಭತ್ತದ ತಳಿಗಳನ್ನು ರೂಪಿಸುವ ಪ್ರಯತ್ನಗಳು, ಭತ್ತದ ತಳಿಗಳ ಪರಿಚಯ, ಭತ್ತದ ಕೃಷಿಗೆ ಬೇಕಾಗುವ ಕೃಷಿ ಯಂತ್ರಗಳು, ಕೀಟನಾಶಕಗಳು ಇತ್ಯಾದಿಯಾಗಿ ವಿವರಿಸುವ ವಿಷಯಗಳು ಗಮನಾರ್ಹ.

ಕುಯಿಲಿನ ಹಂತಗಳಾದ ಒಕ್ಕಣೆ, ತೂರುವುದು, ಒಣಗಿಸುವುದು, ಕುಟ್ಟುವುದು, ಮಿಲ್ ಮಾಡಿಸುವುದು ಇತ್ಯಾದಿ ವಿಷಯಗಳನ್ನು ವಿವರಿಸುತ್ತಾ ಸಾಂಪ್ರದಾಯಿಕ ಮತ್ತು ಯಾಂತ್ರೀಕೃತ ವಿಧಾನಗಳ ಪರಸ್ಪರ ಹೋಲಿಕೆಯ ಯತ್ನ ಸ್ತುತ್ಯವಾದುದು.

ಕುಸುಬಲಕ್ಕಿ ಪೌಷ್ಟಿಕಾಂಶವನ್ನು ಕುರಿತ ವಿವರಣೆ ಸಮಂಜಸವಾದುದು.

ಇನ್ನು ಕುಯಿಲಿನ ವಿವಿಧ ಹಂತಗಳನ್ನು ದಾಟಿ, ಭತ್ತವು ಆಹಾರವಾಗಿ ಪರಿವರ್ತನೆಗೊಂಡು, ರುಚಿಕರ ವಿವಿಧ ಭಕ್ಷ್ಯಗಳಾಗಿ ಉಪಯೋಗವಾಗುವ ವಿಧಾನಗಳನ್ನು ಲೇಖಕರು ಸ್ವಾರಸ್ಯಕರವಾಗಿ ತಿಳಿಸುತ್ತಾರೆ.

ನಮ್ಮಲ್ಲಿ ಭತ್ತದಿಂದ ಅಕ್ಕಿಯನ್ನು ಬೇರ್ಪಡಿಸಿ, ತೌಡನ್ನು ನಿರ್ಲಕ್ಷಿಸುವುದು ಸರ್ವೇಸಾಮಾನ್ಯ. ಅದೇ ತೌಡನ್ನು ವಿವಿಧ ಕೆಲಸಗಳಲ್ಲಿ ಹೇಗೆ ಸದುಪಯೋಗಪಡಿಸಿಕೊಳ್ಳಬಹುದೆಂಬ ವಿವರಣೆ ಅತ್ಯಂತ ಸಮರ್ಪಕವಾದುದು.

"ರೈತರು ಏಳುಸಾವಿರ ವರ್ಷಗಳಿಂದಲೂ ಭತ್ತವನ್ನು ಬೆಳೆಯುತ್ತಿದ್ದಾರೆ. ನೀವು ಊಟಮಾಡುವಾಗ ನಿಮ್ಮ ಮುಂದೆ ತಟ್ಟೆಯಲ್ಲಿರುವ ಅನ್ನಕ್ಕಾಗಿ ಎಷ್ಟು ಶ್ರಮ ವಹಿಸಿದ್ದಾರೆ ಎಂಬುದನ್ನು ತಿಳಿದುಕೊಂಡು ಅದಕ್ಕೆ ನೀಡಬೇಕಾದ ಗೌರವ ಮರ್ಯಾದೆಗಳನ್ನು ನೀಡಿ, ಎಂಬ ಹೇಳಿಕೆಯೊಂದಿಗೆ ಕಥೆ ಮುಕ್ತಾಯವಾಗುತ್ತದೆ."

'ಭತ್ತದ ಕಥೆ' ಭತ್ತದ ಇತಿಹಾಸ ಮತ್ತು ಅದರ ಜೀವಶಾಸ್ತ್ರವನ್ನು ಸುಲಲಿತವಾಗಿ ತಿಳಿಯಾದ ಭಾಷೆಯಲ್ಲಿ ನಿರೂಪಿಸುತ್ತದೆ. ಅಲ್ಲಲ್ಲಿ ಬರುವ ಉಪಕಥೆಗಳು ಊಟಕ್ಕೆ ಉಪ್ಪಿನಕಾಯಿ ಅನುಭವವನ್ನು ತಂದುಕೊಡುತ್ತವೆ. ಅಲ್ಲದೆ ಕೀಟನಾಶಕದ ಮಹತ್ವವನ್ನು ಕುರಿತ ವ್ಯಂಗ್ಯ ಚಿತ್ರಕಥೆಯ ನಿರೂಪಣೆ, ಅವಶ್ಯಕತೆ ಇಲ್ಲದಿದ್ದರೂ, ಆಸಕ್ತಿ ಕೆರಳಿಸುತ್ತದೆ.

ಸಹನಾಪಾಲ್ ಅವರ ಇಪ್ಪತ್ತೊಂದು ಚಿತ್ರಗಳು ಒಳಪುಟಗಳನ್ನು ಅಲಂಕರಿಸಿವೆ. ಒಂಭತ್ತು ಅಧ್ಯಾಯಗಳಲ್ಲಿ ನಿರೂಪಿತವಾದ "ಭತ್ತದ ಕಥೆಯ" ರಕ್ಷಾ ಪುಟಗಳು, ಭತ್ತದ ಬಂಗಾರದ ವರ್ಣದ ತೆನೆಗಳಿಂದ ಶೋಭೆಗೊಂಡಿವೆ.

ರಸ್ಟಿಯ ಸಾಹಸಗಳು—ಲೇಖಕರು: ರಸ್ಕಿನ್ ಬಾಂಡ್; ಅನುವಾದಕರು: ಅಹಲ್ಯಾ ಚಿಂತಾಮಣಿ; ಪ್ರಕಾಶಕರು: ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ, ಎ-೫, ಗ್ರೀನ್ ಪಾರ್ಕ್, ಹೊಸ ದೆಹಲಿ-೧೧೦೦೧೬; ಮೊದಲ ಮುದ್ರಣ: ೧೯೯೫; ಪುಟ: ೯೬; ಬೆಲೆ: ೨೦ ರೂ.

ಲೇಖಕರು ಕಥೆಯನ್ನು ಎರಡು ಪ್ರಧಾನ ಭಾಗಗಳನ್ನಾಗಿ ವಿಂಗಡಿಸಿದ್ದಾರೆ.

೧. ಅಂಕಲ್ ಕೆನ್.

೨. ಪಲಾಯನದ ಸಾಹಸ ಯಾತ್ರೆ.

ಅಂಕಲ್ ಕೆನ್ ವಿಭಾಗದಲ್ಲಿ ರಸ್ಟಿ ತನ್ನ ತಂದೆ-ತಾಯಿಗಳ ಬಳಿ ರಜಾ ದಿನಗಳನ್ನು ಕಳೆಯುವ ಪ್ರಸ್ತಾಪವಿದ್ದು, ಪಲಾಯನದ ಸಾಹಸ ಯಾತ್ರೆ ವಿಭಾಗದಲ್ಲಿ ಅವರನ್ನು ಕಳೆದುಕೊಂಡು ಅನಾಥನಾಗಿದ್ದ ಪ್ರಸ್ತಾಪ ಸಂದೇಹಕ್ಕೆ ಎಡೆಮಾಡಿಕೊಡುತ್ತದೆ.

ಅಂಕಲ್ ಕೆನ್ ರಸ್ಟಿಯ ಸಾಹಸಗಳಿಗೆ ಪೀಠಿಕೆಯನ್ನು ಹಾಕಿಕೊಡುತ್ತದೆ. ಅಲ್ಲಿ ರಸ್ಟಿಯ ಸಾಹಸಗಳ ಚಿತ್ರಣವಿಲ್ಲದಿದ್ದರೂ. ಅವನ ವ್ಯಕ್ತಿತ್ವದ ಪರಿಚಯವನ್ನು ಮಾಡಿ ಕೊಡುತ್ತದೆ. ಈ ವಿಭಾಗದ; ಅಜ್ಜಿಯ ಅದ್ಭುತ ಅಡಿಗೆ ಮನೆ, ಅಜ್ಜಿಯ ಕೈ ಉಪ್ಪಿನಕಾಯಿ ಈ ಉಪ ವಿಭಾಗಗಳು ವಿವಿಧ ಭಕ್ಷ್ಯ ಭೋಜ್ಯಗಳ ಪರಿಚಯ ಮಾಡಿಕೊಟ್ಟು, ಅಂದಿನ ಕಾಲದ ಜೀವನದ ಮೇಲೆ ಸ್ವಲ್ಪ ಬೆಳಕನ್ನು ಹರಿಯಿಸುತ್ತದೆ. ಈ ಕಥೆಯು ಭಾರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಸ್ವಲ್ಪ ಪೂರ್ವದ್ದು ಎಂದು ಕಥಾ ನಿರೂಪಣೆಯಲ್ಲಿ ವ್ಯಕ್ತವಾಗುತ್ತದೆ.

"ಅಂಕಲ್ ಕೆನ್" ಕಥೆಗಳು ರಸ್ಟಿಯ ಸಾಹಸಗಳಿಗೆ ಪೂರಕವಲ್ಲದಿದ್ದರೂ, ಆ ಕಥೆಗೆ ಪರಿಶಿಷ್ಟವಾಗಿ ಬಂದಿದೆ. ಅಲ್ಲದೆ ಅಂಕಲ್ ಕೆನ್‌ನ ವಿವಿಧ ಮುಖಗಳನ್ನು ಬಿಂಬಿಸುವ ಹಾಸ್ಯ ಲೇಖನಗಳು ಪುಸ್ತಕದ ೩೬ ಪುಟಗಳನ್ನು ಆಕ್ರಮಿಸಿಕೊಂಡಿವೆ. ಭೋಜನಪ್ರಿಯನಾಗಿ, ಸೋಮಾರಿಯಾಗಿ, ಕ್ರಿಕೆಟ್‌ಪಟುವಾಗಿ, ರಂಜಿಸಿದ ಅಂಕಲ್ ಕೆನ್ ೩೭ನೇ ಪುಟದಿಂದ ಸಂಪೂರ್ಣವಾಗಿ ನಿರ್ಗಮಿಸುತ್ತಾರೆ. ಆದ್ದರಿಂದ ಇದೊಂದು ಭಾಗವನ್ನು ಸ್ವತಂತ್ರ ಭಾಗ ಎಂದು ಪರಿಗಣಿಸಬಹುದು.

ಪಲಾಯನದ ಸಾಹಸ ಯಾತ್ರೆ

ಈ ಪ್ರಧಾನ ವಿಭಾಗದಲ್ಲಿ ಹತ್ತು ಉಪ ವಿಭಾಗಗಳಿವೆ. ಈ ಭಾಗದಲ್ಲಿಯೇ ರಸ್ಟಿಯ ಸಂಪೂರ್ಣ ಪರಿಚಯ ನಮಗಾಗುತ್ತದೆ. ರಸ್ಟಿ ತನ್ನ ತಂದೆ-ತಾಯಿಗಳನ್ನು ಕಳೆದು ಕೊಂಡು, ತನ್ನ ಚಿಕ್ಕಪ್ಪನ ಮನೆಯಲ್ಲಿ ತುಂಟನಾಗಿ ಬೆಳೆಯುತ್ತಿದ್ದುದರಿಂದ ಅವನನ್ನು ಒಂದು ಬೋರ್ಡಿಂಗ್ ಶಾಲೆಗೆ ಸೇರಿಸಲಾಗುತ್ತದೆ. ಅಲ್ಲದೆ ಚಿಕ್ಕಪ್ಪನೂ ರಸ್ಟಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿರಲಿಲ್ಲವೆಂಬ ಅಂಶವನ್ನೂ ಗಮನಿಸಬಹುದು.

ಬೋರ್ಡಿಂಗ್ ಶಾಲೆಯ ಅವ್ಯವಸ್ಥೆಯಿಂದ ಬೇಸರಗೊಂಡ ರಸ್ಟಿ, ತನ್ನ ಸಹಪಾಠಿ ದಲ್‌ಜೀತನೊಡನೆ ಅಲ್ಲಿಂದ ಪಲಾಯನ ಮಾಡುವ ಯೋಜನೆಯನ್ನು ರೂಪಿಸುತ್ತಾನೆ. ಒಂದು ಹಡಗಿನ

ಕ್ಯಾಪ್ಟನ್ ಆಗಿದ್ದ ತನ್ನ ಚಿಕ್ಕಪ್ಪನೊಂದಿಗೆ ದೇಶ ಸುತ್ತುವ ಸಲುವಾಗಿ ಆ ಹುಡುಗರು ಪಲಾಯನ ತಂತ್ರವನ್ನು ಕಂಡುಕೊಂಡು ಚಿಕ್ಕಪ್ಪನನ್ನು ಸೇರುವ ಹವಣಿಕೆಯನ್ನು ಹಮ್ಮಿಕೊಳ್ಳುತ್ತಾರೆ. ಅದೇ ಸಮಯಕ್ಕೆ ತನ್ನ ಚಿಕ್ಕಪ್ಪನು, ಸಾವಿರಾರು ಮೈಲು ದೂರದ ಜಾಮ್ ನಗರದ ಬಂದರುವಿಗೆ ಬರುವ ಸೂಚನೆಯನ್ನು ರಸ್ಟಿ ಗೆಳೆಯನಿಗೆ ತಿಳಿಸುತ್ತಾನೆ.

ರಸ್ಟಿ ಮತ್ತು ದಲ್‌ಜೀತ್ ಇಬ್ಬರೂ ವಸತಿ ಶಾಲೆಯಿಂದ ಪಲಾಯನಗೈದು, ಪರ್ವತ ತಪ್ಪಲಿನ ಒಂದು ಧಾಬಾದ ಬಳಿ ರಾತ್ರಿಯನ್ನು ಕಳೆದು, ಸೂರ್ಯೋದಯದ ನಂತರ ಧಾಬಾವಾಲಾನಿಂದ ಟೀ ಕೇಳಿ ಪಡೆದು, ಆತನ ಸಂಭಾಷಣೆಯಿಂದ ಜಾಗೃತರಾಗಿ ಡೆಹ್ರಾ ನಿಲ್ದಾಣಕ್ಕೆ ಹೋಗುವ ಬದಲಾಗಿ, ಅಲ್ಲಿಂದ ಹತ್ತು ಮೈಲು ದೂರದ ರಾಯ್‌ವಾಲಾ ಸ್ಟೇಷನ್ನಿಗೆ ನಡೆದು ಹೋಗಲು ನಿರ್ಧರಿಸುತ್ತಾರೆ.

ಹುಡುಗರು ದುರ್ಗಮವಾದ ಕಾಡಿನ ಹಾದಿಯಲ್ಲಿ ನಡೆದು ರಾಯ್‌ವಾಲಾ ಸ್ಟೇಷನ್ ತಲುಪಬೇಕಾಗುತ್ತದೆ. ಅಲ್ಲಿಂದಲೇ ಅವರ ಸಾಹಸ ಪ್ರಯಾಣ ಪ್ರಾರಂಭವಾಗುತ್ತದೆ. ಕಾಡಿನ ಮಧ್ಯೆ ಹುಲಿ ಎದುರಾಗಿ, ಅದರಿಂದ ಪಾರಾಗುವುದು, ರಾಯ್‌ವಾಲಾ ಸ್ಟೇಷನ್ನಿನಲ್ಲಿ ಕಾದಿದ್ದ ಗಣಿತ ಉಪಾಧ್ಯಾಯರಿಂದ ಸ್ವಲ್ಪದಲ್ಲಿಯೇ ಪಾರಾಗಿ ಹೋಗುವುದು, ಜೈಪುರದ ಹೊರವಲಯದಲ್ಲಿ ಡಕಾಯಿತರ ಮಧ್ಯೆ ಬಂಧಿಗಳಾಗಿ ನೋವನ್ನು ಅನುಭವಿಸಿದ್ದು, ಅನಂತರ ಹಲವಾರು ತೊಂದರೆಗಳನ್ನೂ ಅನುಭವಿಸಿ ಜಾಮ್ ನಗರದ ಹೊರವಲಯದ ಬಂದರಿಗೆ ಬಂದಾಗ ಕೇವಲ ಐದೇ ನಿಮಿಷಗಳ ಅಂತರದಲ್ಲಿ ಹಡಗು ಹೊರಟು ಹೋದಾಗ ಹುಡುಗರಿಗಾದ ನಿರಾಶೆ ಅಷ್ಟಿಷ್ಟಲ್ಲ. ವಿಧಿಯಿಲ್ಲದೆ ಶಾಲೆಗೆ ಹಿಂದಿರುಗುವ ಮನಸ್ಸು ಮಾಡುತ್ತಾರೆ.

ಇದೊಂದು ರಸ್ಟಿಯ ಆತ್ಮ ಕಥೆ ಇದ್ದಂತೆ. ಪ್ರಾರಂಭದಿಂದ ಕೊನೆಯವರೆಗೂ ರಸ್ಟಿ ತನ್ನ ಕಥೆಯನ್ನು ಹೇಳುತ್ತಾ ಹೋಗುತ್ತಾನೆ. ಇದೊಂದು ಸಚಿತ್ರ ಕಥೆ. ಬುದ್ಧ ಸತ್ವಬಸು ಅವರ ಹದಿನೇಳು ಚಿತ್ರಗಳಿದ್ದು, ಪ್ರತಿಯೊಂದು ಅಧ್ಯಾಯದ ಅಂತ್ಯದಲ್ಲಿ, ಆ ಅಧ್ಯಾಯದಲ್ಲಿ ಪ್ರಮುಖವೆನಿಸಿದ ಸನ್ನಿವೇಶ ವಸ್ತು ಚಿತ್ರವನ್ನು ಚಿಕ್ಕದಾಗಿ ಕೊಟ್ಟಿರುವುದರಿಂದ ಪುಸ್ತಕ ಆಕರ್ಷಕವೆನಿಸುತ್ತದೆ. ಒಂದೆರಡು ಕಡೆ ಕಾಗುಣಿತ ದೋಷವಿದ್ದು, ಉಳಿದೆಲ್ಲಾ ಮುದ್ರಣ ಅಂದವಾಗಿದ್ದು ರಕ್ಷಾಪುಟ ಗಮನ ಸೆಳೆಯುತ್ತದೆ.

ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಅವರು ಪ್ರಕಟಿಸಿದ "ತೋಡಬಾಲಕ ಮತ್ತು ಕರಿಯ ಮೇಕೆ", "ಭತ್ತದ ಕಥೆ" ಮತ್ತು "ರಸ್ಟಿಯ ಸಾಹಸಗಳು" ಪುಸ್ತಕಗಳಿಗೆ ಒಳ್ಳೆಯ ಗುಣಮಟ್ಟದ ಕಾಗದವನ್ನು ಬಳಸಿ ಅಂದವಾಗಿ ಮುದ್ರಿಸಿದ್ದಾರೆ.

ರಂಗಧಾಮಯ್ಯ

ಓದುಗರ ಅನಿಸಿಕೆಗಳು

೯೬ನೇ ಜೂನ್ 'ಪುಸ್ತಕ ಪ್ರಪಂಚ' ಸಂಚಿಕೆ ಸುಂದರ ಮತ್ತು ಅರ್ಥಪೂರ್ಣವಾಗಿ ಬಂದಿದೆ. ಮಣ್ಣಿನಮಗ ದೇವೇಗೌಡರು ಪ್ರಧಾನಿಯಾಗಿ ಕರ್ನಾಟಕದ ಕೀರ್ತಿಯನ್ನು ಐತಿಹಾಸಿಕ ಕಾರಣಗಳಿಂದ ಸ್ಮರಣೀಯಗೊಳಿಸಿದ್ದಾರೆ. ಪತ್ರಿಕೆಯಲ್ಲಿ ದೇವೇಗೌಡರನ್ನು ಕುರಿತ ದೇಜಗೌರ ಅಭಿನಂದನಪತ್ರ ಮೆಚ್ಚಿಕೆಯಾಯ್ತು. ಜಾನಪದ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಕಂಸಾಳೆ ಮಹದೇವಯ್ಯನವರು ಕೀರ್ತಿಶೇಷರಾದದ್ದು ಸಾಂಸ್ಕೃತಿಕ ಲೋಕಕ್ಕೆ ದೊಡ್ಡನಷ್ಟ. ಅವರ ಬಗ್ಗೆ ಡಾ|| ಹಾ. ತಿ. ಕೃಷ್ಣೇಗೌಡರ ಲೇಖನ ಚಿಕ್ಕದಾದರೂ ಚೊಕ್ಕವಾಗಿತ್ತು. ಕಂಸಾಳೆ ಕಲೆಯನ್ನು ಮಹದೇವಯ್ಯನವರು ಅಂತರರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ದವರು. ಮಹದೇವಯ್ಯನವರ ಜೀವಿತದ ಕಾಲದಲ್ಲಿ ಅವರ ಕಥೆಯ ಪ್ರದರ್ಶನ ಸಂದರ್ಭದಲ್ಲಿ ಕಂಡುಂಡ ವಿಸ್ಮಯ, ಸಂಭ್ರಮಗಳು ಅವರ ಮಾತಿನಲ್ಲೇ ದಾಖಲಾಗಿ 'ಪುಸ್ತಕ ಪ್ರಪಂಚ' ಓದುಗರಿಗೆ ದೊರೆತಿದ್ದರೆ ಅದೊಂದು ದೊಡ್ಡ ಕೊಡುಗೆಯಾಗುತ್ತಿತ್ತು. ಆ ಕೊರತೆಯನ್ನು ಮಹದೇವಯ್ಯನವರ ಮಕ್ಕಳು, ಮೊಮ್ಮಕ್ಕಳು ತುಂಬುವರೆಂದು ಆಶಿಸುತ್ತೇನೆ.

ಅರುಣಮುಧೋಳ್‌ರವರ ಕತೆ 'ಶ್ಯಾನುಭೋಗರಪಟ್ಟು' ದಾಂಪತ್ಯಕ್ಕೆ ಕಾಲಿರಿಸುವ ಎಲ್ಲರ ಪ್ರಾತಿನಿಧ್ಯವನ್ನು ಅರ್ಥವತ್ತಾಗಿ ವ್ಯಕ್ತಪಡಿಸಿದೆ. ಸುಸಂಸ್ಕೃತ ಪರಿಸರದಲ್ಲಿ ವಯಸ್ಸಿಗೆ ಬಂದ ಮಕ್ಕಳ ಲಗ್ನ ನಿರ್ಧರಿಸುವಲ್ಲಿ ಹಿರಿಯರು ವಹಿಸಬೇಕಾದ ಎಚ್ಚರ, ಹಸೆಮಣೆ ಏರುವವರಿಗೆ ಇರುವ ಕುತೂಹಲ, ಸಂಕೋಚ, ವಿಸ್ಮಯಗಳನ್ನು ಚೆನ್ನಾಗಿ ಬರಹದಲ್ಲಿ ತಂದಿದ್ದಾರೆ. ಮುಧೋಳ್‌ರವರು ಆತ್ಮೀಯ ಸನ್ನಿವೇಶಗಳನ್ನು ಸಂವಾದದಲ್ಲಿ ತರುವಾಗ ಉತ್ತರ ಕರ್ನಾಟಕದ ಆಡುಭಾಷೆಯಲ್ಲೇ ಹಿಡಿದಿಟ್ಟಿದ್ದರೆ ಅದು ಇನ್ನಷ್ಟು ಮೆರುಗುಬರುತ್ತಿತ್ತು.

ಶಾಂತಾಮಣಿಯವರು ಅನುವಾದಿಸಿದ ಮಹದೇವಿ ವರ್ಮಾರ ಹಿಂದಿಕಥೆ 'ಕುಂಬಾರ ಬದಲು' ಉತ್ತಮವಾಗಿತ್ತು. ಬದುಕು, ಸಾಹಿತ್ಯ, ಸೌಂದರ್ಯಗಳ ಪರಸ್ಪರ ವಿನಿಮಯವನ್ನು ಕೇವಲ ಶಿಷ್ಟ ಸಮಾಜದಲ್ಲಷ್ಟೇ ಕಾಣಲಾಗುವುದಲ್ಲ. ಬಡವರಲ್ಲೂ ಅವು ಮುಪ್ಪುರಿಗೊಂಡಿರುವ ಅಂಶವನ್ನು ಈ ಕಥೆಯಲ್ಲಿ ಕಾಣಬಹುದಾಗಿದೆ, ಬದಲೂ ಹಾಗೂ ಅವನ ಪತ್ನಿ ರಾಧಿಕಾಳ ಬಡತನವನ್ನು ಸ್ವಾಭಿಮಾನವನ್ನು ಚಿತ್ರಿಸುವ ವರ್ಮಾ, ಅವರಲ್ಲಿರುವ ಸುಪ್ತ ಕಲಾಪ್ರತಿಭೆಯನ್ನು ಅಂತ್ಯದಲ್ಲಿ ಸಹಜವಾಗಿ ತಂದಿದ್ದಾರೆ. ಸತ್ಯ, ಸೌಂದರ್ಯಗಳನ್ನು ಅಕ್ಷರಗಳಲ್ಲಿ ಹಿಡಿದಿಡುವ ಪ್ರಯತ್ನ ಇಲ್ಲಿ ಅಸಾಮಾನ್ಯವಾದದ್ದು.

ಶೋಭಾ
ವಿದ್ಯಾರಣ್ಯಪುರ, ಮೈಸೂರು

ಭಾರತದ ಪ್ರಧಾನಿ ಶ್ರೀ ಹೆಚ್. ಡಿ. ದೇವೇಗೌಡ ಅವರ ಹಸನ್ಮುಖ ರಕ್ಷಾಪುಟದ ಜೂನ್ ೧೯೯೬ರ 'ಪುಸ್ತಕ ಪ್ರಪಂಚ'ದಲ್ಲಿ ಪ್ರೊ॥ ದೇ. ಜವರೇಗೌಡ ಅವರ 'ನೂತನ ಪ್ರಧಾನಿಗೆ ಜಯವಾಗಲಿ' ಮತ್ತು 'ಹನ್ನೊಂದನೇ ಅತಂತ್ರ ಲೋಕ ಸಭೆ' ಈ ಎರಡೂ ಲೇಖನಗಳು ವಿಚಾರ ಪ್ರಚೋದಕವಾಗಿವೆ. ಹನ್ನೊಂದನೆಯ ಲೋಕ ಸಭೆಯ ಚಿತ್ರವನ್ನು ತೌಲನಿಕವಾಗಿ ವಿಮರ್ಶಿಸುತ್ತಾ ಪ್ರಸಕ್ತ ಲೋಕ ಸಭೆ ಐದು ವರ್ಷ ಉಳಿದದ್ದಾದರೆ ಅದೊಂದು ಪವಾಡವಾದೀತು; ಒಂದೆರಡು ವರ್ಷ ನಡೆದರೂ ಭಾರತೀಯರು ಬೆನ್ನು ತಟ್ಟಿಕೊಳ್ಳಬಹುದಾದ ಸಂಭ್ರಮದ ಸಂಗತಿ ಎಂದೇ ಹೇಳಬಹುದು" ಎಂದು ಪ್ರವಾದಿಯಾಗಿ ಭವಿಷ್ಯ ನುಡಿದಿದ್ದಾರೆ. ಪುಸ್ತಕ ಪ್ರಪಂಚದಲ್ಲಿ ಇತ್ತೀಚೆಗೆ ರಾಜಕೀಯವೂ ಪ್ರಸ್ತಾಪವಾಗುತ್ತಿದ್ದು ಇದನ್ನು ದೇಜಗೌ ಅವರ ವಿಶಿಷ್ಟ ಗದ್ಯದಲ್ಲಿ ಓದುವುದೇ ಒಂದು ವಿಶೇಷ ಅನುಭವ. ಪುಸ್ತಕ ಪ್ರಪಂಚವು ಎಲ್ಲ ಆಯಾಮಗಳನ್ನು ಮೈದುಂಬಿಕೊಂಡು ನಿಗದಿಯಾದ ಕಾಲಕ್ಕೆ ತಪ್ಪದೇ ಕೈಸೇರುತ್ತಿದೆ. ಇದು ಹೀಗೆಯೇ ಮುಂದುವರಿಯಲಿ ಎಂದು ಹಾರೈಸುತ್ತೇನೆ.

ಶಂಕರಪಾಟೀಲ
ಯಲಬುರ್ಗ, ರಾಯಚೂರು ಜಿಲ್ಲೆ

* * *

೯೬ನೇ ಮೇ "ಪುಸ್ತಕ ಪ್ರಪಂಚ" ಸಂಚಿಕೆಯಲ್ಲಿ ೬೫ನೇ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರಾದ ಚನ್ನವೀರ ಕಣವಿಯವರ ಬಗ್ಗೆ ಚನಪ್ಪನವರು ಬರೆದ ಲೇಖನ ಸಂಕ್ಷಿಪ್ತನಾಗಿ ಬಂದಿದೆ. ಲೇಖನದಲ್ಲಿ ಚನ್ನಪ್ಪನವರು ಕಣವಿಯವರ ವ್ಯಕ್ತಿಚಿತ್ರವನ್ನಷ್ಟೆ ತಿಳಿಸಿ ಅವರ ಕೃತಿಗಳನ್ನು ಸೂಚ್ಯವಾಗಿ ತಿಳಿಸಿರುತ್ತಾರೆ. ಮುಖಪುಟದಲ್ಲಿ ಮುದ್ರಿತವಾದ ಕಣವಿಯವರ ಭಾವ ಚಿತ್ರ ನೋಡಿ ಸಂತೋಷವಾಯ್ತು, ಆದರೆ ಅದಕ್ಕೆ ಪೂರಕವಾಗಿ ೨-೩ ಲೇಖನಗಳಲ್ಲಿ ಕಣವಿಯವರ ಸಮಗ್ರ ಕೃತಿಗಳನ್ನು ಪರಿಚಯಿಸಿದ್ದರೆ ಚೆನ್ನಾಗಿತ್ತು. ಇನ್ನು ೬೫ನೇ ಸಾಹಿತ್ಯ ಸಮ್ಮೇಳನ ಹಾಸನದಲ್ಲಿ ನಡೆಯುವವರೆಗೆ "ಪುಸ್ತಕ ಪ್ರಪಂಚದಲ್ಲಿ ಈ ಕೊರತೆಯನ್ನು ತುಂಬಲಿ ಎಂದು ಆಶಿಸುತ್ತೇನೆ,

ಜೆ. ಮಮತಾ
ಉದಯಗಿರಿ, ಮೈಸೂರು

ಈ ಸಂಚಿಕೆಯ ಲೇಖಕರು—

ಸರ್ವಶ್ರೀಗಳಾದ—

೧. ಡಾ|| ದೇ. ಜವರೇಗೌಡ
ವಿಶ್ರಾಂತ–ಕುಲಪತಿಗಳು
'ಕಲಾ ನಿಲಯ', ಕಾಳಿದಾಸ ರಸ್ತೆ
ಜಯಲಕ್ಷ್ಮೀಪುರಂ, ಮೈಸೂರು–೫೭೦೦೧೨

೨. ಡಾ|| ಅಂಬಳಿಕೆ ಹಿರಿಯಣ್ಣ
ಪ್ರಾಧ್ಯಾಪಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ
ಮೈಸೂರು–೫೭೦ ೦೦೬

೩. ಜಿ. ಟಿ. ನಾರಾಯಣರಾವ್
ನಂ. ೮, 'ಅತ್ರಿ' ಕಾಮಾಕ್ಷಿ ಆಸ್ಪತ್ರೆ ರಸ್ತೆ,
ಸರಸ್ವತೀಪುರ
ಮೈಸೂರು–೫೭೦ ೦೦೯

೪. ಸಿ. ನಾಗಣ್ಣ, ಪ್ರಾಧ್ಯಾಪಕರು
ಇಂಗ್ಲೀಷ್ ವಿಭಾಗ
ಮಹಾರಾಜ ಕಾಲೇಜು
ಮೈಸೂರು

೫. ಎಂ. ಎಸ್. ಲಕ್ಷ್ಮಣಾಚಾರ್
೨೫೪, ವಿಶ್ವರೂಪ (ಮಹಡಿ)
೫ನೇ ಮುಖ್ಯ ರಸ್ತೆ, ೧೪ನೇ ಅಡ್ಡ ರಸ್ತೆ,
ಜಯನಗರ, ಮೈಸೂರು–೫೭೦ ೦೧೪

೬. ಮಾ. ವೆಂಕಟೇಶ್
ಎಂ–೬, ಗಂಗೋತ್ರಿ ಕ್ವಾಟರ್ಸ್ F
ಮಾನಸಗಂಗೋತ್ರಿ
ಮೈಸೂರು–೫೭೦ ೦೦೭

೭. ಎಸ್. ಆರ್. ಪಾಟೀಲ
ಸಾರ್ಟಿಂಗ್ ಕಛೇರಿ
ಆರ್.ಎಂ.ಎಸ್.
ಹೊಸಪೇಟೆ–೬೮೩ ೨೦೧

೮. ಸರಸ್ವತಿ ಬಡೆಕ್ಕಿಲ C/o ಬಿ. ಶ್ಯಾಮಸುಂದರಭಟ್ಟ
ಶಿಲ್ಪಿ ಬಿ. ಸಿ. ಶಿವಶಂಕರ್ ಬಿಲ್ಡಿಂಗ್
ಕೆಂಚನಕುಪ್ಪೆ ಗೇಟ್
ಬಿಡದಿ ಪೋ||
ರಾಮನಗರ ತಾಲ್ಲೂಕು–೫೬೨ ೧೦೯

೯. ಎಚ್. ಆರ್. ಚಂದ್ರವದನರಾವ್,
೨೮೭೭/೧೦, ೭ನೇ ಕಿರುವು
ಚಾಮುಂಡಿಪುರಂ
ಮೈಸೂರು–೫೭೦ ೦೦೪

೧೦. ರಂಗಧಾಮಯ್ಯ
ಬಿ–೯೪, ಸಿ.ಎಫ್.ಟಿ.ಆರ್.ಐ ಕಾಲೋನಿ
ಸಿ.ಎಫ್.ಟಿ.ಆರ್.ಐ.
ಮೈಸೂರು–೫೭೦ ೦೧೩

Reg. No. KRNN.29 / WPP 6

LICENCE No. 21
LICENCED TO POST WITH PAYMENT

Edited by Chandrashekhararadhya, Printed by A. D. Nanjunda Swamy, Printed & Published by Karnataka State Adult Education Council, 5/1, Vinoba Road, Manasa Gangothri, Mysore-570 006.
Phone : 512485